11.30 ಎ.ಎಂ.

ಅಧ್ಯಕ್ಷರು : ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನೂತನ ವಿಧಾನಸಭೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಈ ಗುರುತರವಾದ ಸ್ಥಾನಕ್ಕೆ ತಮ್ಮನ್ನು ಆಯ್ಕೆ ಮಾಡಿರುವುದು ನನಗೆ ಅತೀವ ಸಂತೋಷವನ್ನು ಉಂಟು ಮಾಡಿದೆ.

ಜನತಂತ್ರ ವ್ಯವಸ್ಥೆಯಲ್ಲಿ ಸಭಾಧ್ಯಕ್ಷರ ಪಾತ್ರ ಅತ್ಯಂತ ಪ್ರಮುಖವಾದುದು. ನೂತನವಾಗಿ ಈ ಶಾಸನ ಸಭೆಗೆ ಆಯ್ಕೆಯಾಗಿರುವ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಕೂಡ ನನ್ನ ಶುಭ ಕಾಮನೆಗಳನ್ನು ವ್ಯಕ್ತಪಡಿಸಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಕರ್ನಾಟಕ ರಾಜ್ಯ ಪ್ರಜಾಪ್ರಭುತ್ವದ ಅತ್ಯಂತ ಉನ್ನತವಾದಂಥ ಮೌಲ್ಯಗಳನ್ನು ಎತ್ತಿಹಿಡಿದು ಪ್ರತಿಪಾದನೆ ಮಾಡಿಕೊಂಡು ಬಂದಿರತಕ್ಕಂಥ ಭವ್ಯ ಪರಂಪರೆಗೆ ನಾವುಗಳೆಲ್ಲಾ ಸೇರಿದ್ದೇವೆ ಎನ್ನತಕ್ಕದನ್ನು ನಾವು ಕೃತಜ್ಞತೆಯಿಂದ ನೆನೆಯಬೇಕಾಗಿದೆ. ಈ ದೇಶದಲ್ಲಿ ಎಂದೂ ಇಲ್ಲದಂಥ ಕಾಲದಲ್ಲಿ ನಮ್ಮ ಹಳೇ ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳ ಸಭೆ ಅಸ್ತಿತ್ವದಲ್ಲಿತ್ತು. ಹಾಗೆಯೇ ವಿಧಾನಪರಿಷತ್ತು ಸಹ ಅಸ್ತಿತ್ವದಲ್ಲಿ ಇತ್ತು ಎನ್ನತಕ್ಕದ್ದನ್ನು ಜ್ಞಾಪಿಸಿಕೊಂಡಾಗ ಎಂಥ ಉಜ್ವಲವಾದ ಪರಂಪರೆಗೆ ನಾವು ಹಕ್ಕುದಾರರಾಗಿದ್ದೇವೆ ಎಂಬ ವಿಚಾರ ಗೋಚರವಾಗುತ್ತದೆ.

ಮಾನ್ಯ ಅಧ್ಯಕ್ಷರೆ, ತಾವು ರಾಜಕೀಯ ಕುಟುಂಬವೊಂದರ ಪ್ರತಿನಿಧಿಯಾಗಿ ಕಳೆದ ಮೂರು ದಶಕಗಳ ಕಾಲ ನಮ್ಮ ರಾಜ್ಯದ ಸಾರ್ವಜನಿಕ ಜೀವನದಲ್ಲಿ ನಿಮ್ಮದೇ ಆದಂಥ ಮುದ್ರೆಯನ್ನು ಒತ್ತಿದ್ದೀರಿ. ಸ್ವಾತಂತ್ರ್ಯ ಹೋರಾಟದಲ್ಲಿ ತಾವು ಭಾಗವಹಿಸಿದ್ದೀರಿ. ತಾವು ಪ್ರತಿನಿಧಿಸತಕ್ಕಂಥ ವಂಶದ ಹಿರೀಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಕೀರ್ತಿ ಶೇಷ್ಠರಾದಂಥ ಶ್ರೀ ಎಂ.ವಿ. ಕೃಷ್ಣಪ್ಪನವರನ್ನು, ಶ್ರೀಮತಿ ಎಂ.ವಿ. ಕೃಷ್ಣಪ್ಪನವರನ್ನು ಈ ಸಂದರ್ಭದಲ್ಲಿ ನಾವು ನೆನೆಸಿಕೊಳ್ಳಬೇಕಾಗುತ್ತದೆ. ಹಾಗೆಯೇ ನಮ್ಮ ಮನದಲ್ಲಿ ಇನ್ನೂ ಜೀವಂತವಾಗಿರತಕ್ಕ ಶ್ರೀ ಎಂ.ವಿ. ಕೃಷ್ಣಪ್ಪನವರು ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ತುರಂಗವಾಸವನ್ನು ಅನುಭವಿಸಿರತಕ್ಕದ್ದನ್ನು ನಾವು ನೆನೆಸಿಕೊಳ್ಳಬೇಕಾಗಿದೆ. ಇದು ಈ ಕರ್ನಾಟಕ ವಿಧಾನಸಭೆ ಸದಸ್ಯರಾದ ನಮ್ಮೆಲ್ಲರ ಆಶಾಕಿರಣ.

IIಇತ್ತೀಚಿನ ದಿವಸಗಳಲ್ಲಿ ವಿಧಾನಸಭೆಗಳು ಹೇಗೆ ಕಾರ್ಯನಿರ್ವಹಣೆ ಮಾಡಬೇಕು ಎನ್ನತಕ್ಕ ಉದ್ದೇಶವನ್ನು ನಮ್ಮ ರಾಜ್ಯಾಂಗದ ಸಂಸ್ಥಾಪಕರು ಯಾವರೀತಿ ಯೋಚನೆ ಮಾಡಿದ್ದರೋ ಅದಕ್ಕೆ ತೀರಾ ಹತ್ತಿರವಾಗಿ ಹೋಗಲು ಸಾಧ್ಯವಾಗದಿದ್ದರೂ ಕೂಡ ಅದರ ಜೊತೆಗೆ ನಾವು ನಿಕಟವಾದ ಮಾನಸಿಕ ಸಂಬಂಧವನ್ನು ಇರಿಸಿಕೊಳ್ಳತಕ್ಕದ್ದು ಬಹಳ ಅವಶ್ಯಕವೆಂದು ನಾನಾದರೂ ಭಾವನೆ ಮಾಡುತ್ತೇನೆ. ಸಂವಿಧಾನದ ಕರ್ತೃ, ಶ್ರೀ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹತ್ತು ಹಲವಾರು ಆಸೆಗಳನ್ನು ಮತ್ತು ನಮ್ಮ ಲೋಕಸಭೆಗೆ ಪ್ರಪ್ರಥಮ ಅಧ್ಯಕ್ಷರಾಗಿದ್ದಂಥ ಶ್ರೀ ಮಾನ್ ಮೌಲಂಕರ್‌ರವರು ಹಾಕಿರತಕ್ಕ ದಿಟ್ಟ ಸಂಪ್ರದಾಯವನ್ನು ಸಹ ನಾವು ಈ ಸಮಯದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಅವತ್ತಿನ ನಮ್ಮ ರಾಷ್ಟ್ರದ ರಾಜಕಾರಣದಲ್ಲಿ ಮಾನ್ಯ ಪಂಡಿತ್ ಜವಹರಲಾಲ್ ನೆಹರುರವರಂಥ ಬಹಳ ಎತ್ತರದ ನಾಯಕರು

ಪ್ರಧಾನ ಮಂತ್ರಿಗಳಾಗಿದ್ದರೂ ಶ್ರೀ ಮೌಲಂಕರ್‌ರವರು ಲೋಕಸಭೆಯ ಅಧ್ಯಕ್ಷರಾಗಿ ಅತ್ಯಂತ ಕಠಿಣವಾಗಿ ಹಲವಾರು ಸಂದರ್ಭಗಳಲ್ಲಿ ವರ್ತನೆ ಮಾಡಿರತಕ್ಕದ್ದನ್ನು ನಾವು ಅವರ ಜೀವನ ಚರಿತ್ರೆಯನ್ನು ಓದಿದಂಥ ಸಂದರ್ಭದಲ್ಲಿ ನಮಗೆ ನೆನಪಿಗೆ ಬರುತ್ತದೆ. ಹಾಗೆಯೇ ಈ ಸದನದ ಕಾರ್ಯಕಲಾಪಗಳ ನಿರ್ವಹಣೆಯಲ್ಲಿ ನಾವು ಕಾಂಗ್ರೆಸ್ ಪಕ್ಷದ ಪರವಾಗಿ ತಮಗೆ ಸಂಪೂರ್ಣವಾದ ಸಹಕಾರವನ್ನು ನೀಡುತ್ತೇವೆಂದು ಹೇಳಲಿಚ್ಛಿಸುತ್ತೇನೆ. ಈ ವಿಧಾನಸಭೆಯು ಅರ್ಥ ಪೂರ್ಣವಾಗಿ ಕಾರ್ಯನಿರ್ವಹಣೆ ಮಾಡುವುದಕ್ಕೆ ಬೇಕಾದಂಥ ವಿರೋಧ ಪಕ್ಷದವರ ಸಹಕಾರವೂ ಸಹ ತಮಗೆ ದೊರಕುತ್ತದೆಂದು ನಾನು ಭಾವಿಸಿ ವಿರೋಧ ಪಕ್ಷದವರು ಈ ಮಾನ್ಯ ಅಧ್ಯಕ್ಷರ ಚುನಾವಣೆಯ ಸಮಯದಲ್ಲಿ ಯಾವ ಅಭ್ಯರ್ಥಿಯನ್ನೂ ಕೂಡ ಕಣಕ್ಕೆ ಒಡ್ಡದೆ ತಮ್ಮ ವಿಚಾರದಲ್ಲಿ ಅವರ ಅಗಾದವಾದಂಥ ನಂಬಿಕೆಯನ್ನು, ವಿಶ್ವಾಸವನ್ನು ವ್ಯಕ್ತಪಡಿಸಿರುವುದಕ್ಕೋಸ್ಕರ ಅವರಿಗೆ ನಾನು ಅಭಾರಿಯಾಗಿದ್ದೇನೆ. ಈ ಸದನದ ಅಧ್ಯಕ್ಷರಾಗಿ ತಾವು ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ತಮ್ಮನ್ನು ನಾನು ಅಭಿನಂದಿಸುತ್ತೇನೆ. ನೀವು ನಮ್ಮೆಲ್ಲರ ಮೇಲೆ ಇಟ್ಟಿರತಕ್ಕಂಥ ವಿಶ್ವಾಸಕ್ಕೆ ನಾವು ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಸಭಾಧ್ಯಕ್ಷರ ಆಯ್ಕೆಯ ವಿಷಯದಲ್ಲಿ ನಮ್ಮನ್ನು ಯಾರೂ ಕೇಳಲೇ ಇಲ್ಲ. ನಾವು ಇಲ್ಲಿ ಇದ್ದೇವೆ ಎನ್ನತಕ್ಕಂಥಾದ್ದು ಆಡಳಿತ ಪಕ್ಷದವರಿಗೆ ಅದೂ ಮೊದಲನೇ ದಿವಸದಲ್ಲೇ ಮರೆತು ಹೋಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳು ಈ ದಿಸೆಯಲ್ಲಿ ನಮ್ಮನ್ನು ಕನ್‌ಸಲ್ಟ್ ಮಾಡಿದ್ದರೆ ನಾವು ಸಹಕಾರ ಕೊಡಲು ತಯಾರಿದ್ದೆವು.

ಶ್ರೀ ಎಸ್.ಎಂ. ಕೃಷ್ಣ : ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಇವರಿಗಿಂತಲೂ ಉತ್ತಮರಾದವರನ್ನು ನಾವು ಹುಡುಕಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೇನೋ ಆದ್ದರಿಂದ ನಾವು ಆ ಒಂದು ಊಹೆ ಮಾಡಿದೆವು...

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರ ಆಯ್ಕೆ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ, ಆದರೆ ಸರ್ಕಾರದ, ಆಡಳಿತ ಪಕ್ಷದವರ ನಡವಳಿಕೆ ಬಗ್ಗೆ ಮಾತ್ರ ನಮ್ಮ ಆಕ್ಷೇಪಣೆ ಇದೆ.

ಶ್ರೀ ಎಸ್.ಎಂ. ಕೃಷ್ಣ : ನಾನು ಯಾವ ಹಂತದಲ್ಲಿದ್ದೆ ಎಂದರೆ ತಾವು ಇವರನ್ನು ನಮ್ಮ ನೂತನ ಅಧ್ಯಕ್ಷರನ್ನಾಗಿ ಆರಿಸುವುದರಲ್ಲಿ ನಮ್ಮ ಜೊತೆಯಲ್ಲಿ ಕೈ ಜೋಡಿಸಿದ್ದಕ್ಕೋಸ್ಕರ ನಿಮಗೆ ನನ್ನ ಅಭಿನಂದನೆಗಳನ್ನು ಸಲ್ಲುತ್ತವೆ. ನಿಜ, ಒಂದು ಲೋಪವಾಗಿದೆ ಇದರಲ್ಲಿ ಎಂದು ನಾನು ಭಾವನೆ ಮಾಡುತ್ತೇನೆ. ತಮ್ಮನ್ನು ನಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದರೂ ಸಹಾ ಈಗ ಆಗಿದ್ದೇ ಆಗುತ್ತಿತ್ತು. ಆದರೆ ನಮ್ಮ ಮಾನಸಿಕವಾದಂತಹ ಕೆಲವು ಹಿಕಪ್ಸ್ ಏನಿವೆ, ಅದರಿಂದ ನಾವು ದೂರವಾಗಬಹುದಾಗಿತ್ತು. ಅದಕ್ಕೆ ವಿರೋಧ ಪಕ್ಷದವರ ಕ್ಷಮೆಯನ್ನು ನಾನು ಕೇಳುತ್ತಿದ್ದೇನೆ. ಒಟ್ಟಾರೆಯಾಗಿ ನನ್ನಿಂದ ಆ ಒಂದು ಸಣ್ಣ ಲೋಪವಾದರೂ ಸಹಾ ವಿರೋಧ ಪಕ್ಷದವರು ನೀವು ಇಲ್ಲಿ ಒಳ್ಳೆಯ ಸಂಪ್ರದಾಯವನ್ನು ಹಾಕಿದ್ದೀರಿ. ಅದಕ್ಕಾದರೂ ಕೂಡ ನಾನೇನು ನಿಮಗೆ

ಅಭಿನಂದನೆಗಳನ್ನು ಕೊಡುತ್ತೇನೋ ಅದನ್ನು ಸ್ವೀಕಾರ ಮಾಡಬೇಕೆಂದು ನಾನು ವಿರೋಧ ಪಕ್ಷಗಳವರನ್ನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ವಿಧಾನ ಸಭೆಯಲ್ಲಿ ಅರ್ಥಪೂರ್ಣವಾದಂತಹ ಅಧಿವೇಶನ ನಡೆಯಬೇಕು, ಹೆಚ್ಚು ದಿನಗಳ ಕಾಲ ನಾವು ಸೀರಿಯಸ್ ಬಿಸಿನೆಸ್ ಅನ್ನು ನಡೆಸಬೇಕು. ಈ ದಿಸೆಯಲ್ಲಿ ತಮಗೆ ಸಂಪೂರ್ಣವಾದಂತಹ ಸಹಕಾರವನ್ನು ನಾವು ಕೊಡುತ್ತೇವೆ ಎಂದು ಆಡಳಿತ ಪಕ್ಷದವರ ಪರವಾಗಿ ನಾನು ಭರವಸೆ ಕೊಡುತ್ತೇನೆ. ತಾವು ಅಧ್ಯಕ್ಷರಾಗಿರುವ ಅವಧಿಯಲ್ಲಿ ನಮ್ಮ ಕರ್ನಾಟಕ ರಾಜ್ಯ ವಿಧಾನಸಭೆಯ ಜನತಂತ್ರದ ಕಾರ್ಯಕಲಾಪಗಳೆಲ್ಲವೂ ಕೂಡ ಬಹಳ ಯಶಸ್ವಿಯಾಗಿ ನಡೆಯಲೆಂದು ನಾನು ಹಾರೈಸುತ್ತಾ ಮತ್ತೊಮ್ಮೆ ನನ್ನ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ತಮಗೆ ಹಾರ್ದಿಕವಾದ ಅಭಿನಂದನೆಗಳನ್ನು ಸಮರ್ಪಣೆ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ತಮ್ಮನ್ನು ಈ ಸದನದ ಮಾನ್ಯ ಸದಸ್ಯರುಗಳೆಲ್ಲ ಸರ್ವಾನುಮತದಿಂದ ಈ ಒಂದು ಮಹತ್ವಪೂರ್ಣವಾದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸಿದ್ದಾರೆ. ಅದಕ್ಕಾಗಿ ನಾನು ಮೊಟ್ಟ ಮೊದಲು ಪ್ರತಿಪಕ್ಷಗಳ ಪರವಾಗಿ ತಮಗೆ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಒಂದು ಸದನ ಅತ್ಯಂತ ಮಹತ್ವಪೂರ್ಣವಾದ ಸದನ. ಪ್ರಜಾಪ್ರಭುತ್ವದಲ್ಲಿ ಈ ಸದನಕ್ಕೆ ಒಂದು ಪ್ರಾಮುಖ್ಯತೆ ಇದೆ. ನಮ್ಮ ನಾಡಿನ ಐದು ಕೋಟಿ ಜನರನ್ನು ಪ್ರತಿನಿಧಿಸತಕ್ಕಂಥ ಜನ ಪ್ರತಿನಿಧಿಗಳು ಇಲ್ಲಿದ್ದಾರೆ. ಬಹಳ ಮಹತ್ವಪೂರ್ಣವಾದ ವಿಚಾರಗಳು ಇಲ್ಲಿ ಪ್ರಸ್ತಾಪವಾಗುತ್ತವೆ. ಇದನ್ನು ಒಂದು ಮಾದರಿ ಶಾಸನ ಸಭೆಯನ್ನಾಗಿ ನಡೆಸಿಕೊಂಡು ಹೋಗುವಂತಹ ಅತ್ಯಂತ ಗುರುತರವಾದಂತಹ ಜವಾಬ್ದಾರಿ ತಮ್ಮ ಮೇಲಿದೆ. ಆ ಜವಾಬ್ದಾರಿಯನ್ನು ನಿರ್ವಹಿಸುವ ಕಾರ್ಯವೈಖರಿ ಮತ್ತು ಮುತ್ಸದ್ದಿತನ ತಮ್ಮಲ್ಲಿದೆ. ತಮ್ಮ ರಾಜಕೀಯ ಹಿನ್ನೆಲೆ, ಕೌಟುಂಬಿಕ ಹಿನ್ನಲೆ, ಸಮಾಜ ಸೇವಾ ಅನುಭವದ ಹಿನ್ನೆಲೆಯಲ್ಲಿ ತಾವು ಈ ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತೀರಿ ಎಂಬ ಭರವಸೆ, ವಿಶ್ವಾಸ ನನ್ನಲ್ಲಿದೆ. ಮುತ್ಸದಿಗಳು, ಹಿರಿಯರು ಹಾಗೂ ಅನೇಕ ನುರಿತ ಸಂಸದೀಯ ಪಟುಗಳು ಈ ಪೀಠವನ್ನು ಅಲಂಕರಿಸಿ ಯಶಸ್ವಿಯಾಗಿ ನಿರ್ವಹಿಸಿದ್ದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಹಿಂದೆ ಇದ್ದಂತಹ ಮಾನ್ಯ ವೈಕುಂಠ ಬಾಳಿಗ ಅವರ ಬಗ್ಗೆ ಬಹಳ ಜನ ಮಾತನಾಡುತ್ತಾರೆ. ಕಳೆದ ಅಧಿವೇಶನದಲ್ಲಿ ನಾನು ಚರ್ಚೆಗಳಲ್ಲಿ ಭಾಗವಹಿಸಿದಂತಹ ಸಂದರ್ಭಗಳಲ್ಲಿ ಬಹಳಷ್ಟು ಜನ ಹಿರಿಯ ಶಾಸಕರು ಮಾನ್ಯ ವೈಕುಂಠ ಬಾಳಿಗರವರು ಸ್ಪೀಕರ್ ಆಗಿದ್ದ ಅವಧಿಯಲ್ಲಿ ಅವರು ಯಾವ ರೀತಿ ಸದನವನ್ನು ನಡೆಸುತ್ತಿದ್ದರು, ಯಾವ ರೀತಿ ಅವರು ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಕೊಟ್ಟು ತಮ್ಮ ತಮ್ಮ ಪ್ರತಿಭೆಯನ್ನು ತೋರಲು ಅನುವು ಮಾಡಿಕೊಡುತ್ತಿದ್ದರು ಎಂದು ಬಹಳ ಮಾರ್ಮಿಕವಾಗಿ ಅವರ ದಕ್ಷತೆಯನ್ನು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಅದೇ ರೀತಿಯಲ್ಲಿ ಬಹಳಷ್ಟು ಜನ ಹಿರಿಯರು ಈ ಸದನದ ಅಧ್ಯಕ್ಷ ಸ್ಥಾನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮಾನ್ಯ ಎಸ್.ಆರ್. ಕಂಠಿಯವರು ಹಿಂದೆ ಈ ಸಭೆಯ ಅಧ್ಯಕ್ಷರಾಗಿ ಇದ್ದರು, ಶ್ರೀಮತಿ ನಾಗರತ್ನಮ್ಮನವರೂ ಕೂಡ ಹಿಂದೆ ಈ ಸಭೆಯ ಅಧ್ಯಕ್ಷರಾಗಿದ್ದರು. ಈಗ ಮಾನ್ಯ ಮುಖ್ಯಮಂತ್ರಿಗಳಾಗಿರುವಂತಹ ಶ್ರೀ ಎಸ್.ಎಂ. ಕೃಷ್ಣರವರು ಹಾಗೂ ಹಿರಿಯರಾದಂತಹ ಮಾನ್ಯ ಬಣಕಾರ್‌ರವರೂ ಕೂಡ ವಿಧಾನ ಸಭೆಯ ಅಧ್ಯಕ್ಷರಾಗಿದ್ದರು. ಇವತ್ತು ಈ ಸದನದಲ್ಲಿ

ಇರುವಂತಹ ಮಾನ್ಯ ವಿ.ಎಸ್ ಕೌಜಲಗಿಯವರು ಹಾಗೂ ಮಾನ್ಯ ಕೆ.ಹೆಚ್. ರಂಗನಾಥ್‌ರವರೂ ಕೂಡ ಹಿಂದೆ ಈ ಸದನದ ಅಧ್ಯಕ್ಷರಾಗಿದ್ದರು. ನಾನು ಕಳೆದ ವಿಧಾನಸಭೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಯಾವ ರೀತಿಯಲ್ಲಿ ಸದನವನ್ನು ನಡೆಸುತ್ತಿದ್ದರು ಎಂಬುದು ನನ್ನ ಕಣ್ಣು ಮುಂದೆಯೇ ಇದೆ. ಅವರು ಎಲ್ಲಾ ಮಾನ್ಯ ಸದಸ್ಯರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತಿದ್ದರು. ಯಾರಾದರೂ ತಪ್ಪು ಮಾರ್ಗವನ್ನು ಹಿಡಿದಾಗ ಅವರನ್ನು ಕೈ ಹಿಡಿದು ತಿದ್ದುವಂತಹ, ಅವರಿಗೆ ಕಿವಿ ಮಾತು ಹೇಳುವಂತಹ, ಅವರಿಗೆ ಮಾರ್ಗದರ್ಶನವನ್ನು ನೀಡುವಂತಹ ಕೆಲಸವನ್ನು ಬಹಳ ಮಾರ್ಮಿಕವಾಗಿ ಸನ್ಮಾನ್ಯ ರಮೇಶ್‌ಕುಮಾರ್‌ರವರು ಮಾಡಿದ್ದರು. ಈ ರೀತಿ ಒಳ್ಳೆಯ ವಾತಾವರಣ ಇದ್ದಾಗ ಮಾತ್ರ ಒಳ್ಳೆಯ ಚರ್ಚೆಗಳು ನಡೆಯಲಿಕ್ಕೆ ಸಾಧ್ಯವಿದೆ. ಕಳೆದ ವಿಧಾನಸಭೆಯಲ್ಲಿ ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಪುಟ್ಟಣ್ಣಯ್ಯನವರು ಮುಂತಾದ ಅನೇಕ ಹಿರಿಯ ಸದಸ್ಯರುಗಳು ಈ ಭಾಗದಲ್ಲಿ ಇದ್ದರು. ಆ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಚರ್ಚೆಯಾಗುತ್ತಿತ್ತು, ಯಾವ ರೀತಿ ಚರ್ಚೆಗೆ ಮಹತ್ವ ಬರುತ್ತಿತ್ತು ಎಂಬುದನ್ನು ನಾವು ಇಲ್ಲಿ ಸ್ಮರಿಸಬಹುದಾಗಿದೆ. ಇವತ್ತು ಇಡೀ ಕರ್ನಾಟಕ ರಾಜ್ಯದ ಜನತೆ ನಮ್ಮನ್ನು ನೋಡುತ್ತಿದೆ. ಬಡವರ ಪರವಾಗಿ ಈ ಸದನದಲ್ಲಿ ಕೂಗು ಕೇಳುತ್ತದೋ ಇಲ್ಲವೋ ಅಥವಾ ಜನರ ಸಮಸ್ಯೆಗಳಿಗೆ ನಮ್ಮ ಜನ ಪ್ರತಿನಿಧಿಗಳು ಸ್ಪಂದಿಸುತ್ತಾರೋ ಇಲ್ಲವೋ ಅಥವಾ ಜನರ ಸಮಸ್ಯೆಗಳಿಗೆ ನಮ್ಮ ಜನ ಪ್ರತಿನಿಧಿಗಳು ಸ್ಪಂದಿಸುತ್ತಾರೋ ಇಲ್ಲವೋ ಎಂದು ಜನತೆ ಇಂದು ಎದುರು ನೋಡುತ್ತಿದ್ದಾರೆ. ಈ ಮಹತ್ವ ಪೂರ್ಣವಾದಂತಹ ಶಾಸನ ಸಭೆಯಲ್ಲಿ ಒಳ್ಳೆಯ ಶಾಸನಗಳು ಪಾಸ್ ಆಗುತ್ತವೋ ಇಲ್ಲವೋ ಜನ ಹಿತವಾದಂತಹ ಕಾರ್ಯಚಟುವಟಿಕೆಗಳು ನಡೆಯುತ್ತವೋ ಇಲ್ಲವೋ ಎಂದು ಜನತೆ ನೋಡುತ್ತಿದೆ. ಈ ದಿಸೆಯಲ್ಲಿ ಅರ್ಥಪೂರ್ಣವಾದಂತಹ ಚರ್ಚೆಗಳು ಇಲ್ಲಿ ನಡೆಯಬೇಕಾಗಿದೆ. ಇಲ್ಲಿ ಚರ್ಚೆ ನಡೆಯುವ ಪ್ರತಿಯೊಂದು ನಿಮಿಷಕ್ಕೂ ನಾವು ಅಪಾರ ವೆಚ್ಚ ಮಾಡುತ್ತಿದ್ದೇವೆ. ಈ ಒಂದು ಶಾಸನಸಭೆಯ ವೇಳೆಗೆ ನಾವು ಹೆಚ್ಚಿನ ಮಹತ್ವ ಕೊಡಬೇಕಾಗಿರುತ್ತದೆ. ಆದ್ದರಿಂದ ಇಲ್ಲಿ ವೇಳೆಯ ಅಪವ್ಯಯ ಆಗದ ರೀತಿಯಲ್ಲಿ ನಾವು ಶಾಸನಸಭೆಯನ್ನು ನಡೆಸಿಕೊಂಡು ಹೋಗಬೇಕಾಗಿದೆ. ತಾವು ಹಿರಿಯರಿದ್ದೀರಿ ಹಾಗೂ ಅನುಭವಸ್ಥರಾಗಿದ್ದೀರಿ. ಎಲ್ಲಾ ಶಾಸಕರ ವಿಶ್ವಾಸವನ್ನು ಪಡೆದುಕೊಂಡು ತಾವು ಅತ್ಯಂತ ಒಳ್ಳೆಯ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಹೋಗುತ್ತೀರಿ ಎನ್ನುವ ವಿಶ್ವಾಸ ನನಗೆ ಇದೆ. ಸಾಕಷ್ಟು ಜನ ಹೊಸಬರು ಇಲ್ಲಿಗೆ ಆರಿಸಿ ಬಂದಿದ್ದೇವೆ. ಹೆಚ್ಚು ಕಡಿಮೆ ಸುಮಾರು 75-80 ಜನ ಶಾಸಕರು ಪ್ರಥಮ ಬಾರಿಗೆ ಈ ವಿಧಾನಸಭೆಗೆ ಆರಿಸಿ ಬಂದಿದ್ದಾರೆ. ಈ ಹೊಸ ಶಾಸಕರುಗಳಿಗೆ ತಾವು ಮಾರ್ಗದರ್ಶನ ನೀಡಿ ಮಾತನಾಡಲು ಹೆಚ್ಚಿನ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತನೆ. ಹೀಗೆ ಮಾಡಿದಲ್ಲಿ ಹೊಸ ಶಾಸಕರುಗಳಿಗೂ ಕೂಡ ನಾವು ಒಂದು ಪಬ್ಲಿಕ್-ಕಾಸ್ ಸಲುವಾಗಿ ಇಲ್ಲಿ ದುಡಿಯುತ್ತಿದ್ದೇವೆ ಎಂಬ ಭಾವನೆ ಬರುತ್ತದೆ. ಈ ದಿಸೆಯಲ್ಲಿ ತಮ್ಮ ಮಾರ್ಗದರ್ಶನ ಅವಶ್ಯ ಎಂದು ನಾನು ಹೇಳಬಯಸುತ್ತೇನೆ. ಇದೊಂದು ಮಾದರಿ ಶಾಸನಸಭೆ ಆಗಬೇಕೆಂಬುದು ನನ್ನ ಆಸೆಯಾಗಿದೆ. ಈ ದಿಸೆಯಲ್ಲಿ ಸಾಕಷ್ಟು ಚಿಂತನೆ ನಮ್ಮಲ್ಲಿ ನಡೆಯಬೇಕಾಗಿದೆ. ಕಳೆದ ವಿಧಾನಸಭೆಯ ಅವಧಿಯಲ್ಲಿ ಸಾಕಷ್ಟು ದಿನಗಳ ಕಾಲ ಅಧಿವೇಶನ ನಡೆಯುತ್ತಿರಲಿಲ್ಲ. ಕೇವಲ

ಒಂದು ವಾರ ಅಥವಾ 15 ದಿವಸಗಳ ಕಾಲ ಮಾತ್ರ ಅಧಿವೇಶನ ನಡೆಯುತ್ತಿತ್ತು. ವರ್ಷಕ್ಕೆ ಇಂತಿಷ್ಟು ದಿವಸಗಳ ಕಾಲ ಅಧಿವೇಶನ ನಡೆಯಬೇಕೆಂದು ನಿಗದಿಪಡಿಸಿದ ಅದರಂತೆ ಅಧಿವೇಶನ ಕರೆಯುವಂತಹ ಸಂಪ್ರದಾಯ ಮಾಡಬೇಕು. ಈಗಾಗಲೇ ಅದು ನಿಯಮಗಳಲ್ಲಿ ಇದೆ. ಆದರೆ ನಿಗದಿಪಡಿಸಿರುವಷ್ಟು ದಿನಗಳು ಅಧಿವೇಶನ ನಡೆಯುತ್ತಿಲ್ಲ. ಹೆಚ್ಚಿನ ದಿವಸಗಳ ಕಾಲ ಅಧಿವೇಶನ ನಡೆಸಬೇಕೆಂಬುದು ಸರ್ಕಾರದ ಅಪೇಕ್ಷೆ ಎನ್ನುವಂತಹ ಮಾನ್ಯ ಚಂದ್ರೇಗೌಡರ ಹೇಳಿಕೆಯೊಂದನ್ನು ನಾನು ಪತ್ರಿಕೆಗಳಲ್ಲಿ ನೋಡಿದೆ. ಇದು ಬಹಳ ಒಳ್ಳೆಯದು. ಇದರಿಂದಾಗಿ ಇಲ್ಲಿ ಏನು ಚರ್ಚೆಗಳು ನಡೆಯುತ್ತಿವೆ ಎಂಬ ಬಗ್ಗೆ ಒಂದು ಸಿಗ್ನಲ್ ಇಡೀ ರಾಜ್ಯದ ಜನತೆಗೆ ಹೋಗುತ್ತದೆ. ಈ ದಿಸೆಯಲ್ಲಿ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಂಡು ಇಲ್ಲಿ ಹೆಚ್ಚಿನ ಚರ್ಚೆ ನಡೆಯುವಂತಾಗಲೆಂದು ನಾನು ಆಶಿಸುತ್ತೇನೆ. ನಾನು ಈ ಬಗ್ಗೆ ಇನ್ನು ಹೆಚ್ಚಿನ ಮಾತುಗಳನ್ನಾಡದೇ, ಇವತ್ತು ಇಲ್ಲಿ ಇಷ್ಟು ವಿಚಾರಗಳನ್ನು ವ್ಯಕ್ತಪಡಿಸಿ ಎಲ್ಲರ ವಿಶ್ವಾಸದಿಂದ ತಾವು ಈ ಒಂದು ಸದನವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತೀರಿ ಎಂಬ ಮಾತನ್ನು ಹೇಳುತ್ತಾ, ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾವೆಲ್ಲರೂ ಒಬ್ಬ ಹಿರಿಯ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಶೇಷವಾಗಿ ಈ ಮನೆಯ ಕಲಾಪಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡು ಕೆಲಸ ಮಾಡತಕ್ಕಂತಹ ಒಬ್ಬ ವ್ಯಕ್ತಿಗೆ ಸರ್ವಾನುಮತದಿಂದ ಆಯ್ಕೆ ಮಾಡಿದ್ದೇವೆಂದು ನನಗೆ ತುಂಬ ಸಂತೋಷವಾಗಿದೆ. ಇನ್ನೊಂದು ವಿಶೇಷವಾದ ಅನುಭವ ತಮಗಿದೆ ಅದೇನೆಂದರೆ, 1974ರಲ್ಲಿ ಮೇಲ್ಮನೆಯ ಅಧ್ಯಕ್ಷರಾಗಿ ಸುಮಾರು ಹೆಚ್ಚು ಕಡಿಮೆ ನಾಲ್ಕರಿಂದ ಆರು ವರ್ಷಗಳ ಕಾಲ ಕೆಲಸ ಮಾಡಿದ್ದೀರಿ. ಆಗ ನಾನೂ ಕೂಡ ಮಂತ್ರಿಯಾಗಿ ತಮ್ಮ ಮಾರ್ಗದರ್ಶನ ಪಡೆಯತಕ್ಕಂತಹ ಅವಕಾಶವಾಯಿತು. ಅಂತಹ ಮೇಲ್ಮನೆಯಲ್ಲಿ ತಾವು ಬಹಳ ಒಳ್ಳೆಯ ರೀತಿಯಲ್ಲಿ ಕಾರ್ಯ ಕಲಾಪಗಳನ್ನು ನಡೆಸಿಕೊಂಡು ಒಂದು ಸತ್ ಕೀರ್ತಿಯನ್ನು ಸಂಪಾದನೆ ಮಾಡಿದ್ದೀರಿ. ಅದೇ ರೀತಿಯಾಗಿ ತಾವು ಇಲ್ಲಿಯೂ ಕೂಡ ಒಳ್ಳೆಯ ರೀತಿಯಿಂದ ಈ ಸದನವನ್ನು ನಡೆಸಿಕೊಂಡು ಹೋಗುತ್ತೀರಿ ಎನ್ನುವ ಭರವಸೆ ನಮಗಿದೆ. ಏಕೆಂದರೆ, ಈ ಮನೆಯಲ್ಲಿ ಸಾಕಷ್ಟು ಜನ ಅನುಭವಸ್ಥರು ಇದ್ದಾರೆ. ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ ನಮ್ಮ ಮುಖಂಡರು ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಹಿಂದೆ ಈ ಪೀಠದ ಮೇಲೆ ಅಲಂಕರಿಸಿದ್ದರು, ಶ್ರೀಮಾನ್ ಡಿ.ಬಿ. ಚಂದ್ರೇಗೌಡರು ಸಹ ಪೀಠದಲ್ಲಿ ಅಲಂಕರಿಸಿದ್ದರು. ಅದೇ ರೀತಿಯಾಗಿ ಹಿರಿಯ ಸದಸ್ಯರಾದ ಶ್ರೀಮಾನ್ ಕೆ.ಹೆಚ್. ರಂಗನಾಥ್‌ರವರು, ಶ್ರೀಮಾನ್ ವಿ.ಎಸ್. ಕೌಜಲಗಿಯವರು ಮತ್ತು ಅನೇಕ ಮುಖಂಡರು ಆ ಸ್ಥಾನದಲ್ಲಿ ಕುಳಿತು ನಮಗೆ ಮಾರ್ಗದರ್ಶನ ಮಾಡಿದ್ದರು. ಇವತ್ತಿಗೂ ಕೂಡ ನಮ್ಮ ಮಾರ್ಗದರ್ಶನಕ್ಕೆ, ಈ ಸದನಕ್ಕೆ ಘನತೆ ಗೌರವ ತರುವುದಕ್ಕೆ ಅವರೆಲ್ಲರೂ ಈ ಸಭೆಯಲ್ಲಿದ್ದಾರೆ. ಅದನ್ನು ತಾವೂ ಸಹ ಕಾಪಾಡಿಕೊಂಡು ಹೋಗುತ್ತೀರಿ ಎಂದು ನನಗೆ ವಿಶ್ವಾಸ ಇದೆ. ಆ ನಂಬಿಕೆಯಿಂದ ಇವತ್ತು ನಮ್ಮ ಎಲ್ಲಾ ಮಾನ್ಯ ಸದಸ್ಯರು ಒಮ್ಮತದಿಂದ ಇವತ್ತು ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ಸನ್ಮಾನ್ಯ ಸಿ. ಬೈರೇಗೌಡರು ಇದನ್ನು ತಾವು ಸ್ವಲ್ಪ

ಕನ್‌ಸಲ್ಟ್ ಮಾಡಿ ಮಾಡಬಹುದಾಗಿತ್ತು ಎಂದು ಹೇಳಿದರು, ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀಮಾನ್ ಡಿ.ಬಿ. ಚಂದ್ರೇಗೌಡರು ತಮಗೆ ಕನ್‌ಸಲ್ಟ್ ಮಾಡದೆ ಇದರಲ್ಲಿ ಸ್ವಲ್ಪ ಲೋಪ ಆಗಿದೆ ಎನ್ನುವ ಮಾತು ಹೇಳಿದರು, ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಸಹ ಇದನ್ನು ಒಪ್ಪಿಕೊಂಡರು. ಆದರೆ ಇದು ನನ್ನ ಅನುಭವಕ್ಕೆ ಕೂಡ ಬಂದಿದೆ. ಆ ಕಡೆ ನಾನು ವಿರೋಧ ಪಕ್ಷ ನಾಯಕನಾಗಿದ್ದಾಗ ಶ್ರೀಮಾನ್ ರಮೇಶ್‌ಕುಮಾರ್‌ರವರನ್ನು ಈ ಅಧ್ಯಕ್ಷಸ್ಥಾನಕ್ಕೆ ಆಯ್ಕೆ ಮಾಡುವಾಗ ನನ್ನನ್ನೂ ಕೂಡ ಯಾರೂ ಕನ್‌ಸಲ್ಟ್ ಮಾಡಲಿಲ್ಲ. ಈ ಲೋಪಗಳು ಹೆಚ್ಚು ಕಡಿಮೆ ಆಗಿವೆ. ಆದರೆ ಇದನ್ನು ಮುಂದುವರೆಸಿಕೊಂಡು ಹೋಗಬೇಕೆಂದು ನಾನು ಹೇಳುತ್ತಿಲ್ಲ. ತಾವು ಹಿಂದೆ ಮಾಡಿದ್ದೀರಿ ಎಂದು ನಾವು ಮಾಡಬೇಕೆಂದೇನೂ ಇಲ್ಲ. ಒಳ್ಳೆಯ ರೀತಿಯಿಂದ ನಾವು ಒಬ್ಬರಿಗೊಬ್ಬರು ತಿಳಿದುಕೊಂಡು ಹೋಗಬೇಕಾದರೆ ಒಬ್ಬರಿಗೊಬ್ಬರು ಕನ್‌ಸಲ್ಟ್ ಮಾಡಿ ಈ ಕೆಲಸ ಮಾಡಬೇಕಾಗುತ್ತದೆ. ನಾನೂ ಕೂಡ ನಮ್ಮ ಪಕ್ಷದ ಫ್ಲೋರ್ ಲೀಡರ್ ಆಗಿದೆ. ಇಬ್ಬರೂ ಕೂಡ ಹೆಚ್ಚು ಕಡಿಮೆ ಸಮ ಸಮ ಆಗಿದ್ದೆವು. ಆದರೂ ಕೂಡ ತಾವು ನಮಗಾಗಲಿ ಅವರಿಗಾಗಲಿ ಕರೆದು ಸೌಜನ್ಯದ ಮಾತನಾಡಲಿಲ್ಲ. ಅದಕ್ಕಾಗಿ ಇನ್ನೂ ಇಲ್ಲಿ ನೀವು ಅದು ಮಾಡಲಿಲ್ಲ, ನಾವು ಅದು ಮಾಡಲಿಲ್ಲ ಎಂದು ಹೇಳಿಕೊಳ್ಳುವುದು ಬೇಡ. ಇಬ್ಬರೂ ಹೆಚ್ಚು ಕಡಿಮೆ ಸಮ ಸಮ ಇದ್ದೇವೆ. ಈ ಒಂದು ಸ್ಥಾನಕ್ಕೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಅತ್ಯಂತ ಗೌರವ ತರತಕ್ಕಂತಹ ಜಾಗದಲ್ಲಿ ನಮ್ಮೆಲ್ಲರಿಗೆ ಬೇಕಾದಂತಹ ವ್ಯಕ್ತಿಗೆ ಇವತ್ತು ನಾವು ಸರ್ವಾನುಮತದಿಂದ ಆಯ್ಕೆ ಮಾಡಿದ್ದೇವೆ. ಅವರು ಈ ಸದನದ ಕಸ್ಟೋಡಿಯನ್ ಇದ್ದ ಹಾಗೆ. ಈ ಕಡೆ ಸದಸ್ಯರು ತಪ್ಪು ಮಾಡಲಿ, ಆ ಕಡೆ ಸದಸ್ಯರು ತಪ್ಪು ಮಾಡಲಿ ಎಲ್ಲರಿಗೂ ಮಾರ್ಗದರ್ಶನ ಮಾಡುವುದು, ಇದ್ದುದನ್ನು ಇದ್ದ ಹಾಗೆ ಹೇಳತಕ್ಕಂತಹ ಧೈರ್ಯ ತಮಗೆ ಇದೆ. ಈ ಸದನದ ಸದಸ್ಯರ ಹಕ್ಕನ್ನು ರಕ್ಷಣೆ ಮಾಡತಕ್ಕಂತಹ ಅನುಭವ ಕೂಡ ತಮಗೆ ಇದೆ. ಅದಕ್ಕಾಗಿ ಎಲ್ಲ ವಿರೋಧ ಪಕ್ಷದ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರೂ ಕೂಡ ತಮ್ಮನ್ನು ಒಂದು ಗೌರವ ದೃಷ್ಟಿಯಿಂದ ನೋಡುತ್ತಾರೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ತಾವು ಒಳ್ಳೆಯ ರೀತಿಯಿಂದ ಈ ಸದನ ನಡೆಸಿಕೊಂಡು ಹೋಗಿ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತೀರಿ ಎಂದು ಹೇಳಿ, ತಮ್ಮನ್ನು ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಮ್ಮನ್ನು ಈ ಸದನದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರತಕ್ಕಂತಹ ಈ ಸಂದರ್ಭದಲ್ಲಿ ನನ್ನ ಪರವಾಗಿ ಮತ್ತು ನನ್ನ ಸದಸ್ಯರ ಪರವಾಗಿ ತುಂಬು ಹೃದಯದಿಂದ ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಆಗಿರತಕ್ಕಂತಹ ಸಣ್ಣ ಅಚಾತುರ್ಯದ ಬಗ್ಗೆ ಈ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ವಿಷಾದವನ್ನು ವ್ಯಕ್ತ ಮಾಡಿರುವುದು ನೋಡಿದರೆ ಅದು ಉದ್ದೇಶ ಪೂರ್ವಕವಾಗಿ ಆಗಿಲ್ಲವೆಂದು ನಾನು ಭಾವಿಸಿದ್ದೇನೆ. ಆದರೆ ಮಾನ್ಯ ಸಭಾನಾಯಕರು ಈ ಸಂದರ್ಭದಲ್ಲಿ ವಿಷಾದವನ್ನು ವ್ಯಕ್ತ ಮಾಡತಕ್ಕಂತಹ ಒಂದು ದೊಡ್ಡತನವನ್ನು ಸಹ ತೋರಿಸಿದ್ದಾರೆ. ಅದು ಏನೇ ಇರಲಿ, ತಾವು ಈ ರಾಜ್ಯದ ಹೋರಾಟದ ಕುಟುಂಬದಿಂದ ಬಂದಿರತಕ್ಕಂತಹವರು. ತಾವೇ ಹೋರಾಟಗಾರರಾಗಿ, ತಮ್ಮ ಸಹೋದರರಾದ ಮಾನ್ಯ ಎಂ.ವಿ. ಕೃಷ್ಣಪ್ಪನವರು ಈ ರಾಜ್ಯದ ರೈತರ ಪರವಾಗಿ ಈ ರಾಜ್ಯದ

ಬೆಳವಣಿಗೆಗೋಸ್ಕರ ಹೋರಾಟ ಮಾಡಿರತಕ್ಕಂಥಾದ್ದನ್ನು ನಾವು ಈ ಸಮಯದಲ್ಲಿ ನೆನಪಿಸಿಕೊಳ್ಳಬೇಕು. ಮುತ್ಸದ್ದಿ ರಾಜಕಾರಿಣಿಗಳಾದ ಮಾನ್ಯ ಎಸ್. ನಿಜಲಿಂಗಪ್ಪನವರು, ಮಾನ್ಯ ಎಂ.ವಿ. ವೆಂಕಟಪ್ಪನವರು ಆ ಕಾಲದಲ್ಲಿ ಬಹಳ ಆದರ್ಶ ರಾಜಕಾರಣಿಗಳ ಮುಖಂಡರು ಅವರ ಕುಟುಂಬದಿಂದ ಬಂದಿರತಕ್ಕಂಥ ತಾವು ನಿಷ್ಠಾವಂತ ಕೃಷಿಕರೂ ಹೌದು. ಕಾಂಗ್ರೆಸ್ ಪಕ್ಷಕ್ಕೆ ಎಂತಹ ಕಷ್ಟದ ಸಂದರ್ಭ ಬಂದರೂ ಸಹಿತ ಕಾಂಗ್ರೆಸ್ ಪಕ್ಷವನ್ನು ಬಿಡದೆ ಕೆಲಸ ಮಾಡಿದ್ದೀರಿ. ನಾನು ಏಕೆ ಇಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎನ್ನುವುದಕ್ಕೂ ಸಹಿತ ಬರುತ್ತೇನೆ. ತಾವು ಕಾಂಗ್ರೆಸ್‌ನ ನಿಷ್ಠಾವಂತ ಧುರೀಣರಾಗಿ ಕೆಲಸ ಮಾಡಿದವರು. ವಿಧಾನ ಪರಿಷತ್ತಿನಲ್ಲಿ ಮೂರು ಸಾರಿ ಸಭಾಪತಿಗಳಾಗಿ ಅಪಾರವಾದ ಅನುಭವವನ್ನು ಪಡೆದಿದ್ದೀರಿ. ರೈತರ ಕುಟುಂಬದಿಂದ ಬಂದಿರತಕ್ಕಂತಹ ತಮಗೆ ರೈತಾಪಿ ಜನಗಳ ಎಲ್ಲ ಕಷ್ಟಗಳು ಸಹಿತ ಗೊತ್ತಿದೆ. ಕೋಲಾರ ಜಿಲ್ಲೆಗೂ ಅಧ್ಯಕ್ಷ ಸ್ಥಾನಕ್ಕೂ ಯಾವುದೋ ಒಂದು ರೀತಿಯ ಸಂಬಂಧ ಇದೆ ಎಂದು ನನಗನ್ನಿಸುತ್ತದೆ. ಈ ಹಿಂದೆ ಅಧ್ಯಕ್ಷರಾದವರು ಕೋಲಾರ ಜಿಲ್ಲೆಯವರೇ. ನಮ್ಮ ರಾಜ್ಯದಲ್ಲಿ ಕೋಲಾರ ಜಿಲ್ಲೆ ಒಂದು ಪ್ರೋಗ್ರೆಸ್ಸಿವ್ ಥಿಂಕಿಂಗ್ ಇರುವಂತಹ, ಹೋರಾಟದ ಮುನ್ನಡೆಯಲ್ಲಿ ಇರುವ ಒಂದು ಜಿಲ್ಲೆಯಿಂದ ಬಂದಿರುವವರು ತಾವು. ತಾವು ಇರಬಹುದು, ನಮ್ಮ ಪಕ್ಷದ ಅಧ್ಯಕ್ಷರಾಗಿದ್ದ ಶ್ರೀಮಾನ್ ಬೈರೇಗೌಡರು ಇರಬಹುದು. ಹಿಂದಿನ ನಾಯಕರು ಇರಬಹುದು. ತಾವೆಲ್ಲಾ ಒಂದು ಹೋರಾಟದ ಹಿನ್ನೆಲೆಯಲ್ಲಿ ಬಂದಿರತಕ್ಕಂತಹ ಮುಖಂಡರು. ಎಲ್ಲ ವರ್ಗದ ಜನಗಳನ್ನು ತಾವು ತಿಳಿದುಕೊಂಡಿರುವವರು. ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು. ಈ ಎಲ್ಲ ವರ್ಗದ ಜನಗಳು ಕೂಡಿರತಕ್ಕಂತಹ ಜಿಲ್ಲೆ, ಕೋಲಾರ ಜಿಲ್ಲೆ. ಈ ಎಲ್ಲಾ ವರ್ಗದ ಜನಗಳ ಸಮಸ್ಯೆಗಳನ್ನು ಪ್ರತಿಬಿಂಬಿಸುವುದಕ್ಕೆ ಈ ಸದನದಲ್ಲಿ ತಾವು ಸಾಕಷ್ಟು ಸಮಯವನ್ನು ನಮ್ಮೆಲ್ಲರಿಗೂ ಒದಗಿಸಿಕೊಡುತ್ತೀರಿ ಎಂದು ಹೇಳತಕ್ಕಂತಹ ವಿಶ್ವಾಸ ಸಹಿತ ನನಗಿದೆ. ಕಾರಣ ಇದು ಬಹಳ ಮುಖ್ಯವಾದ ವಿಚಾರ. ಈ ಸದನ ಇರತಕ್ಕಂತಹ ಜನಗಳ ಬಗ್ಗೆ ವಿಚಾರ ಮಾಡುವುದಕ್ಕಿಂತ ಹೆಚ್ಚಾಗಿ ಇಲ್ಲದೆ ಇರತಕ್ಕಂತಹ ಜನಗಳ ಬಗ್ಗೆ, ರೈತರ ಬಗ್ಗೆ, ಕಷ್ಟದಲ್ಲಿರತಕ್ಕಂತಹ ಜನಗಳ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ದಲಿತರ ಬಗ್ಗೆ, ಹಿಂದುಳಿದ ವರ್ಗದ ಜನಗಳ ಬಗ್ಗೆ, ಮತ್ತು ತುಳಿತಕ್ಕೆ ಒಳಗಾದ ಹೆಣ್ಣು ಮಕ್ಕಳ ಬಗ್ಗೆ ನಾವು ಚರ್ಚೆ ಮಾಡಬೇಕು. ಈ ದೃಷ್ಟಿಯಿಂದ ತಾವು ಬೆಳೆದು ಬಂದಿರತಕ್ಕಂತಹ ಪರಿಸರ ಬಹುಶಃ ಈ ಚರ್ಚೆಗೆ ಅವಕಾಶವನ್ನು ತಾವು ಹೆಚ್ಚಿಗೆ ಮಾಡಿಕೊಡುತ್ತೀರಿ ಎಂಬ ವಿಶ್ವಾಸ ನನಗಿದೆ. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಮ್ಮ ರಾಜ್ಯದ ವಿಧಾನಸಭೆಗೆ ಯಾವುದೇ ಒಂದು ಕಳಂಕವನ್ನು ಈ ರಾಷ್ಟ್ರದ ಇತಿಹಾಸದಲ್ಲಿ ನಾವು ತಂದಿಲ್ಲ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಎಷ್ಟೇ ಆವೇಶ, ಉದ್ವೇಗ, ಅಂತಹ ಪರಿಸ್ಥಿತಿ ಬಂದಂತಹ ಸಂದರ್ಭದಲ್ಲಿ ಸಹಿತ ಎರಡು ಕಡೆ ಸದಸ್ಯರುಗಳು ಬಹಳ ಸಂಯಮದಿಂದ ನಾವು ನಡೆದುಕೊಂಡಿದ್ದೇವೆ. ಆ ಸಂಯಮವನ್ನು ಈ ಸಂದರ್ಭದಲ್ಲಿ ಸಹಿತ ನಾವು ತೋರಿಸುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ನಾವು ನಮ್ಮ ಪಕ್ಷದ ಪರವಾಗಿ ಕೊಡುವುದಕ್ಕೆ ಬಯಸುತ್ತೇವೆ. ಇದೇ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಸಹಿತ ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಪಕ್ಷದ ನಾಯಕರಾದ ಶ್ರೀಮಾನ್ ಜೆ.ಹೆಚ್. ಪಟೇಲರು ಈಗಾಗಲೇ ಒಂದು ಸ್ಪಷ್ಟನೆಯನ್ನು ಕೊಟ್ಟಿದ್ದಾರೆ. ಆ ಒಂದು ಸತ್ಸಂಪ್ರದಾಯವನ್ನು ನಾವು ಹಾಕಿಕೊಂಡು ಹೋಗುತ್ತೇವೆ.

ಧರಣಿ ಮಾಡುವುದು ಈ ಸದನದ ಒಂದು ಕೊನೆಯ ಅಸ್ತ್ರವಾಗಿರಬೇಕು, ಅಥವಾ ಹೊರಗಡೆ ಹೋಗತಕ್ಕಂಥಾದ್ದು ಸಹಿತ ಕೊನೆಯ ಅಸ್ತ್ರವಾಗಿರಬೇಕು. ನಾವು ಯಾವ ರೀತಿಯಲ್ಲಿ ಯಾವ ಯಾವ ಸ್ಥಾನದಲ್ಲಿ ಕುಳಿತಾಗ ನಡೆದುಕೊಂಡಿದ್ದೇವೆ ಎಂಬ ಆತ್ಮ ವಿಮರ್ಶೆಯನ್ನು ನಾವೇ ಮಾಡಿಕೊಳ್ಳೋಣ.

12.00 ಪಿ.ಎಂ

ಅನೇಕ ಸಂದರ್ಭಗಳಲ್ಲಿ ಆಡಳಿತ ಪಕ್ಷದವರು ತಪ್ಪು ಮಾಡಿದಾಗ ನಾವು ಮಾಹಿತಿಗಳನ್ನು ಕೇಳುವುದಕ್ಕೆ ಅಥವಾ ಈ ರೀತಿಯಲ್ಲಿಯೇ ಹೋಗಬೇಕು ಎನ್ನುವ ದೃಷ್ಟಿಯಿಂದ ನಾವು ಆವೇಶಕ್ಕೆ ಒಳಗಾಗುತ್ತೇವೆ. ಆದರೆ ನಮ್ಮ ಪಕ್ಷದ ವತಿಯಿಂದ ಇಂಥ ಸಂದರ್ಭಗಳಲ್ಲಿ ತಮಗೆ ನಾನು ಭರವಸೆಯನ್ನು ಕೊಡುವುದರ ಮೂಲಕವಾಗಿ ಈ ರಾಜ್ಯದ ವಿಧಾನ ಸಭೆ ಸತ್ಸಂಪ್ರದಾಯದಿಂದ ನಡೆಯಬೇಕು, ಕೇವಲ ಪ್ರಚಾರಕ್ಕೋಸ್ಕರ ಧರಣಿ, ಪ್ರಚಾರಕ್ಕೋಸ್ಕರ ಅಬ್ಬರವನ್ನು ನಾವು ಮಾಡದೇ ವಿಷಯಾಧಾರಿತವಾಗಿರತಕ್ಕಂಥ ಕೆಲಸವನ್ನು ಮತ್ತು ಅಂಥ ವಿಷಯಗಳ ಮೇಲೆ ಚರ್ಚೆಯನ್ನು ಮಾಡಬೇಕು ಎನ್ನುವ ತೀರ್ಮಾನಕ್ಕೆ ನಾವು ಈಗಾಗಲೇ ಬಂದಿದ್ದೇವೆ. ಇದರ ಬಗ್ಗೆ ಈಗಾಗಲೇ ನಮ್ಮ ಪಕ್ಷದ ನಾಯಕರು ಸ್ಪಷ್ಟನೆಯನ್ನು ಮಾಡಿದ್ದಾರೆ. ಯಾವುದೇ ಸಂದರ್ಭಗಳಲ್ಲಿ ಜನರ ಪರವಾಗಿ ಇಂಥ ಕೆಲಸಗಳು ಆಗಲೇಬೇಕು ಎಂದಾಗ ಅಂಥ ವಿಷಯಗಳ ಬಗ್ಗೆ ತಮ್ಮ ಕೊಠಡಿಗೇ ಬಂದು ಅಂಥ ಜನಪರ ಕೆಲಸಗಳು ಆಗಲೇಬೇಕು ಎಂದು ಒತ್ತಾಯವನ್ನು ಮಾಡಬೇಕು ಎನ್ನುವ ತೀರ್ಮಾನಕ್ಕೆ ನಾವು ಬಂದಿದ್ದೇವೆ. ನಾವು ಸುಮಾರು 80 ಜನ ವಿರೋಧ ಪಕ್ಷದಲ್ಲಿ ಇದ್ದೇವೆ. ಆದರೆ ಎಲ್ಲರ ಪರವಾಗಿ ಮಾತನಾಡುವುದಕ್ಕೆ ನನಗೆ ಸಾಧ್ಯವಿಲ್ಲ. ನಮ್ಮ ಪಕ್ಷದ ಪರವಾಗಿ ಮಾತ್ರ ಈ ರೀತಿಯ ಭರವಸೆಯನ್ನು ತಮಗೆ ಕೊಡುತ್ತಿದ್ದೇನೆ. ತಾವು ಹೋರಾಟದ ಹಿನ್ನೆಲೆಯಲ್ಲಿ ಬಂದವರು ಹಾಗೂ ನಿಷ್ಠಾವಂತ ಕಾಂಗ್ರೆಸ್ಸಿಗರೂ ಕೂಡ ಆಗಿದ್ದೀರಿ. ಈ ಸದನದಲ್ಲಿ ಇಂದು ಇರುವ ಹಿರಿಯರುಗಳಾದ ಮಾನ್ಯ ಎಸ್.ಎಂ. ಕೃಷ್ಣರವರಾಗಲಿ, ಮಾನ್ಯ ಕೆ.ಹೆಚ್. ರಂಗನಾಥ್‌ರವರಾಗಲಿ, ಮಾನ್ಯ ಡಿ.ಬಿ. ಚಂದ್ರೇಗೌಡರವರಾಗಲಿ ಅಥವಾ ಮಾನ್ಯ ವಿ.ಎಸ್.ಕೌಜಲಗಿಯವರಾಗಲಿ, ಯಾರೂ ಕೂಡ ಪಕ್ಷವನ್ನು ತ್ಯಜಿಸಲಿಲ್ಲ, ಇವರುಗಳೆಲ್ಲರೂ ಪಕ್ಷದಲ್ಲಿದ್ದುಕೊಂಡೇ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿಕೊಂಡು ಬಂದವರು ಮತ್ತು ಇಂದು ಅದೇ ಪಕ್ಷದಿಂದಲೇ ಮತ್ತೆ ಇಲ್ಲಿಗೆ ಆರಿಸಿ ಬಂದಿದ್ದಾರೆ. ಹಾಗೂ ಅಧಿಕಾರದಲ್ಲೂ ಕೂಡ ಇದ್ದಾರೆ. ಆದರೆ ಆ ಸ್ಥಾನದಲ್ಲಿ ಇರತಕ್ಕಂಥ ಸಂದರ್ಭದಲ್ಲಿ ತಾವು ನಮ್ಮ ಪಕ್ಷಪಾತಿಗಳಾಗಿರಬೇಕು ಎನ್ನತಕ್ಕಂಥದ್ದೇ ನನ್ನ ಮನವಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾವು ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂಥವರು, ಈ ಸಂದರ್ಭದಲ್ಲಿ ನಾವು ಅನೇಕ ಮಾಹಿತಿಗಳನ್ನು ತರಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಇಲ್ಲಿಗೆ ಬಂದು ಮಾತನಾಡಬೇಕು ಎಂದು ಹೇಳಿದರೆ ಇದಕ್ಕೆ ಒಂದೆರಡು ಗಂಟೆಗಳ ಕಾಲ ವಿಷಯಗಳ ಬಗ್ಗೆ ತಯಾರಿ ಮಾಡಿಕೊಂಡು ಬರಬೇಕಾಗುತ್ತದೆ. ಅದಕ್ಕೆ ಸಿಬ್ಬಂದಿ ವರ್ಗ ನಮಗೂ ಇತ್ತು, ನಿಮಗೂ ಇರುತ್ತದೆ. ಆದುದರಿಂದ ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ತಾವು ನಮ್ಮ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವ ತಮಗೆ ಭಗವಂತನು ಹೆಚ್ಚಿನ ಶಕ್ತಿಯನ್ನು ಕೊಡಲೆಂದು ಹೇಳುತ್ತಾ, ಅಧ್ಯಕ್ಷ ಪೀಠದ ಘನತೆಯನ್ನು ಹೆಚ್ಚಿಸುವಲ್ಲಿ ನಾವೆಲ್ಲರೂ ಕೂಡ ನಿಮ್ಮ

ಜೊತೆಯಲ್ಲಿದ್ದುಕೊಂಡು ನಿಮ್ಮ ನಾಯಕತ್ವದಲ್ಲಿ ಈ ಸಭೆಯ ಸ್ಥಾನಮಾನವನ್ನು ಇನ್ನೂ ಹೆಚ್ಚಿಸುವಲ್ಲಿ ಪ್ರಯತ್ನಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಮತ್ತೊಮ್ಮೆ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ. ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನನಗೆ ತುಂಬಾ ಸಂತೋಷವಾಗಿದೆ. ನಮಗೆ ಮಾತ್ರವಲ್ಲ, ಇಲ್ಲಿರುವ ಎಲ್ಲರಿಗೂ ಕೂಡ ಸಂತೋಷವಾಗಿದೆ. ಇದಕ್ಕೆ ಕಾರಣ ತಮಗೆ ದೊರೆತಿರತಕ್ಕಂಥ ಹಿರಿತನ. ಮಾನ್ಯ ಸಭಾನಾಯಕರು, ಮಾನ್ಯ ವಿರೋಧಪಕ್ಷದ ನಾಯಕರು ಆಗಲೇ ಅಭಿವ್ಯಕ್ತ ಮಾಡಿದ ಅಭಿಪ್ರಾಯಕ್ಕೆ ನಾನೂ ಕೂಡ ಧನಿಗೂಡಿಸುತ್ತೇನೆ. ಮೊದಲನೆಯದಾಗಿ, ಎಲ್ಲಿಯೋ ಇಲ್ಲಿಯ ಸತ್ಸಂಪ್ರದಾಯಕ್ಕೆ ಚಂದ್ರೇಗೌಡರ ಕಾಲದಲ್ಲಿ ಅಪಚಾರವಾಯಿತೇನೋ ಎನ್ನುವ ಹಾಗೆ ಅಭಿಪ್ರಾಯ ಅಭಿವ್ಯಕ್ತ ಮಾಡಿದ್ದೀರಿ. ಇದರಲ್ಲಿ ನನ್ನ ಜವಾಬ್ದಾರಿ ಇತ್ತು. ಮಾನ್ಯ ಸಭಾನಾಯಕರು ಸೌಜನ್ಯದಿಂದ ಅದಕ್ಕೆ ನಮ್ಮ ಅನಿಸಿಕೆಗಳನ್ನು ಹೇಳಿದ್ದಾರೆ. ಆದರೆ ವಾಸ್ತವಾಂಶ ಏನೆಂದರೆ, ನಿಮ್ಮ ಜೊತೆ ಚರ್ಚೆ ಮಾಡುವುದಕ್ಕೆ ಅವಕಾಶವೇ ಕೊಡಲಿಲ್ಲವೆನ್ನುವುದೇ ಆಗಿದೆ. ನಿನ್ನೆ ಸಮಯಕ್ಕೆ ಸರಿಯಾಗಿ ಇಲ್ಲಿ ಇದ್ದದ್ದೇ ಒಂದು ಅರ್ಜಿ. ಹೀಗಿರುವಾಗ ನಾವು ಚರ್ಚೆ ಯಾರ ಹತ್ತಿರ ಮಾಡೋಣ? ಎರಡನೇ ಅರ್ಜಿ ಏನಾದರೂ ಇದ್ದಿದ್ದರೆ ನಾವು ಚರ್ಚೆ ಮಾಡಬೇಕಾಗಿತ್ತು. ಆದರೆ ಒಂದೇ ಅರ್ಜಿ ನಮ್ಮ ಮುಂದೆ ಇದ್ದಿದ್ದರಿಂದ ಚರ್ಚೆ ಮಾಡಬೇಕಾದ ಅಗತ್ಯವಿಲ್ಲವೆನಿಸಿತು. ಆದರೆ ಸೌಜನ್ಯ ಪೂರ್ವಕವಾಗಿ ಅದರ ಎಲ್ಲೆ ಮೀರಿ ನಾನು ಅಷ್ಟನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಷಯವೆಂದರೆ, ಈ ಸದನಕ್ಕೆ ಅತ್ಯಂತ ಪ್ರಾಮುಖ್ಯತೆಯನ್ನು ತಂದು ಕೊಟ್ಟವರೆಂದು ಇಂದಿಗೂ ಹಾಗೂ ಎಂದೆಂದಿಗೂ ನೆನಸಿಕೊಳ್ಳಬೇಕಾದವರೆಂದರೆ ಶ್ರೀಮಾನ್ ವೈಕುಂಠ ಬಾಳಿಗರವರು. ಅವರ ಕಾಲದಲ್ಲಿ ಹಾಕಿದಂಥ ಸತ್ಸಂಪ್ರದಾಯಗಳನ್ನು ನಾವು ಪಾಲನೆ ಮಾಡಿಕೊಂಡು ಬಂದಿದ್ದೇವೆ. ಈ ಸಾರಿಯ ವಿಶೇಷವೇನೆಂದರೆ ಮಾನ್ಯ ಸಭಾನಾಯಕರು ಈ ಸಭೆಯ ಅಧ್ಯಕ್ಷರಾಗಿ ಕೆಲಸ ಮಾಡಿದಂಥವರಾಗಿದ್ದಾರೆ, ಸಂಸಧೀಯ ವ್ಯವಹಾರಗಳ ಸಚಿವರಾಗಿ ಕೇಂದ್ರದಲ್ಲಿ ಕೆಲಸ ಮಾಡಿದವರೇ ಆಗಿರುತ್ತಾರೆ, ಇದಲ್ಲದೇ ಇಂದಿನ ಅಧ್ಯಕ್ಷರು ಕೂಡ ಮೇಲ್ಮನೆಯಲ್ಲಿ ಸಭಾಪತಿಗಳಾಗಿ ಕೆಲಸ ಮಾಡಿದವರಾಗಿದ್ದಾರೆ. ಹೀಗೆ ಎಲ್ಲರೂ ಕೂಡ ಈ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಕೆಲಸವನ್ನು ಮಾಡಿದ ಅನುಭವವನ್ನು ಪಡೆದವರೇ ಆಗಿದ್ದೇವೆ. ಇದರ ಜೊತೆಗೆ ಈಗ ಅನೇಕ ಜನ ಮಾರ್ಗದರ್ಶನ ಮಾಡುವವರೂ ಕೂಡ ಇಲ್ಲಿ ಇದ್ದಾರೆ. ಸನ್ಮಾನ್ಯ ಕೆ.ಹೆಚ್. ರಂಗನಾಥ್‌ರವರು, ಮಾನ್ಯ ವಿ.ಎಸ್. ಕೌಜಲಗಿಯವರಂಥ ಅನೇಕ ಹಿರಿಯರು ಈ ಶಾಸನಸಭೆಯಲ್ಲಿ ಇದ್ದೇವೆ. ಇಲ್ಲಿ ಮುಖ್ಯವಾಗಿ ಈ ಸಭೆ ಮಾದರಿ ಸಭೆಯಾಗಬೇಕು ಎನ್ನುವ ಅಭಿಪ್ರಾಯವನ್ನು ಮಾನ್ಯ ಸಭಾನಾಯಕರು, ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನಿಜವಾಗಿಯೂ ನಮ್ಮೆಲ್ಲರ ಉದ್ದೇಶವೂ ಕೂಡ ಅದೇ ಆಗಿದ್ದರೆ ಬಹಳಷ್ಟು ಸುಧಾರಣೆಗಳನ್ನು ಮಾಡಬಹುದಾಗಿದೆ. ಇದಕ್ಕಾಗಿ ಹಿಂದೆ ಬಿಸಿನೆಸ್ ಅಡ್ವೈಸರಿ ಕಮಿಟಿಯೊಳಗೆ ಅದರ ವ್ಯಾಪ್ತಿಯಲ್ಲಿ ಹಾಗೂ ಅದರ ವ್ಯಾಪ್ತಿಯ ಹೊರಗೆ ರೂಲ್ಸ್ ಅಂಡ್ ಪ್ರೊಸೀಜರ್ ಆಫ್ ಕಾಂಡಕ್ಟ್ ಆಫ್ ದಿ ಬಿಸಿನೆಸ್-ಕರ್ನಾಟಕ ಲೆಜಿಸ್ಲೆಟಿವ್ ಅಸೆಂಬ್ಲಿ ಎಂಬುದಕ್ಕೆ ಹೊಸ ಹೊಸ ನಿಯಮಗಳನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಮತ್ತು

ನೀವುಗಳು ಜೊತೆಗೂಡಿ ಕೆಲಸ ಮಾಡಿದ್ದನ್ನು ಇಂದು ನಾನು ನೆನಪು ಮಾಡಿಕೊಳ್ಳುತ್ತೇನೆ. ಆಗ ಅದನ್ನು ರಚನೆ ಮಾಡಿದೆವು. ಈಗ ಅದನ್ನು ಜಾರಿಗೆ ತರಬೇಕಾದ ಅತ್ಯಂತ ಕಠಿಣವಾದ ಸಂದರ್ಭಕ್ಕೆ ನಮ್ಮನ್ನು ನಾವು ಒಡ್ಡಿಕೊಂಡಿದ್ದೇವೆ. ಈ ಸಂಬಂಧವಾಗಿ ಸರ್ಕಾರದ ವತಿಯಿಂದ ಮೊದಲು ಮಾನ್ಯ ಸಭಾನಾಯಕರು ಈ ಬಗ್ಗೆ ಚರ್ಚೆ ಮಾಡಿದ್ದಾರೆ ಎಂಬುದನ್ನು ನಾನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಕನಿಷ್ಟ 100 ದಿನಗಳಾದರೂ ಈ ವಿಧಾನ ಸಭೆಯ ಅಧಿವೇಶನ ನಡೆಯಬೇಕು, ಇದನ್ನು ನಾವೇಕೆ ಮೊಟಕು ಮಾಡಬೇಕು ಎಂದು ಹೇಳಿದ್ದಾರಲ್ಲದೇ ಸಾಧ್ಯವಾದಷ್ಟು ಸಮಯಕ್ಕೆ ಸೀಮಿತವಾದಂಥ ಕೆಲಸ ಕಾರ್ಯಗಳು ನಡೆಯುವುದರಿಂದಲೇ ಈ ಸಭೆಗೆ ಹೆಚ್ಚು ಗೌರವ ಬರುತ್ತದೆ ಎನ್ನುವ ಅಭಿಪ್ರಾಯವನ್ನು ಅವರು ಖಾಸಗಿಯಾಗಿ ಹೇಳಿದ್ದಾರಲ್ಲದೇ ಇಂದಿನ ಸಭೆಯಲ್ಲಿ ಕೂಡ ಸೂಚ್ಯವಾಗಿ ತಿಳಿಸಿದ್ದಾರೆ. ಆ ದಿಸೆಯಲ್ಲಿ ತಾವು ನಿರೀಕ್ಷೆ ಮಾಡಿದುದಕ್ಕಿಂತಲೂ ಹೆಚ್ಚು ಸಹಕಾರ, ಬೆಂಬಲ ಈ ಸರ್ಕಾರದ ವತಿಯಿಂದ ತಮಗೆ ಮತ್ತು ಮಾನ್ಯ ವಿರೋಧ ಪಕ್ಷದವರಿಗೆ ಸಿಗುತ್ತದೆ ಎನ್ನುವ ಆಶ್ವಾಸನೆಯನ್ನು ತಮ್ಮ ಮೂಲಕ ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಈಗಾಗಲೇ ಹಕ್ಕುಭಾದ್ಯತೆಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಆದರೆ ವಿಶೇಷವಾಗಿ ನಾವು ಹಕ್ಕನ್ನಷ್ಟೇ ಚರ್ಚೆ ಮಾಡುತ್ತಾ ಬಂದಿದ್ದೇವೆ. ಆದುದರಿಂದ ಇನ್ನು ಮುಂದೆ ಭಾದ್ಯತೆಗಳ ಬಗ್ಗೆಯೂ ಕೂಡ ಚರ್ಚೆಯನ್ನು ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ಶ್ರೀಮಾನ್ ಪಿ.ಜಿ.ಆರ್ ಸಿಂಧ್ಯಾರವರು ಏನು ಸಲಹೆಯನ್ನು ಮಾಡಿದ್ದಾರೆ ಅದನ್ನು ಎಲ್ಲರೂ ಅನುಸರಿಸಬಹುದಾಗಿರುವಂಥದ್ದೇ ಆಗಿದೆ. ಅವರ ಅನುಭವ ಹಿರಿತನಕ್ಕೆ ಸರಿಯಾದ ಸಲಹೆಯನ್ನೇ ಮಾಡಿದ್ದಾರೆಂದು ನಾನಾದರೂ ಭಾವಿಸಿಕೊಳ್ಳುತ್ತೇನೆ. ಈ ಐದು ವರ್ಷಗಳ ಅವಧಿಯಲ್ಲಿ ಎಷ್ಟರಮಟ್ಟಿಗೆ ಸಂಸದೀಯ ವ್ಯವಹಾರವನ್ನು ಉತ್ತಮಗೊಳಿಸುವುದಕ್ಕೆ ಸಾಧ್ಯ, ಎಷ್ಟರಮಟ್ಟಿಗೆ ಶಾಸನಸಭೆಯಲ್ಲಿ ವಿಶೇಷವಾಗಿ ಮಾನ್ಯ ಸದಸ್ಯರುಗಳು ಆಸಕ್ತಿಯನ್ನು ಕಳೆದುಕೊಳ್ಳದೇ ಸಭೆಯಲ್ಲಿ ಹಾಜರಿರುವುದಕ್ಕೆ ಬೇಕಾದ ಪೂರಕವಾದ ವ್ಯವಸ್ಥೆ ಮತ್ತು ಈ ಶಾಸನಸಭೆ ರಾಷ್ಟ್ರೀಯ ಸಂಸತ್ತಿನಲ್ಲಿಯೂ ಕೂಡ ಆಕರ್ಷಣೀಯ ಸಭೆಯಾಗಿ ಹಿಂದೆ ಏನು ಉಳಿದಿತ್ತು ಅದೇ ಘನತೆ, ಗೌರವವನ್ನು ಹೆಚ್ಚಿಸುವುದಕ್ಕೆ ನಮ್ಮ ಕಡೆಯಿಂದ ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ನಾನು ತಮಗೆ ಸಂಪೂರ್ಣ ಸಹಕಾರ ನೀಡಿ ತಮ್ಮ ಆದೇಶವನ್ನು ಪಾಲನೆ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ. ಅಧ್ಯಕ್ಷ ಸ್ಥಾನದ ಕೆಲಸವನ್ನು ಯಶಸ್ವಿಯಾಗಿ ತಾವು ನಡೆಸುವುದಕ್ಕೆ ತಮಗೆ ದಯಾಮಯನಾದ ಭಗವಂತನು ಎಲ್ಲ ರೀತಿಯಾದಂಥ ಶಕ್ತಿ, ಸಾಮರ್ಥ್ಯ ಮತ್ತು ವಿಶೇಷವಾಗಿ ಧೈರ್ಯವನ್ನು ಕರುಣಿಸಲಿ ಎಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತ ನನ್ನ ಅಭಿನಂದನೆಗಳನ್ನು ಈ ಮೂಲಕ ಸಮರ್ಪಣೆ ಮಾಡುತ್ತೇನೆ. ನಮಸ್ಕಾರ.

+ ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಸನ್ಮಾನ್ಯ ಅಧ್ಯಕ್ಷರೆ, ತಮಗೆ ಈ ಸಭೆ ವಿಧಾನಸಭೆಯ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಜನತಾದಳದ ಜಾತ್ಯಾತೀತ ಪಕ್ಷದ ಹತ್ತು ಜನ ಶಾಸಕರುಗಳ ಪರವಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೇ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹೇಳಿದ ಹಾಗೆ ಕರ್ನಾಟಕದ ಜನರ ಸಮಸ್ಯೆಗಳನ್ನು ನಿವಾರಿಸುವಲ್ಲಿ ಮತ್ತು ಜನರ ಆಸೆಗಳನ್ನು ಈಡೇರಿಸುವಲ್ಲಿ ಮಾನ್ಯ ಎಸ್.ಎಂ. ಕೃಷ್ಣಾರವರ ನೇತೃತ್ವದ ಸರ್ಕಾರ ತೆಗೆದುಕೊಳ್ಳುವ ಕೆಲಸಗಳಿಗೆ ನಮ್ಮ ಪಕ್ಷದ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ. ಆದರೆ ಈ ನಿಟ್ಟಿನಲ್ಲಿ ಎಲ್ಲಿ

ತಾರತಮ್ಯವನ್ನು ತೋರಿಸುತ್ತಾರೆ ಅದನ್ನು ವಿರೋಧಿಸುವುದು ನಮ್ಮ ಹಕ್ಕಾಗಿರುತ್ತದೆ. ಅದನ್ನು ನಾವು ಮಾಡುತ್ತೇವೆ. ಇದನ್ನು ಚಲಾವಣೆ ಮಾಡಲು ಇಲ್ಲಿ ಧರಣಿಯನ್ನಾಗಲಿ ಮಾಡಲು ನಾವು ಸಿದ್ಧರಿದ್ದೇವೆ. ನಮ್ಮ ರಾಷ್ಟ್ರದ ಅಧ್ಯಕ್ಷರಾದ ಶ್ರೀಮಾನ್ ದೇವೇಗೌಡರು ಹಾಗೂ ರಾಜ್ಯಾಧ್ಯಕ್ಷರಾದ ಶ್ರೀಮಾನ್ ಸಿದ್ಧರಾಮಯ್ಯನವರು ಏನು ಕೆಲವು ನಿಯಮಗಳನ್ನು ಹೇಳಿ ಆದೇಶವನ್ನು ಕೊಟ್ಟಿದ್ದಾರೆ ಅದನ್ನು ನಾವು ಹತ್ತು ಜನ ಶಾಸಕರುಗಳು ಪಾಲನೆಯನ್ನು ಮಾಡಿ ನಮ್ಮ ಹಕ್ಕನ್ನು ಚಲಾವಣೆ ಮಾಡಿ ಹೋರಾಟ ಮಾಡಿ ಧರಣಿ ಮಾಡುವ ಸಂದರ್ಭ ಬಂದರೆ ಧರಣಿಯನ್ನೂ ಕೂಡ ಮಾಡುತ್ತೇವೆ. ಕೇವಲ ಪ್ರಚಾರಕ್ಕೋಸ್ಕರ ನಮ್ಮ ಪಕ್ಷ ಧರಣಿಯನ್ನು ಮಾಡುವುದಿಲ್ಲ. ಇದಕ್ಕಾಗಿಯೇ ಈ ಸಭೆಯ ಸಮಯವನ್ನು ದುರುಪಯೋಗಮಾಡಿಕೊಳ್ಳುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ತಾವು ಅತ್ಯಂತ ಹಿರಿಯ ರಾಜಕಾರಣಿಗಳಾಗಿ ಹಾಗೂ ವಿಧಾನ ಪರಿಷತ್ತಿನಲ್ಲಿ ಸಭಾಪತಿಗಳಾಗಿ ಕೆಲಸ ಮಾಡಿದ ಅನುಭವವನ್ನು ಹೊಂದಿದವರಾಗಿದ್ದೀರಿ. ಆ ಒಂದು ಅನುಭವದಲ್ಲಿ ತಾವು ಇಲ್ಲಿಯೂ ಈ ಸದನದ ಸಭಾಧ್ಯಕ್ಷರಾಗಿ ಕೆಲಸವನ್ನು ಅಷ್ಟೇ ಗಂಭೀರತೆಯಿಂದ ನಡೆಸಿಕೊಂಡು ಹೋಗುತ್ತೀರೆಂಬ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ. ಇನ್ನು ಇಲ್ಲಿ ಬಹಳ ಜನರ ಹೊಸ ಶಾಸಕರು, ಅವರು ಒಟ್ಟು 87 ಜನರು ಹೊಸಬರು ಇದ್ದಾರೆ. ಅವರಿಗೆ ಈ ಸಭೆಯಲ್ಲಿ ಹೆಚ್ಚಿನ ಅವಕಾಶವನ್ನು ಕೊಡುವಂತಹ ಜವಾಬ್ದಾರಿಯೂ ತಮ್ಮ ಮೇಲೆ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ಹಿಂದಿನ ಮಾನ್ಯ ಸಭಾಧ್ಯಕ್ಷರಾದಂತಹ ಈ ರಮೇಶ್ ಕುಮಾರ್‌ರವರು ಈ ಸಭೆಯನ್ನು ಗಂಭೀರವಾಗಿ, ಒಳ್ಳೆಯ ರೀತಿಯಿಂದ, ಸ್ನೇಹಮಯ ಮನೋಭಾವನೆಯಿಂದ ನಡೆಸಿಕೊಂಡು ಹೋದಂತಹ ವ್ಯಕ್ತಿಯಾಗಿದ್ದಾರೆ. ಅವರು ಈ ಸಭೆಗೆ ಅತ್ಯಂತ ಗೌರವ ತರುವಂತಹ ರೀತಿಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಇನ್ನು ಈ ಸಭೆಯ ನಾಯಕರಾದಂತಹ ಶ್ರೀ ಎಸ್.ಎಂ. ಕೃಷ್ಣರವರು ಸಹ ಹಿಂದೆ ಆ ಒಂದು ಸ್ಥಾನಕ್ಕೆ ಬಹಳ ಗಂಭೀರತೆಯಿಂದ, ಸೌಜನ್ಯದಿಂದ ಈ ಸಭೆಯನ್ನು ನಡೆಸಿಕೊಂಡು ಹೋಗುತ್ತಿದ್ದರು. ಈಗ ಅವರು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಈಗಲೂ ಅದೇ ಸೌಜನ್ಯತೆಯನ್ನು ಕಾಪಾಡಿಕೊಂಡು ಬರುತ್ತಾರೆಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ಇನ್ನು ಈ ಸಮಿತಿಗಳು ಎಂದು ಏನಿವೆ, ಅವುಗಳಿಗೆ ಈಗ ಹೊಸ ಹೊಸ ಸದಸ್ಯರುಗಳು ಯಾರಿದ್ದಾರೆ, ಅವರಿಗೆ ತಮ್ಮ ಅಧ್ಯಕ್ಷತೆಯಲ್ಲಿರುವಂತಹ ಕಮಿಟಿಗಳು ಏನಿವೆ, ಅದರಲ್ಲಿ ಈ ಹೊಸ ಸದಸ್ಯರುಗಳಿಗೆ ಈ ಸಮಿತಿಗಳಲ್ಲಿ ಸ್ಥಾನವನ್ನು ನೀಡಿ ಅವರು ಅನುಭವವನ್ನು ಪಡೆಯುವಂತೆ ವ್ಯವಸ್ಥೆ ಆಗಬೇಕು. ಅವರು ಪ್ರಮಾಣವಚನವನ್ನು ಸ್ವೀಕರಿಸುವಂತಹ ಸಂದರ್ಭದಲ್ಲಿ ತಾವು ನೋಡಿದ್ದೀರಿ. ಅವರು ಸೆಕೆಂಡ್ ಕೊಡುವಾಗ ಮತ್ತು ಅಧ್ಯಕ್ಷರ ಹತ್ತಿರ ಹೋಗುವಾಗ ಎಡಗಡೆಯಿಂದ ಬಲಕ್ಕೆ ಬರುವಂಥಾದ್ದು ಏನಿದೆ. ಅದನ್ನು ಯಾವ ರೀತಿಯಾಗಿ ನಿರ್ವಹಿಸಬೇಕು ಎಂಬ ಬಗ್ಗೆ ಸಂವಿಧಾನ ಪುಸ್ತಕವನ್ನು ಯಾರು ಓದಿಲ್ಲ. ಅವರುಗಳು ನೇರವಾಗಿ ಬಂದು ಸಭೆಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ, ಮತ್ತೆ ಅವರು ತಮ್ಮದೇ ಆದಂತಹ ಭಾವನೆಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ. ಇದರ ಬಗ್ಗೆ ನಾವು ಅವರಿಗೆ ಅನುಭವವನ್ನು ನೀಡಬೇಕಾಗುತ್ತದೆ. ಹಿಂದಿನ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಸಭೆಯಲ್ಲಿ ಯಾರಾದರೂ ಸದಸ್ಯರುಗಳು ಪ್ರಶ್ನೆಯನ್ನು ಕೇಳಿದಂತಹ ಸಂದರ್ಭದಲ್ಲಿ ಅವರು ಸರಿಯಾಗಿ

ಪ್ರಶ್ನೆಯನ್ನು ಕೇಳದಿದ್ದರೆ, ಅವರಿಗೆ ಸಹಾಯ ಮಾಡುತ್ತಿದ್ದರು. ಅವರು ಸದಸ್ಯರಿಗೆ ಈ ರೀತಿಯಾಗಿ ಪ್ರಶ್ನೆಯನ್ನು ಕೇಳಿ ಎಂದು ಹೇಳುತ್ತಿದ್ದರು, ಮತ್ತೆ ಹೊಸದಾಗಿ ಬಂದಂತಹ ಮಂತ್ರಿಗಳಿಗೆ ಅವರು ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಕೊಡದೇ ಇರುವಂತಹ ಸಂದರ್ಭದಲ್ಲಿ ಮಂತ್ರಿಗಳ ಪರವಾಗಿ ಅವರೇ ಉತ್ತರವನ್ನು ಕೊಟ್ಟು ಈ ಸಭೆಗೆ ಗೌರವವನ್ನು ತರುವಂತಹ ಕೆಲಸವನ್ನು ಕೂಡ ಅವರು ಮಾಡಿದ್ದಾರೆ. ಇದರ ಬಗ್ಗೆ ತಾವು ರೆಕಾರ್ಡ್‌ಗಳನ್ನು ತೆಗೆದು ನೋಡಬಹುದು. ನಾನು ನಮ್ಮ ಪಕ್ಷದ ಪರವಾಗಿ ನಾವು ಸಂಪೂರ್ಣವಾದ ಸಹಕಾರವನ್ನು ತಮಗೆ ನೀಡುತ್ತೇವೆನ್ನುವಂತಹ ಮಾತನ್ನು ಹೇಳಿ, ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ (ಹಿರಿಯೂರು) : ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ತಮ್ಮನ್ನು ಈ ಸಭೆಗೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಈ ಸಭೆ ಆಯ್ಕೆ ಮಾಡಿದೆ. ಇದರಲ್ಲಿ ನಾನೂ ಸಹ ತುಂಬಾ ಸಂತೋಷವಾಗಿ ಭಾಗಿಯಾಗುತ್ತಿದ್ದೇನೆ. ಮಾನ್ಯ ಸಭಾನಾಯಕರು ಈಗಾಗಲೇ ಈ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ, ನಮ್ಮೆಲ್ಲರ ಆಸೆ, ಆಕಾಂಕ್ಷೆಯಾಗಿರುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಏನೆಂದರೆ, ಈ ಸಭೆ ಇಡೀ ಭರತಖಂಡದಲ್ಲಿ ಮಾದರಿಯಾಗುವಂತಹ ರೀತಿಯಲ್ಲಿ ಕೆಲಸ ಮಾಡಬೇಕು. ಈ ರೀತಿಯಲ್ಲಿ ತಾವು ಕೆಲಸ ನಿರ್ವಹಿಸುವಂತಹ ಶಕ್ತಿ ನಿಮಗಿದೆ. ಮತ್ತೆ ತಮಗೆ ನಮ್ಮೆಲ್ಲರ ಸಹಕಾರವಿದೆ ಎನ್ನುವಂತಹ ಮಾತನ್ನು ನಾನಿಲ್ಲಿ ಪ್ರಸ್ತಾಪ ಮಾಡುತ್ತೇನೆ. ಅದಕ್ಕೆ ನನ್ನ ಧ್ವನಿಯನ್ನು ಕೂಡಿಸುತ್ತಿದ್ದೇನೆ. ತಮಗೆ ಈಗಾಗಲೇ ಸಭಾ ಕಲಾಪಗಳನ್ನು ನಡೆಸಿದಂತಹ ಅನುಭವವೂ ಇದೆ. ತಾವು ಆ ಕೆಲಸವನ್ನು ಮಾಡಿದಂಥಾದ್ದನ್ನು ನಾನು ವೈಯಕ್ತಿಕವಾಗಿ ನೋಡಿದ್ದೇನೆ, ಮತ್ತೆ ಈ ಸಭೆಯಲ್ಲಿರುವಂತಹ ನನ್ನ ಮಿತ್ರರೂ ಸಹ ನೋಡಿದ್ದಾರೆ. ಈ ಸಭೆಯ ಒಟ್ಟಾರೆ ಅಭಿಲಾಷೆ ಏನಿದೆ, ಅದನ್ನು ಕಾರ್ಯಗತ ಮಾಡುವುದರಲ್ಲಿ ತಾವು ಹಿಂದೆ ಬೀಳುವುದಿಲ್ಲವೆನ್ನುವಂತಹ ನಂಬಿಕೆ ನನಗಿದೆ. ನಾನು ಈ ಸಭೆಯ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳದೆ, ಈ ಒಂದು ಶಕ್ತಿಯನ್ನು ಭಗವಂತನು ತಮಗೆ ಕರುಣಿಸಲಿ, ತಾವು ಆ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂದು ಹಾರೈಸುತ್ತೇನೆ. ಇನ್ನು ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡುತ್ತಾ, ತಾವು ನಮ್ಮ ಪಕ್ಷಪಾತಿಯಾಗಬೇಕೆನ್ನುವಂತಹ ಮಾತನ್ನು ಹೇಳಿದರು. ಅದಕ್ಕೆ ಹೃದಯ ಎಡಗಡೆ ಇದೆ, ಅದು ಬಹಳ ಪ್ರಮುಖವಾಗಿರುವುದರಿಂದ, ಅದರ ಬಗ್ಗೆಯೂ ಗಮನವರಿಸಬೇಕೆನ್ನುವಂತಹ ಮಾತನ್ನು ಹೇಳುತ್ತಾ, ತಮಗೆ ಮತ್ತೊಮ್ಮೆ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ತಮ್ಮನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಈ ಸದನದ ಸದಸ್ಯರು ಆಯ್ಕೆ ಮಾಡಿದ್ದಾರೆ. ಅದಕ್ಕೆ ನಾನು ವೈಯಕ್ತಿಕವಾಗಿ ನನ್ನ ಜಿಲ್ಲೆಯ ಪರವಾಗಿ ತಮಗೆ ಅಭಿನಂದನೆಗಳನ್ನರ್ಪಿಸುತ್ತೇನೆ. ಇಲ್ಲಿ ಆಗಲೇ ಮಾನ್ಯ ಸದಸ್ಯರೊಬ್ಬರು ಹಿಂದೆ ಕೂಡ ಕೋಲಾರ ಜಿಲ್ಲೆಯವರೇ ಅಧ್ಯಕ್ಷರಾಗಿದ್ದರು, ಈ ಸಾರಿ ಕೂಡ ಕೋಲಾರ ಜಿಲ್ಲೆಯವರೇ ಅಧ್ಯಕ್ಷರಾದರೆಂದು ಹೇಳುತ್ತಿದ್ದರು. ತಾವು ನಿಷ್ಪಕ್ಷಪಾತವಾಗಿ ಎಲ್ಲರನ್ನೂ ನೋಡುತ್ತೀರಿ ಎನ್ನುವಂತಹ ಈ ದಿಕ್ಸೂಚಿ ನಿಮ್ಮನ್ನು ಹಾಗೆ ತೋರಿಸುತ್ತದೆಂದು ನಾನು ಈ ಸಮಯದಲ್ಲಿ ಹೇಳಲಿಚ್ಛಿಸುತ್ತೇನೆ. ತಾವು ವಿದ್ಯಾರ್ಥಿ ದಿಶೆಯಲ್ಲಿರುವಾಗಲೇ ಸ್ವಾತಂತ್ರ್ಯ ಹೋರಾಟಗಾರರಾಗಿ ಅದರಲ್ಲೂ ನಿಮ್ಮ ಅಣ್ಣನವರ

ಜೊತೆಗೂಡಿ ಕೆಲಸ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ನಿಮ್ಮ ಅಣ್ಣನವರು ಹಾಲಿನ ವಿಚಾರದಲ್ಲಿ ದೊಡ್ಡ ಅಂಧೋಲನವನ್ನು ಮಾಡಿದಂತಹ ಮಹಾನುಭಾವರಾಗಿದ್ದಾರೆ. ಅವರು ರೈತರಿಗೆ, ಕೃಷಿಕರಿಗೆ, ಬೆನ್ನೆಲುಬಾಗಿ ಕೆಲಸ ಮಾಡಿದ್ದಾರೆ. ಇವತ್ತು ರಾಜ್ಯದಲ್ಲಿ ಹಾಲಿನ ಸಹಕಾರ ಸಂಘಗಳು ಇದೆ ಎಂದರೆ ಅದು ನಿಮ್ಮ ಅಣ್ಣನವರ ಶ್ರಮ ಹಾಗೂ ಕೆಚ್ಚಿನಿಂದ ಆಗಿದ್ದು ನೀವು ಅಂತಹ ಕುಟುಂಬದಲ್ಲಿ ಹುಟ್ಟಿ ಇಲ್ಲಿ ಇವತ್ತು ಅಧ್ಯಕ್ಷರಾಗಿದ್ದೀರಿ. ತಾವು ವಿಧಾನಪರಿಷತ್ತಿನಲ್ಲಿ ಸಭಾಪತಿಗಳಾಗಿ ಇಪ್ಪತ್ತೈದು ವರ್ಷಗಳ ಹಿಂದೆ ಕೆಲಸ ಮಾಡಿದ್ದೀರಿ. ಆಗ ನಾವು ವಿದ್ಯಾರ್ಥಿಗಳಾಗಿದ್ದೆವು, ಅಲ್ಲೂ ಕೂಡ ತಾವು ಬಹಳ ಚೆನ್ನಾಗಿ ಕೆಲಸ ಮಾಡಿದ್ದೀರಿ. ತಾವು ಆ ರೀತಿಯಾಗಿ ದಕ್ಷತೆಯಿಂದ ಕೆಲಸ ಮಾಡಿಕೊಂಡು ಹೋಗಿರುವಂಥಾದ್ದು ಚರಿತ್ರೆಯ ಪುಟಗಳಲ್ಲಿ ಸೇರಿದೆ. ಅದೇ ರೀತಿಯಲ್ಲಿ ಈ ಮನೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತೀರೆನ್ನುವಂತಹ ಮಾತನ್ನು ಈ ಸಮಯದಲ್ಲಿ ಹೇಳಬೇಕಾಗುತ್ತದೆ. ಹಿಂದೆ ಬಹಳ ಜನರು ಸಭಾನಾಯಕರು, ಅಧ್ಯಕ್ಷರುಗಳಾಗಿದ್ದರು. ಅವರು ಮಾನ್ಯ ಡಿ.ಬಿ. ಚಂದ್ರೇಗೌಡರು ಇರಬಹುದು, ಮಾನ್ಯ ಕೆ.ಹೆಚ್. ರಂಗನಾಥ್ ಇರಬಹುದು, ಮತ್ತೆ ಮಾನ್ಯ ವಿ.ಎಸ್. ಕೌಜಲಗಿ ಇರಬಹುದು, ಆದರಲ್ಲಿ ಬಹಳ ಪ್ರಮುಖವಾಗಿ ನಾವು ಮಾನ್ಯ ವೈಕುಂಠ ಬಾಳಿಗಾರವರನ್ನು ನೆನಪು ಮಾಡಿಕೊಳ್ಳುತ್ತೇವೆ. ಅವರು ಕೂಡ ಅಧ್ಯಕ್ಷರಾಗಿದ್ದಾಗ ಈ ಮನೆಯಲ್ಲಿ ಎಷ್ಟು ಒಳ್ಳೆಯ ಹೆಸರು ಇತ್ತೆನುವಂಥಾದ್ದು ನಾವು ಈಗಲೂ ಅದನ್ನು ಸ್ಮರಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಆ ರೀತಿಯಾಗಿ ತಾವು ಕೂಡ ಕೆಲಸ ಮಾಡುತ್ತೀರೆನ್ನುವಂತಹ ನಂಬಿಕೆ ನನಗಿದೆ. ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದೇನೆಂದರೆ, ಹೋದ ಸಾರಿ ಈ ಶಾಸನಸಭೆಯಲ್ಲಿ ಮಾನ್ಯ ಹೆಚ್.ಎನ್. ನಂಜೇಗೌಡರು ಒಂದು ಪ್ರಮುಖವಾದ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಆಗ ನಾನು ಇಲ್ಲಿ ಕುಳಿತಿದ್ದಂತಹ ಸಂದರ್ಭದಲ್ಲಿ ನನಗೆ ಆಚೆಯಿಂದ ಒಂದು ಚೀಟಿ ಬಂತು. ನಾನು ನಿಮ್ಮನ್ನು ನೋಡಬೇಕು ಬೇಗನೆ ಬನ್ನಿ ಎಂದು ಸುದ್ದಿ ಬಂತು. ನನ್ನ ಗಮನ ಎಲ್ಲಾ ಅವರು ಮಾತನಾಡುತ್ತಿರುವಂತಹ ವಿಷಯದ ಬಗ್ಗೆ ಇತ್ತು. ನಾನು ಅರ್ಧ ಗಂಟೆ ತಡವಾಗಿ ಹೋದೆ, ಆಗ ಅವರು ನಾನು ಕೂಡಲೇ ಬರಲಿಲ್ಲವೆಂದು ಮುಖ ಪೆಚ್ಚು ಮಾಡಿಕೊಂಡು ಮಾತನಾಡಿದರು. ನಾನು ಹೇಳುವಂಥಾದ್ದು ಏನೆಂದರೆ, ಚೀಟಿಯನ್ನು ಕಳುಹಿಸುವಂಥಾದ್ದು ತಪ್ಪು ಎಂದು ಹೇಳುತ್ತಿಲ್ಲ, ಆದರೆ ನಾವು ಗಹನವಾಗಿ ನಮ್ಮನ್ನು ನಾವೇ ಆ ವಿಚಾರದಲ್ಲಿ ತೊಡಗಿಸಿಕೊಂಡಾಗ, ಈ ರೀತಿಯಾಗಿ ಚೀಟಿ ಬಂದಾಗ ನಾವು ಹೋಗದಿದ್ದರೆ, ನಮ್ಮ ಕ್ಷೇತ್ರದ ಜನರು ನಮ್ಮನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಇದಕ್ಕೆ ತಾವು ತಡೆಯೊಡ್ಡಿದರೆ ಅನುಕೂಲವೆಂದು ನನಗನಿಸುತ್ತದೆ. ನಾವು ಸಭೆಯಲ್ಲಿ ಇಂತಹ ಗಹನವಾದಂತಹ ವಿಚಾರಗಳು ಚರ್ಚೆಯಾಗುವಂತಹ ಸಂದರ್ಭದಲ್ಲಿ ಚೀಟಿ ಬಂದಾಗ ನಾವು ಎದ್ದು ಹೊರಗಡೆ ಹೋದಾಗ ನಮ್ಮ ಆಸಕ್ತಿಯೂ ಕಡಿಮೆಯಾಗುತ್ತದೆ. ಅವರು ಕೂಡ ಪೆಚ್ಚಾಗಿ ಮಾತನಾಡುವಂಥಾದ್ದು ನಮ್ಮ ಮನಸ್ಸಿಗೆ ನೋವಾಗುತ್ತದೆನ್ನುವಂತಹ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ಅಧ್ಯಕ್ಷರುಗಳು ಸಾಮಾನ್ಯವಾಗಿ ತಮ್ಮ ತಮ್ಮ ಕ್ಷೇತ್ರಗಳಿಗೆ ಹೆಚ್ಚಿಗೆ ಒತ್ತನ್ನು ಕೊಡುವಂಥಾದ್ದು ಇದೆ. ಹಿಂದೆಯೂ ಕೂಡ ಅದೇ ರೀತಿಯಲ್ಲಿ ಅಧ್ಯಕ್ಷರುಗಳು ಮಾಡಿದ್ದಾರೆ. ಈಗ ನಾವು ನೀವು ಪಕ್ಕಪಕ್ಕದ ಕ್ಷೇತ್ರದವರಾಗಿರುವಾಗ ನೀವು ನಿಮ್ಮ ಕ್ಷೇತ್ರದಲ್ಲಿ ಹೆಚ್ಚಿಗೆ ಕೆಲಸ ಮಾಡಿ ನನ್ನ ಕ್ಷೇತ್ರದಲ್ಲಿ ಕಡಿಮೆ ಕೆಲಸವಾದರೆ ಜನರು ಮಾನ್ಯ ಎಂ.ವಿ.

ವೆಂಕಟಪ್ಪನವರ ಕ್ಷೇತ್ರದಲ್ಲಿ ಎಷ್ಟು ಕೆಲಸವಾಗಿದೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಆದುದರಿಂದ ನಮ್ಮ ಕ್ಷೇತ್ರದ ಕೆಲಸವನ್ನು ಶೇ. 10,15 ರಷ್ಟಾದರೂ ಜಾಸ್ತಿ ಮಾಡಿ, ಇಪ್ಪತ್ತು ಸಾವಿರ ಮನೆಗಳನ್ನು ಕಟ್ಟುವಂಥಾದ್ದು ಎಂದು ಮಾಡುವುದಾದರೆ ಎಲ್ಲಾ 224 ಕ್ಷೇತ್ರಗಳಲ್ಲೂ ಒಂದೇ ರೀತಿಯಲ್ಲಿ ಕೆಲಸವಾಗುವಂಥಾದ್ದು ಆಗಬೇಕಾಗುತ್ತದೆ. ತಾವು ಅದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆನ್ನುವಂತಹ ಮಾತನ್ನು ಹೇಳಿ, ತಮಗೆ ಮತ್ತೊಮ್ಮೆ ನಮ್ಮ ಜಿಲ್ಲೆಯ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ತಮಗೆ ನಮ್ಮ ಸಹಕಾರ ಕೂಡ ಕೊಡುತ್ತೇವೆನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಈ ದಿವಸ ತಮ್ಮನ್ನು ನಾನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ತಮ್ಮ ಹೋರಾಟದ ಹಿನ್ನೆಲೆ ಒಂದು ಕಡೆಯಾದರೆ, ತಮ್ಮ ಈ ಎರಡು ಸದನಗಳ ಅನುಭವ ಏನು ಇದೆ. ಅದರಲ್ಲೂ ಮೂರು ಬಾರಿ ಸದಸ್ಯರಾಗಿ ವಿಧಾನ ಪರಿಷತ್ತಿನಲ್ಲಿ ಸಭಾಪತಿಗಳಾಗಿ, ಅಲ್ಲಿ ಕುಳಿತು ಅಲ್ಲಿನ ನಡವಳಿಕೆಗಳನ್ನು ಬಹಳ ಚಾಣಾಕ್ಷತನದಿಂದ ನಡೆಸಿಕೊಂಡು ಬಂದಿರತಕ್ಕಂಥ ಅನುಭವ ತಮಗೆ ಇದೆ. ಈ ಸದನದಲ್ಲಿ ಸದಸ್ಯರಾಗಿ ಕುಳಿತು ಬಹಳ ಸಕ್ರಿಯವಾಗಿ ಭಾಗವಹಿಸುತ್ತಿದ್ದೀರಿ, ಸದನದ ಕಲಾಪಗಳಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚಾಗಿ ತಮ್ಮ ಪಕ್ಷದ ಕಾರ್ಯಕ್ರಮಗಳನ್ನು ರೂಪಿಸುವಂಥಾದ್ದರಲ್ಲಿ, ಯಾವ ರೀತಿಯಲ್ಲಿ ಈ ಕಾರ್ಯಕ್ರಮಗಳನ್ನು ರೂಪಿಸಬೇಕೆನ್ನುವಂತಹ ವಿಚಾರದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅನೇಕ ಉತ್ತಮವಾದಂತಹ ಮಸೂದೆಗಳು ಈ ಸದನದಲ್ಲಿ ಬರುವಂಥಾದ್ದು ಅವು ಕಾನೂನು ಆಗುವಂಥಾದ್ದಕ್ಕೂ ಕೂಡ ತಾವು ಶ್ರದ್ದೆಯನ್ನು ವಹಿಸುತ್ತಿದ್ದೀರಿ. ಉದಾಹರಣೆಗೆ ಹೇಳುವುದಾದರೆ, ಈ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ವಿಚಾರದಲ್ಲಿ ತಮಗೆ ಎಷ್ಟು ಶ್ರದ್ಧೆ ಇತ್ತು ಎನ್ನುವುದರ ಬಗ್ಗೆ ನಾನು ಆಗಾಗ್ಗ ಸಂಪರ್ಕಿಸುತ್ತಿದ್ದುದು ಕೂಡ ಗೊತ್ತಿದೆ. ಜೊತೆಗೆ ಈ ಕೆರೆಗಳ ಅಭಿವೃದ್ಧಿಯನ್ನು ಸಾಧಿಸಬೇಕಾಗಿದ್ದರೆ, ಅವನ್ನು ಯಾವರೀತಿ ಅಭಿವೃದ್ಧಿಪಡಿಸಬೇಕೆನ್ನುವುದರ ಬಗ್ಗೆ ತಾವು ಒಂದು ಕರಡು ಮಸೂದೆಯನ್ನು ಕೂಡ ಸಿದ್ದಪಡಿಸಿದ್ದು ಗೊತ್ತಿದೆ. ಈ ರೀತಿ ವಿವಿಧ ರೀತಿಯಾದ ಅನುಭವವಿರತಕ್ಕವರು ಇವತ್ತು ಈ ಸ್ಥಾನದಲ್ಲಿ ಕುಳಿತಿರುವುದಕ್ಕೆ ನನಗೆ ನಿಜವಾಗಿಯೂ ತುಂಬಾ ಸಂತೋಷವಾಗಿದೆ. ಇವತ್ತು ಈ ಸದನದ ಅಧ್ಯಕ್ಷರಾಗಿದ್ದ ಮಾನ್ಯ ಡಿ.ಬಿ. ಚಂದ್ರೇಗೌಡರು, ಮಾನ್ಯ ಕೆ.ಹೆಚ್.ರಂಗನಾಥ್, ಮಾನ್ಯ ವಿ.ಎಸ್. ಕೌಜಲಗಿಯವರು ಹಾಗೂ ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಇವರೆಲ್ಲರೂ ಕೂಡ ಉತ್ತಮವಾದ, ಮತ್ತು ಅನುಕರಣೀಯವಾದ ರೀತಿಯಲ್ಲಿ ಈ ಸಭೆಯನ್ನು ನಡೆಸಿಕೊಂಡು ಬಂದಿದ್ದಾರೆ. ತಾವು ಕೂಡ ಅಷ್ಟೆ ಅನುಭವವಿರತಕ್ಕಂಥವರು ಇವತ್ತಿನ ದಿವಸ ಈ ಉನ್ನತವಾದ ಸ್ಥಾನವನ್ನು ಅಲಂಕರಿಸಿದ್ದೀರಿ, ಅದಕ್ಕೆ ನಾನು ಮತ್ತೊಮ್ಮೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಸದನದಲ್ಲಿ ತಮಗೆ ಅಪಾರವಾದ ಅನುಭವವಿರುವುದರಿಂದ, ಮಾನ್ಯ ಸದಸ್ಯರುಗಳು ನಡೆದುಕೊಳ್ಳುವ ನಡವಳಿಕೆಯ ಬಗ್ಗೆ ತಾವು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಈ ಸಭೆಯ ಘನತೆ ಗೌರವವನ್ನು ಕಾಪಾಡುವ ಹೆಚ್ಚಿನ ಜವಾಬ್ದಾರಿ ತಮ್ಮ ಮೇಲಿದೆ, ಅದಕ್ಕೆ ಸಂಪೂರ್ಣವಾದ ಸಹಕಾರವನ್ನು ಕೊಡಬೇಕಾಗಿರುವುದು ಈ ಎರಡೂ ಕಡೆಯಿರುವ ಮಾನ್ಯ ಸದಸ್ಯರುಗಳ ಜವಾಬ್ದಾರಿ ಕೂಡ

ಆಗಿರುತ್ತದೆ. ಇದನ್ನು ನಾನು ಅನೇಕ ಸಂದರ್ಭಗಳಲ್ಲಿ ನೋಡಿದ್ದೇನೆ. ಯಾವುದೇ ಪಕ್ಷದವರಾಗಿರಲಿ ಮಂತ್ರಿಗಳು ಉತ್ತರ ಕೊಡಬೇಕಾಗಿರುವಾಗಲೂ ಕೂಡ ಕೆಲವು ಸಂದರ್ಭಗಳಲ್ಲಿ ಏನು ಬರೆದಿರುತ್ತಾರೆ ಅದನ್ನು ಓದುವುದಕ್ಕೆ ಬರದಿರುವವರು ಸಹ ಉತ್ತರವನ್ನು ಕೊಡುತ್ತಿರುತ್ತಾರೆ. ಅಂಥ ಸಂದರ್ಭದಲ್ಲಿ ಅಂಥ ಮಂತ್ರಿಗಳಿಗೆ ಎಚ್ಚರಿಕೆಯನ್ನು ಕೂಡ ಕೊಡಬೇಕಾಗುತ್ತದೆ. ಮತ್ತೆ ಸದನದಲ್ಲಿ ಕಲಾಪಗಳು ನಡೆಯುವಾಗ ಯಾವ ಸದಸ್ಯರು ಮಾತನಾಡುತ್ತಿರುತ್ತಾರೆ ಆಗ ಅಧ್ಯಕ್ಷರ ಪೀಠದ ಮಧ್ಯೆ ಯಾರು ಕೂಡ ಓಡಾಡಬಾರದು, ಇದನ್ನು ಮುರಿಯುವುದರಲ್ಲಿ ಹೆಚ್ಚಿಗೆ ಸಮಯ ಪಾಲನೆಯಾಗುತ್ತಿದೆಯೇ ವಿನಹ ನಾನಾದರೂ ಇದನ್ನು ಒಂದು ಸಂದರ್ಭದಲ್ಲೂ ಕೂಡ ಗಮನಿಸಿರತಕ್ಕಂಥಾದ್ದು, ಅಧ್ಯಕ್ಷರ ಪೀಠದಲ್ಲಿ ಕುಳಿತಿರತಕ್ಕಂಥವರು ಗಮನಿಸಿರತಕ್ಕಂಥಾದ್ದು ಬಹಳ ವಿರಳ, ತಾವು ದಯವಿಟ್ಟು ಇದಕ್ಕೆ ಅವಕಾಶ ಕೊಡಬಾರದು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಉಜ್ವಲವಾದ ಪರಂಪರೆಗೆ ತಾವು ಹಕ್ಕುದಾರರಾಗಿದ್ದೀರೆನ್ನುವ ಮಾತನ್ನು ಹೇಳಿದ್ದಾರೆ. ಏಕೆಂದರೆ ಸ್ವಾತಂತ್ರ್ಯ ಪೂರ್ವದಿಂದಲೂ ಕೂಡ ಈ ಸದನ ಇದ್ದದ್ದು, ಅಂತಹ ಒಂದು ಪರಂಪರೆಯಿಂದ ನಾವು ಬಂದಿದ್ದೇವೆ, ಹಕ್ಕುದಾರರಾಗಿದ್ದೇವೆ. ಇಂತಹ ಒಂದು ಪರಂಪರೆ ಹಿನ್ನೆಲೆ ಇರುವ ಈ ಸದನ ವ್ಯವಸ್ಥಿತವಾದ ರೀತಿಯಲ್ಲಿ ನಡೆಯಬೇಕಾಗಿರುವುದು ಅತಿ ಅವಶ್ಯಕ. ಮತ್ತೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವಾಗ ಎರಡು ಜೇಬಿನಲ್ಲಿ ಕೈ ಇಟ್ಟುಕೊಂಡು ಕೇಳುತ್ತಿರುತ್ತಾರೆ, ಅದೆಲ್ಲಾ ಸರಿಯಾದ್ದಲ್ಲ, ಅಂತಹವರಿಗೆ ತಾವು ತಿಳುವಳಿಕೆಯನ್ನು ಕೂಡ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರಲ್ಲಿ ಅನೇಕರು ಈ ಸದನದಲ್ಲಿ ವೃತ್ತಪತ್ರಿಕೆಗಳನ್ನು ಓದುತ್ತಿರುತ್ತಾರೆ, ಆ ರೀತಿ ಮಾಡುವುದಕ್ಕೆ ನಿಯಮಾವಳಿಯ ಪ್ರಕಾರ ಇಲ್ಲಿ ಅವಕಾಶವಿಲ್ಲ. ಹೊಸದಾಗಿ ಬಂದಿರುವ ಮಾನ್ಯ ಸದಸ್ಯರಿಗೆ ಓರಿಯಂಟೇಷನ್ ಕೋರ್ಸ್ ಅನ್ನು ಸಾಮಾನ್ಯವಾಗಿ ಏರ್ಪಾಡು ಮಾಡುವ ಅವಕಾಶವಿದೆ. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಇವೆಲ್ಲವನ್ನು ಕೂಡ ತಿಳುವಳಿಕೆ ಮಾಡಿಕೊಡುವುದು ಅತಿ ಅವಶ್ಯಕ. ಈ ಸದನದ ಘನತೆ ಗಾಂಭೀರ್ಯವನ್ನು ಹೆಚ್ಚಿಸುವುದು, ಮತ್ತು ಇಡೀ ದೇಶದಲ್ಲಿ ಮಾದರಿಯಾಗಿ ಈ ಸದನದಲ್ಲಿ ಕಾರ್ಯಕಲಾಪಗಳನ್ನು ನಡೆಸಬೇಕಾಗಿರುವುದು ಅತಿ ಅವಶ್ಯಕ. ನಾನು ಬಹಳ ಸಾರಿ ನೋಡಿದ್ದೇನೆ ಮಾನ್ಯ ಸದಸ್ಯರುಗಳು ಪ್ರಶ್ನೆಗಳನ್ನು ಕಳುಹಿಸುತ್ತಾರೆ. ಈ ಬಗ್ಗೆ ತಾವು ನಿರ್ದಾಕ್ಷಿಣ್ಯವಾಗಿರಬೇಕಾಗುತ್ತದೆ, ತಾವು ಒಪ್ಪಿದರೆ ಮಾತ್ರ ಅವು ಪಟ್ಟಿಯಲ್ಲಿ ಬರುತ್ತವೆ. ಪ್ರತಿಯೊಂದು ಪ್ರಶ್ನೆಯನ್ನು ಕೂಡ ತಾವು ಕೂಲಂಕುಷವಾಗಿ ಪರಿಶೀಲಿಸಿ, ಆ ಪ್ರಶ್ನೆ ಗುರುತರವಾದದ್ದೇ ಇಲ್ಲವೇ ಎಂದು ತೀರ್ಮಾನ ಮಾಡುವ ಅಧಿಕಾರ ನಿಯಮಾವಳಿಯ ಪ್ರಕಾರ ತಮಗೆ ಇದೆ. ಆದುದರಿಂದ ಪ್ರತಿಯೊಂದು ಪ್ರಶ್ನೆಯ ಬಗ್ಗೆ ತಾವು ಪರಿಶೀಲನೆಯನ್ನು ಮಾಡಿ, ಯಾವ ಪ್ರಶ್ನೆಗಳು ಇಲ್ಲಿ ಬರಬೇಕೋ ಅಂತಹ ಪ್ರಶ್ನೆಗಳು ಇಲ್ಲಿ ಬರಬೇಕೆ ವಿನಃ ಮತ್ಯಾವುದು ಬರಬಾರದು, ಇದರಿಂದ ಅನವಶ್ಯಕವಾಗಿ ಈ ಸದನದ ಸಮಯವನ್ನು ವ್ಯರ್ಥ ಮಾಡುವುದನ್ನು ತಡೆಯಬಹುದು. ಉಪ ಪ್ರಶ್ನೆಗಳನ್ನು ಕೇಳುವಾಗಲೂ ಕೂಡ ಆ ಪ್ರಶ್ನೆಯ ಗಾಂಭೀರ್ಯತೆಯನ್ನು ಪರಿಗಣಿಸಿ, ಆ ಪ್ರಶ್ನೆಗಳ ಸಮಯವನ್ನು ನಿಗದಿಪಡಿಸಬೇಕಾಗುತ್ತದೆ. ಒಂದೊಂದು ಪ್ರಶ್ನೆಗಳು ಅರ್ಧಗಂಟೆ ಸಮಯವನ್ನು ತೆಗೆದುಕೊಂಡಿರುವ ನಿದರ್ಶನಗಳು ಇವೆ. ಇದಕ್ಕೆಲ್ಲಾ ದಯವಿಟ್ಟು ತಾವು ಅವಕಾಶ ಕೊಡದೆ ಈ ಸದನದಲ್ಲಿ ಕಾರ್ಯ ನಿರ್ವಹಿಸಬೇಕು. ನಾನು ಮೊದಲು ಈ ಸದನಕ್ಕೆ ಬಂದಂಥ ಸಂದರ್ಭದಲ್ಲಿ, ಸನ್ಮಾನ್ಯ ನಾಗರತ್ನಮ್ಮನವರು ಅಧ್ಯಕ್ಷರಾಗಿದ್ದು,

ಅವರು ಅಂತಹದ್ದಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಪಟ್ಟಿಯಲ್ಲಿ ಹತ್ತು ಪ್ರಶ್ನೆಗಳಿದ್ದರೆ, ಅಷ್ಟನ್ನು ಕೂಡ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದರು. ಒಂದು ಪ್ರಶ್ನೆಗೆ ಇಷ್ಟೇ ಉಪಪ್ರಶ್ನೆ ಕೇಳಬೇಕು ಎಂದು ನಿಗದಿಪಡಿಸಿ ಆದರ ಮೇಲೆ ಯಾರಿಗೂ ಅವಕಾಶ ಕೊಡುತ್ತಿರಲಿಲ್ಲ. ಈ ರೀತಿಯಾಗಿ ಇಲ್ಲಿ ಕೆಲವೊಂದು ನಿಬಂಧನೆಗಳನ್ನು ತಾವು ಪಾಲಿಸಬೇಕಾಗಿರುವುದು ತುಂಬಾ ಅವಶ್ಯಕ, ಈ ಸದನದ ಸಮಯವೇನಿದೆ ಅದು ಜನತೆಯ ಸದುಪಯೋಗಕ್ಕೆ ಬಳಕೆಯಾಗಬೇಕೆನ್ನುವುದು ಅತಿ ಮುಖ್ಯ. ಅನೇಕ ಸಂದರ್ಭಗಳಲ್ಲಿ ಈ ವಿಚಾರದಲ್ಲಿ ಲೋಪವಾಗಿರುವುದನ್ನು ನಾನು ಕಂಡಿದ್ದೇನೆ. ಈ ರೀತಿಯ ಲೋಪಗಳಿಗೆ ಅವಕಾಶವಿಲ್ಲದ ರೀತಿಯಲ್ಲಿ ಈ ಸದನದ ಕಲಾಪವನ್ನು ತಾವು ದಯವಿಟ್ಟು ನಡೆಸಬೇಕೆನ್ನುವ ಮನವಿಯನ್ನು ಈ ಸಂದರ್ಭದಲ್ಲಿ ನಾನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೆಲವರು ಭಾಷಣ ಮಾಡುವಾಗ ಅನಾವಶ್ಯಕವಾಗಿ ಹೇಳಿದ್ದನ್ನೇ ಪುನರುಚ್ಚಾರ ಮಾಡುವುದನ್ನು ಅನೇಕ ಸಂದರ್ಭಗಳಲ್ಲಿ ನಾವು ನೋಡಿದ್ದೇವೆ. ಅದಕ್ಕೆಲ್ಲಾ ತಾವು ಅವಕಾಶ ಕೊಡಬೇಕಾಗಿಲ್ಲ. ಇಲ್ಲಿ ಆ ವಿಚಾರವನ್ನು ಪ್ರಸ್ತಾಪಿಸುವಾಗಲೂ ಕೂಡ ಆ ವಿಷಯದ ಮಹತ್ವವನ್ನು ಆಧರಿಸಿ ಅವಕಾಶವನ್ನು ತಾವು ಕಲ್ಪಿಸಿಕೊಡಬೇಕಾಗಿದೆ. ಮಹತ್ವವಿಲ್ಲದ ವಿಚಾರಗಳನ್ನು ಪ್ರಸ್ತಾಪ ಮಾಡಿ ಈ ಸದನದ ಸಮಯವನ್ನು ವ್ಯಯ ಮಾಡುವುದು ಸರಿಯಾದ್ದಲ್ಲ ಎನ್ನುವ ತಿಳುವಳಿಕೆಯನ್ನು ಮಾನ್ಯ ಸದಸ್ಯರಿಗೆ ತಾವು ಕೊಡಬೇಕಾಗಿರುವ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಪರವಾಗಿ ಈಗಾಗಲೇ ನಮ್ಮ ನಾಯಕರು ತಿಳಿಸಿದ್ದಾರೆ, ನಮ್ಮ ಪರವಾಗಿ ನಮ್ಮೆಲ್ಲಾ ಸಹಕಾರವನ್ನು ನಾವು ಕೊಡುವುದಕ್ಕೆ ಸಿದ್ದರಿದ್ದೇವೆ, ಹಾಗೆ ಎರಡು ಕಡೆಯ ಸದಸ್ಯರು ಕೂಡ ತಮಗೆ ಸಹಕಾರವನ್ನು ಕೊಡುತ್ತಾರೆಂದು ಭಾವಿಸುತ್ತೇನೆ. ತಮ್ಮ ಗಮನಕ್ಕೆ ತರುವ ಮತ್ತೊಂದು ವಿಚಾರವೇನೆಂದರೆ, ನಾವು ನಿನ್ನೆಯಿಂದ ನೋಡುತ್ತಿದ್ದೇವೆ, ಮಾನ್ಯ ಸದಸ್ಯರು ಪ್ರಮಾಣವಚನ ಸ್ವೀಕಾರ ಮಾಡುವಾಗ ನಾನು ಕೆಲವು ವಿಷಯವನ್ನು ಗಮನಿಸಿದ್ದರಿಂದ, ಇವತ್ತು ರಾಜ್ಯಾಂಗದಲ್ಲಿ ಏನಿದೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತಮ್ಮ ಮೂಲಕ ತರುವುದಕ್ಕೆ ಇಚ್ಛೆಪಡುತ್ತೇನೆ. ಆರ್ಟಿಕಲ್ 188ರ ಪ್ರಕಾರ ಪ್ರಮಾಣವಚನ ಯಾವ ರೀತಿ ಇರಬೇಕೆನ್ನುವುದನ್ನು ನಿಗದಿಪಡಿಸಿದ್ದಾರೆ, 3ನೇ ಶೆಡ್ಯೂಲ್‌ನಲ್ಲಿ Form of Oath or Affirmation to be made by a Member of the Legislature of a state:

``I A.B., having been elected (or nominated) a member of the legislative Assembly (or Legislative Council) do swear in the name of the God that I will bear true faith solemnly affairm and allegiance to the constitution of India as by law established, that I will uphold the sovereignty and integrity of India and that I will faithfully discharge the duty upon which I am about to enter".

ಇಷ್ಟನ್ನು ನಮ್ಮ ರಾಜ್ಯಾಂಗದಲ್ಲಿ ನಿಗಧಿಪಡಿಸಲಾಗಿದೆ. ಇದಕ್ಕಿಂತ ವಿಭಿನ್ನವಾದ ರೀತಿಯಲ್ಲಿ ಇಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರೆ ಅದು ಕಡತದಲ್ಲಿ ಹೋಗುವುದಕ್ಕೆ ಅವಕಾಶವಿಲ್ಲ. ಮೊದಲನೆಯದಾಗಿ ಆ ಬಗ್ಗೆ ಇವತ್ತು ರೂಲಿಂಗ್ ಆಗಬೇಕು. ಆ ರೀತಿ ಏನಾದರೂ ನಡೆದು ಅವೆಲ್ಲವೂ

ಕೂಡ ಕಾರ್ಯಕಲಾಪಗಳಲ್ಲಿ ಸೇರುವುದಕ್ಕೆ ಸಾಧ್ಯವೇ ಇಲ್ಲ. ನಾನು ರಾಜ್ಯಾಂಗವನ್ನು ಎತ್ತಿ ತೋರಿಸುತ್ತಿದ್ದೇನೆ. ರಾಜ್ಯಾಂಗದಲ್ಲಿ ಏನು ನಮೂದಾಗಿದೆ ಅದನ್ನು ಬಿಟ್ಟು, ಅವರ್‍ಯಾರೇ ಸದಸ್ಯರಿರಲಿ ಬೇರೆ ರೀತಿಯಲ್ಲಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದಾರೆ ಎಂದರೆ ಅದ್ಯಾವುದೂ ಕಡತಕ್ಕೆ ಹೋಗಬಾರದು, ನಮೂದಾಗಬಾರದು ಎನ್ನುವ ರೂಲಿಂಗನ್ನು ತಾವು ಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

12.30 ಪಿ.ಎಂ

ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹಕ್ಕು ಮತ್ತು ಭಾಧ್ಯತೆಗಳ ಬಗ್ಗೆಯೂ ಸಹ ಹೇಳಿದ್ದಾರೆ. ಆದರೆ ಇಲ್ಲಿ ನಾವು ನೋಡುತ್ತಿರತಕ್ಕಂಥಾದ್ದು ಏನೆಂದರೆ, ಹಕ್ಕಿನ ಮತ ಚಲಾಯಿಸುವುದಕ್ಕೆ ನಾವು ಬಹಳ ಮುಂದಾಗುತ್ತೇವೆ. ಆದರೆ ನಮ್ಮ ಭಾಧ್ಯತೆಗಳೇನು ಎನ್ನತಕ್ಕಂಥಾದ್ದನ್ನು ಸಹ ಅರ್ಥ ಮಾಡಿಕೊಳ್ಳಬೇಕಾಗಿರತಕ್ಕಂಥಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಅದು ಈ ಸದನದಲ್ಲಿರತಕ್ಕಂಥ ಎಲ್ಲರ ಕರ್ತವ್ಯವೂ ಸಹ ಹೌದು. ಆ ಭಾದ್ಯತೆಗಳಿಗೆ ಚ್ಯುತಿ ಬಂದಂಥ ಕಾಲದಲ್ಲಿ ತಾವು ಅಂಥವರಿಗೆ ಎಚ್ಚರಿಕೆಯನ್ನು ನೀಡಬೇಕಾಗುತ್ತದೆ. ಇದು ಕೇವಲ ಹಕ್ಕುಗಳನ್ನು ಪ್ರಸ್ತಾವನೆ ಮಾಡತಕ್ಕಂಥಾದ್ದು ಅಲ್ಲ; ಭಾದ್ಯತೆಗಳನ್ನೂ ಕೂಡ ಜವಾಬ್ದಾರಿಯಾಗಿ ಹೊರಬೇಕು ಎಂದು ನೀವು ಮಾನ್ಯ ಸದಸ್ಯರಿಗೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ ಎನ್ನುವ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಾ, ತಮಗೆ ಎಲ್ಲಾ ರೀತಿಯಾದಂಥ ಸಹಕಾರವನ್ನು ನಾವು ನೀಡುತ್ತೇವೆ ಎನ್ನುವ ಭರವಸೆಯನ್ನು ಮತ್ತೊಮ್ಮೆ ನೀಡುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ತಾವು ಸರ್ವಾನುಮತದಿಂದ ಚುನಾಯಿತರಾಗಿದ್ದೀರಿ. ತಮಗೆ ಅದಕ್ಕಾಗಿ ನಮ್ಮೆಲ್ಲರ ಅಭಿನಂದನೆಗಳು. ಕೋರ್ಟಿನಲ್ಲಿ ನ್ಯಾಯಾಧೀಶರು ಹೇಗೋ, ಇಲ್ಲಿ ಸ್ಪೀಕರ್ ಕೂಡ ಅದೇ ರೀತಿ. ತಮಗೆ ಗೊತ್ತಿದೆ, ಸಾಮಾನ್ಯವಾಗಿ ನ್ಯಾಯಾಧೀಶರಾದಂಥವರು ಯಾವುದಾದರೂ ಒಂದು ಸಂಘದಲ್ಲಿ ಸದಸ್ಯರಾಗಿದ್ದಾರೆ, ನ್ಯಾಯಾಧೀಶರಾದ ತಕ್ಷಣ ಅದಕ್ಕೆ ರಾಜೀನಾಮೆ ಕೊಡುತ್ತಾರೆ. ಬಹುಶ: ತಾವೂ ಕೂಡ ಆ ಒಂದು ಒಳ್ಳೆಯ ಸಂಪ್ರದಾಯವನ್ನು ಮಾಡುತ್ತೀರಿ, ತಾವು ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದೀರಿ. ಆದರೆ ಈಗ ತಾವು ಸ್ಪೀಕರ್ ಆಗಿ ಚುನಾಯಿತರಾಗಿದ್ದೀರಿ. ನ್ಯಾಯಾಧೀಶರ ಒಂದು ಪಂಕ್ತಿಯಲ್ಲಿ ನೋಡಿದರೆ, ತಾವು ವಿರೋಧ ಪಕ್ಷದ ಸದಸ್ಯರಿಗೆ ಹೆಚ್ಚಿನ ಅವಕಾಶವನ್ನು ಕೊಡಬೇಕು. ಕೋರ್ಟಿನಲ್ಲಿ ವಾದಿ ಮತ್ತು ಪ್ರತಿವಾದಿಗಳು ಬಂದಾಗ ನ್ಯಾಯಾಧೀಶರು ಪ್ರತಿವಾದಿಗಳಿಗೆ ಹೆಚ್ಚಿನ ಅವಕಾಶವನ್ನು ಕೊಡುತ್ತಾರೆ. ಅಂದರೆ ವಾದಿಗೆ ಅವಕಾಶ ಕೊಡಬಾರದು ಎಂದಲ್ಲ. ಪ್ರತಿವಾದಿಯ ವಿಚಾರ ಏನು ಎನ್ನುವುದನ್ನು ತಾವು ಗಮನಿಸಬೇಕಾಗುತ್ತದೆ. ತಾವು ವಿಧಾನ ಪರಿಷತ್ತಿನ ಸಭಾಪತಿಗಳಾಗಿದ್ದೀರಿ. ತಮಗೆ ಹೆಚ್ಚಿನ ರೀತಿಯ ಅನುಭವ ಇದೆ. ಈಗ ತಮ್ಮನ್ನು ಸ್ಪೀಕರ್‌ರನ್ನಾಗಿ ಮಾಡಿರುವುದು ಬಹಳ ಸಂತೋಷಕರವಾದುದು. ಬಹುಶಃ ತಾವು ಮಂತ್ರಿಯಾಗುತ್ತೀರಿ ಎಂದು ನಾವು ತಿಳಿದಿದ್ದೆವು. ಏಕೆಂದರೆ ತಾವು ವಿಧಾನ ಪರಿಷತ್ತಿನಲ್ಲಿ ಸಭಾಪತಿಗಳಾಗಿದ್ದೀರಿ, ತಮಗೆ ಒಳ್ಳೆಯ ಅನುಭವವಿದ್ದು, ತಮ್ಮನ್ನು ಮಂತ್ರಿಯಾಗಿ ಕೆಲವು ದಿವಸ ನೋಡೋಣ ಎಂದು ನಮ್ಮ ಒಂದು ಆಸೆ ಇತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು, ತಾವು ಒಳ್ಳೆಯ

ರೀತಿಯಲ್ಲಿ ಕೆಲಸ ನಿರ್ವಹಿಸಲಿ ಎಂದು ತಮ್ಮನ್ನು ಸ್ಪೀಕರ್‌ರನ್ನಾಗಿ ಮಾಡಿದ್ದಾರೆ. ಇದು ಬಹಳ ಸಂತೋಷಕರವಾದುದು. ಮಾನ್ಯ ಅನಂತಸ್ವಾಮಿ ಅಯ್ಯಂಗಾರರು ಲೋಕಸಭೆಯಲ್ಲಿ ಇರುವಾಗ ಬಹಳ ಸಂತೋಷಕರವಾದ ಅನೇಕ ವಿಟ್ಟಿ ಆನ್ಸರ್ಸ್ ಕೊಡುತ್ತಿದ್ದರು. ಅದೇ ರೀತಿಯಾಗಿ ಇಲ್ಲಿದ್ದಂಥ ಬಾಳಿಗಾರವರನ್ನು ಇವತ್ತು ನಾನು ನೆನೆಯುತ್ತೇನೆ, ಅನೇಕ ರೀತಿಯಲ್ಲಿ ನಗಿಸಿ, ಸಂತೋಷದಿಂದ ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಹೇಗೆ ಒಂದೇ ರೀತಿಯಲ್ಲಿ ಹೋಗಬಹುದು ಎಂದು ತೋರಿಸಿದ್ದರು. ಅದನ್ನು ತಾವೂ ಮಾಡಬಹುದು, ಅಂಥ ಒಂದು ಅವಕಾಶವನ್ನು ದೇವರು ತಮಗೆ ಕೊಟ್ಟಿದ್ದಾರೆ. ಖಂಡಿತವಾಗಿಯೂ ಕೂಡ ತಮಗೆ ಬಹಳ ಮಹತ್ತರವಾದಂಥ ಒಂದು ಅವಕಾಶ ಬಂದಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದೇ ಒಂದು ವಿಷಯದಲ್ಲಿ ಹೇಳಿದರು, ಏನೋ ಒಂದು ಲೋಪವಾಗಿದೆ ಎಂದು. ಎಷ್ಟು ಚೆನ್ನಾಗಿ ಒಂದೇ ಒಂದು ನಿಮಿಷದಲ್ಲಿ ಅವರು ಈ ಒಂದು ವಿರೋಧವನ್ನು ಮಾಡಿದರು ಎಂದರೆ, ಏನೋ ಒಂದು ಸ್ವಲ್ಪ ಲೋಪವಾಗಿರಬಹುದು. I am sorry for that ಎಂದು ಅಂದರು, ಎಂಥ ಮಹತ್ತರವಾದ ವಿಷಯ. ಈ ರೀತಿಯಲ್ಲಿ ನಾವು ಒಂದು ಸತ್ಸಂಪ್ರದಾಯವನ್ನು ಸೃಷ್ಟಿ ಮಾಡಿಕೊಂಡು ಈ ವಿಧಾನಸಭೆ ಇಡೀ ಭಾರತದಲ್ಲೇ ಒಳ್ಳೆಯ ಹೆಸರನ್ನು ಪಡೆಯಬೇಕು ಎಂದು ಹೇಳುತ್ತೇನೆ. ಏಕೆಂದರೆ ಲೋಕಸಭೆಯಲ್ಲಿ ಕೂಡ ಅನೇಕ ಗಲಾಟೆಗಳಾಗಿವೆ. ಅನೇಕ ಅಸೆಂಬ್ಲಿಗಳಲ್ಲಿ ಕೂಡ ಬೇಕಾದಷ್ಟು ಗಲಾಟೆಗಳಾಗುತ್ತಿವೆ. ತಮಿಳುನಾಡಿನಲ್ಲಿ ಒಂದು ಸಲ ಗಲಾಟೆ ನಡೆದುದನ್ನು ನಾವು ನೋಡಿದ್ದೇವೆ. ಏಕೆಂದರೆ, ಇಲ್ಲಿ ಏನು ವಿಷಯ ನಡೆಯುತ್ತಿದೆ, ಏನು ಮಾತನಾಡುತ್ತಿದ್ದೇವೆ, ಯಾರು ಏನು ಮಾಡುತ್ತಿದ್ದಾರೆ ಎನ್ನುವುದನ್ನು ದೂರದರ್ಶನ ಮೂಲಕ ಎಲ್ಲರೂ ನೋಡುತ್ತಾರೆ, ಸಾರ್ವಜನಿಕರು ನೋಡುತ್ತಾರೆ, ಹಳ್ಳಿಹಳ್ಳಿಗಳಲ್ಲಿ ಕೂಡ ಇಲ್ಲಿ ಯಾವ ರೀತಿ ಕಾರ್ಯಕ್ರಮ ನಡೆಯುತ್ತಿದೆ ಎಂದು ನೋಡುತ್ತಾರೆ. ನಾವು ಚುನಾಯಿತರಾಗಿ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕಂಥವರು, ನಿಜವಾಗಿಯೂ ನಾವು ನಡೆದುಕೊಳ್ಳುವ ರೀತಿ ಯಾವುದು ಎನ್ನುವುದನ್ನು ನೋಡಬೇಕಾಗುತ್ತದೆ. ತಮ್ಮ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಮಾನ್ ಎಸ್.ಎಂ. ಕೃಷ್ಣರವರು ಹೇಳಿದ್ದಾರೆ. ಮಾನ್ಯ ಪಿ.ಜಿ.ಆರ್ ಸಿಂಧ್ಯಾರವರು ಹೇಳಿದ್ದಾರೆ, ಎಲ್ಲರೂ ಹೇಳಿದ್ದಾರೆ. ನಾವು ನಿಮ್ಮೊಡನೆ ವಿದ್ಯಾಭ್ಯಾಸ ಮಾಡತಕ್ಕಂಥ ಕಾಲದಲ್ಲಿ ಮಹಾರಾಜಾ ಕಾಲೇಜಿನಲ್ಲಿ ಕೂಡ ಇದ್ದಂಥವರು. ಇದೆಲ್ಲವನ್ನೂ ನೋಡಿದಾಗ ಬಹುಶಃ ತಾವು ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿ, ಅನೇಕ ರೀತಿಯಲ್ಲಿ ಎಲ್ಲರಿಗೂ ಅದರಲ್ಲೂ ಕೂಡ ವಿರೋಧ ಪಕ್ಷದ ಸದಸ್ಯರಿಗೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡಿಕೊಟ್ಟು ತಾವು ತೀರ್ಮಾನವನ್ನು ಮಾಡುತ್ತೀರಿ, ಕೋರ್ಟಿನಲ್ಲಿ ನ್ಯಾಯಾಧೀಶರು ಯಾವ ರೀತಿಯಾಗಿ ತೀರ್ಮಾನ ಮಾಡುತ್ತಾರೋ, ಅದೇ ರೀತಿಯಾಗಿ ತಾವು ಅನೇಕ ಸಮಸ್ಯೆಗಳ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ, ರೂಲಿಂಗ್ಸ್ ಕೊಡಬೇಕಾಗುತ್ತದೆ. ಇಂಥ ಒಂದು ವಿಷಯದಲ್ಲಿ ತಮ್ಮಿಂದ ಒಂದು ಒಳ್ಳೆಯ ಮಹತ್ತರವಾದ ಸೇವೆ ಆಗಲಿ ಎಂದು ನಾನು ನಿಮಗೆ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀಮತಿ ರಾಣಿ ಸತೀಶ್ (ಬಂದೀಖಾನೆ ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿನ ತಾವು ಈ ಸದನದ ಅಧ್ಯಕ್ಷರಾಗಿ ಅಧಿಕಾರವನ್ನು ಸ್ವೀಕಾರ

ಮಾಡಿದಂಥ ಸಂದರ್ಭದಲ್ಲಿ ನಾನು ಅಭಿಮಾನಪೂರ್ವಕವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಈ ಸದನಕ್ಕೆ ಬಂದಿರತಕ್ಕಂಥ ಎಲ್ಲ ಸಹೋದರ ಸಹೋದರಿಯರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕ ರಾಜ್ಯದ ರಾಜಕೀಯ ಪರಂಪರೆಯಲ್ಲಿ ಪ್ರಜಾಪ್ರಭುತ್ವದ ಪರಮಾಧಿಕಾರವನ್ನು ಎತ್ತಿ ಹಿಡಿಯತಕ್ಕಂಥ ಸ್ಥಾನವನ್ನು ತಾವು ಇವತ್ತು ತುಂಬಿದ್ದೀರಿ. ಅದರಲ್ಲೂ, ಅನೇಕ ಭಾಗಗಳಿಂದ, ವಿವಿಧ ಮತ ಪಂಥಗಳಿಂದ ಬಂದಿರತಕ್ಕಂಥ ಒಂದು ಸಮೂಹವನ್ನು ನಿಗ್ರಹಿಸುವಂಥ ಅಧಿಕಾರವನ್ನು ಹೊಂದಿರತಕ್ಕಂಥ ಈ ಸಂದರ್ಭದಲ್ಲಿ, ತಮ್ಮ ಅಧಿಕಾರಾವಧಿಯಲ್ಲಿ ರಾಜ್ಯದ ಬೆಳವಣಿಗೆ ಈ ಸದನದ ಮೂಲಕ ರಾಜ್ಯದ ಮೂಲೆಮೂಲೆಗೂ ಪಸರಿಸುವಂತಾಗಿ ಸಮಾಜದ ಬೆಳವಣಿಗೆಯ ಜೊತೆಗೆ ರಾಜಕೀಯ ಮುತ್ಸದ್ದಿತನದ ಬೆಳವಣಿಗೆಯೂ ತಮ್ಮ ಅಧ್ಯಕ್ಷತೆಯಲ್ಲಿ ಈ ಸದನದ ಮೂಲಕ ಆಗುತ್ತದೆ ಎನ್ನುವ ಭರವಸೆ ನನಗೆ ಇದೆ. ರಾಜಕೀಯ ಹಿನ್ನೆಲೆಯಲ್ಲಿ ನೋಡಿದರೆ, ತಾವಾದರೂ ಈ ಅಧಿಕಾರವನ್ನು ಈ ಹಿಂದೆ ಮಾಡಿದಂಥ ಅನುಭವವಿದ್ದು, ಆ ಅನುಭವದಲ್ಲಿ ಈ ಸದನದ ಗೌರವವನ್ನು ತಾವು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತೀರಿ ಎನ್ನುವ ಭರವಸೆ ನಮಗೆಲ್ಲರಿಗೂ ಇದೆ. ಈ ಸದನದ ಅನೇಕ ನನ್ನ ಸಹೋದರರು ತಮ್ಮ ಅನಿಸಿಕೆಯನ್ನು ಹೇಳುವಂಥ ಸಂದರ್ಭದಲ್ಲಿ, ತಮ್ಮ ಅಧಿಕಾರದ ಅವಧಿಯಲ್ಲಿ ಈ ಸದನದ ಸಮಯದ ಬಗ್ಗೆ ತಾವು ಹೆಚ್ಚು ಗಮನವನ್ನು ಹರಿಸಬೇಕೆಂದು ಹೇಳಿದರು. ಅದು ವಿರೋಧ ಪಕ್ಷದವರಾಗಿರಬಹುದು, ಆಡಳಿತ ಪಕ್ಷದವರಾಗಿರಬಹುದು, ಸಮಯೋಜಿತವಾದಂಥ, ಸಾಂದರ್ಭಿಕವಾದಂಥ, ವಿಷಯಕ್ಕೆ ಮಹತ್ವ ಕೊಡುವಂಥ ವಿಚಾರಕ್ಕೆ ತಮ್ಮ ಗಮನ ಹೆಚ್ಚು ಇರಲಿ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈ ಸದನದಲ್ಲಿರುವ ಮಹಿಳೆಯರ ಸಂಖ್ಯೆಯನ್ನು ತಾವು ಗಮನಿಸಬೇಕು. ನನ್ನ ಸಹೋದರರು ಮಾತನಾಡುವಾಗ, ಎಡ ಭಾಗಕ್ಕಷ್ಟೇ ಹೃದಯವಿದೆ ಎಂದು ಹೇಳಿದರು. ಆದರೆ ಬಲಭಾಗದಲ್ಲಿ ಮಹಿಳೆಯರು ಇರತಕ್ಕಂಥ ಸಂದರ್ಭದಲ್ಲಿ ಬಲಭಾಗಕ್ಕೂ ತಾವು ಹೆಚ್ಚಿನ ಗಮನವನ್ನು ಕೊಡಬೇಕು. ಅದರಲ್ಲೂ ನೂತನ ಮಹಿಳೆ ಸದಸ್ಯರು ಬಂದಿದ್ದಾರೆ. ಆದ್ದರಿಂದ ಮಹಿಳೆಯರಿಗೆ ಹೆಚ್ಚು ಅವಕಾಶವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಹಾಗೆ ಅವಕಾಶವನ್ನು ಕೊಡುವುದರಿಂದ ಮಹಿಳೆಯರಿಗೆ ಹೆಚ್ಚು ಅನುಭವ ಬರುತ್ತದೆ. ಈ ದಿಸೆಯಲ್ಲಿ ತಾವು ನನ್ನ ಮಹಿಳಾ ಸಹೋದರಿಯರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತಂದು, ತಮ್ಮ ಅಧಿಕಾರಾವಧಿಯಲ್ಲಿ ಈ ಸದನವನ್ನು ಬಹಳ ಎತ್ತರಕ್ಕೆ ಕೊಂಡೊಯ್ಯುವಂಥ ಶಕ್ತಿಯನ್ನು ಭಗವಂತ ತಮಗೆ ದಯಪಾಲಿಸಲಿ ಎನ್ನುವ ಮಾತನ್ನು ಹೇಳುತ್ತಾ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿ.ಎಸ್. ಕೌಜಲಗಿ (ಅರಬಾವಿ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನ ತಮ್ಮನ್ನು ಒಮ್ಮತದಿಂದ, ಬಹಳ ಜವಾಬ್ದಾರಿಯುತವಾದ ಮತ್ತು ಉನ್ನತ ಸ್ಥಾನದಲ್ಲಿ ಸಭಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಈ ಸದನದಲ್ಲಿರತಕ್ಕಂಥ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ, ಶ್ರೀಮಾನ್ ಕೆ.ಹೆಚ್. ರಂಗನಾಥ್‌ರವರೂ ಸಭಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿ ಶ್ರೀಮಾನ್ ಡಿ.ಬಿ. ಚಂದ್ರೇಗೌಡರು ಹಾಗೂ ನಾನು, ಈ ಸಭಾಧ್ಯಕ್ಷರ ಸ್ಥಾನವನ್ನಲಂಕರಿಸಿ ಈ ಸಭೆಯ ಘನತೆ ಗೌರವಗಳನ್ನು ಮತ್ತು ನಮ್ಮಲ್ಲಿರತಕ್ಕಂಥ ಶಾಸಕರ ಕರ್ತವ್ಯವನ್ನು ಯಾವ

ರೀತಿಯಾಗಿ ನಡೆಸಿಕೊಂಡು ಹೋಗಬೇಕು. ಅದನ್ನು ನಡೆಸಿಕೊಂಡು ಹೋಗುವುದರಲ್ಲಿ ನ್ಯಾಯವನ್ನು ದೊರಕಿಸಿಕೊಡುವಂಥ ಕೆಲಸವನ್ನು ಮಾಡಿಕೊಂಡು ಬಂದಂಥಾದ್ದು ಇದೆ. ಇನ್ನು ಈ ಬಗ್ಗೆ ನಾನು ತಮಗೆ ಹೆಚ್ಚು ಹೇಳಬೇಕಾಗಿಲ್ಲ. ಏಕೆಂದರೆ ತಾವು ಮೇಲ್ಮನೆ (ವಿಧಾನಪರಿಷತ್ತು)ಯಲ್ಲಿ ಸಭಾಪತಿಗಳಾಗಿ ಕೆಲಸವನ್ನು ಮಾಡಿ ಅಲ್ಲಿಯೂ ಸಹ ಅನುಭವವನ್ನು ಗಳಿಸಿಕೊಂಡಿದ್ದೀರಿ. ಅದೇ ರೀತಿ ಕಳೆದ ಸುಮಾರು 3 ವರ್ಷಗಳಲ್ಲಿ ನಾನು ತಮ್ಮ ಸಂಗಡ ಕಾಂಗ್ರೆಸ್ ಕಚೇರಿಯಲ್ಲಿ ಕೆಲಸ ಮಾಡುವಾಗ, ತಮ್ಮ ಕೆಲಸಕಾರ್ಯ ಯಾವರೀತಿ ನಡೆಯುತ್ತಿದೆ, ತಾವು ಎಷ್ಟು ಆಸಕ್ತಿವಹಿಸಿ ಕೆಲಸ ಮಾಡುತ್ತೀರಿ ಎನ್ನುವುದನ್ನು ನೋಡಿ ತಿಳಿದುಕೊಂಡಿದ್ದೇನೆ. ಅಂಥ ಒಬ್ಬ ವ್ಯಕ್ತಿಗೆ ಇವತ್ತು ಈ ಸದನದ ಅಧ್ಯಕ್ಷ ಸ್ಥಾನ ಸಿಕ್ಕಿದೆ. ಇನ್ನು ಪ್ರಾಮುಖ್ಯವಾಗಿ ಹೇಳುವುದಾದರೆ, ಈ ಸಲ ಈ ಸದನಕ್ಕೆ ಸುಮಾರು 80 ಜನ ಹೊಸ ಸದಸ್ಯರು ಆರಿಸಿ ಬಂದಿದ್ದಾರೆ. ನಾವು ಯಾವರೀತಿ ಈ ಸದನದಲ್ಲಿ ಪ್ರಶ್ನೆಗಳನ್ನು ಕೇಳಬೇಕು, ಸದನದ ಸಮಯವನ್ನು ಯಾವ ರೀತಿ ಸದುಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ಹೊಸ ಸದಸ್ಯರಿಗೆ ತಾವು ತಿಳಿಸಿಕೊಡಬೇಕು. ಮತ್ತು ವಿಷಯಗಳ ಮೇಲೆ ಚರ್ಚೆಮಾಡುವುದಕ್ಕೆ ಅವರಿಗೆ ಹೆಚ್ಚಿಗೆ ಅವಕಾಶ ಮಾಡಿಕೊಡಬೇಕು. ಹಾಗೆಯೇ, ಪ್ರಶ್ನೆಗಳನ್ನು ಯಾವ ರೀತಿ ಕೇಳಬೇಕು, ಅದಕ್ಕೆ ಮೊದಲು ನಾವು ಅಧ್ಯಯನ ಮಾಡಿಕೊಂಡು ಬರಬೇಕು ಮುಂತಾದವನ್ನು ಮಾನ್ಯ ವಿ. ಬೈರೇಗೌಡರು ಈಗಾಗಲೇ ಹೇಳಿದರು. ಪ್ರಶ್ನೆಯನ್ನು ನಾವು ಒಂದು ಮಿತಿಯಲ್ಲಿ ಕೇಳಿದರೆ ನಮಗೆ ಸಮಂಜಸವಾದ ಉತ್ತರ ಬರುತ್ತದೆ. ಅದರಂತೆ ಮಂತ್ರಿಗಳು ಸಹಿತ ಉತ್ತರ ಕೊಡುವಾಗ ಬಹಳ ಮಿತಿಯಿಂದ ಉತ್ತರ ಕೊಟ್ಟರೆ ಸದನದ ಸಮಯದಲ್ಲಿ ಪ್ರಶ್ನೋತ್ತರ ವೇಳೆ ಎಂದು ಇದ್ದು ಅದರಲ್ಲಿ 10-15 ಪ್ರಶ್ನೆಗಳನ್ನು ಏನು ನಾವು ತೆಗೆದುಕೊಳ್ಳುತ್ತಿದ್ದೇವೆ ಅದು ಎಲ್ಲವೂ ಸರಿಯಾದ ವೇಳೆಯಲ್ಲಿ ಮುಗಿಯುತ್ತದೆ ಮತ್ತು ಸಂಬಂಧಪಟ್ಟ ಎಲ್ಲಾ ಶಾಸಕರಿಗೂ ಸರಿಯಾದ ಅವಕಾಶ ಸಿಗುತ್ತದೆ. ಅನಂತರ, ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ ವಿಷಯ ಸಮಿತಿಗಳನ್ನು ಮಾಡಿದ್ದೆವು. ಅದನ್ನು ಜನತಾದಳ ಸರ್ಕಾರ ಕಳೆದ ಸಲ ಬೇಡ ಎಂದು ವಿಷಯ ಸಮಿತಿಗಳನ್ನು ತೆಗೆದುಹಾಕಿದರು. ನನ್ನ ಪ್ರಾರ್ಥನೆ ಏನೆಂದರೆ, ಈಗಲೂ ನಾವು ಚುನಾಯಿತ ಪ್ರತಿನಿಧಿಗಳಾಗಿ ಬಂದಿದ್ದೇವೆ, ಈ ಅವಧಿಯಲ್ಲಿ ರಾಜ್ಯದ ಆಗುಹೋಗುಗಳು ಮತ್ತು ಶಾಸನಗಳನ್ನು ರಚಿಸುವುದರಲ್ಲಿ ಮುಂತಾದವುಗಳನ್ನು ಶಾಸಕರಾದ ನಾವು ಅಧ್ಯಯನ ಮಾಡಬೇಕಾಗುತ್ತದೆ. ನಮಗೆ ನಮ್ಮದೇ ಆದಂಥ ಒಂದು ಲೆಜಿಸ್ಲೇಟರ್ಸ್ ಲೈಬ್ರರಿ ಇದೆ. ಆ ಲೈಬ್ರರಿಯಲ್ಲಿ ಸಾಕಷ್ಟು ವಿಚಾರ ಮತ್ತು ಅನುಭವದ ನುಡಿಗಳು ಏನು ಇವೆ ಅವುಗಳನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅಸ್ಪದ ಮಾಡಿಕೊಡಬೇಕು ಮತ್ತು ನಾವು ಪ್ರತಿಯೊಬ್ಬರೂ ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಆ ಒಂದು ಮಹತ್ತರವಾದ, ಮಹತ್ವದ ಕಡತ ಮತ್ತು ನ್ಯಾಯವಾದಂಥ ಕೆಲಸವನ್ನು ಈ ಎಲ್ಲಾ ಜನ ತಮ್ಮ ಮೇಲೆ ಹೊರಸಿದ್ದಾರೆ. ನನಗೆ ನಿಮ್ಮ ಬಗ್ಗೆ ವಿಶ್ವಾಸವಿದೆ. ಏಕೆಂದರೆ ತಾವು ಬಹಳ ದಿವಸಗಳಿಂದ ಈ ಕೆಲಸವನ್ನು ಮಾಡಿಕೊಂಡು ಬಂದು ಜನರಿಗೆ ಒಂದು ಒಳ್ಳೆಯ ಅಭಿಪ್ರಾಯವನ್ನು ತೋರಿಸಿಕೊಟ್ಟಿದ್ದೀರಿ, ಅದಕ್ಕೆ ಇನ್ನು ಮುಂದೆ ಬರುವ ದಿವಸಗಳಲ್ಲಿ ಈ ಸಭೆಯ ಘನತೆ ಗೌರವಗಳನ್ನು ಮತ್ತು ಶಾಸಕರಿಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಟ್ಟು ಈ ಸದನದ ಪರಂಪರೆಯನ್ನು ಕಾಪಾಡಿಕೊಂಡು ಹೋಗಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಸನ್ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಿಂದ ಆರಿಸಿ ಬಂದಿರತಕ್ಕಂಥ ನನಗಂತೂ ಈ ದಿನ ಬಹಳ ಸಂತೋಷವಾಗಿದೆ. ಹಿಂದೆ ನಮ್ಮ ಜಿಲ್ಲೆಯವರೇ ಆದ ಶ್ರೀ ರಮೇಶ್ ಕುಮಾರ್ ಅವರು ಈ ಸದನದ ಅಧ್ಯಕ್ಷರಾಗಿದ್ದರು. ತಕ್ಷಣದಲ್ಲಿಯೇ ತಾವು ಕೂಡ ಅಧ್ಯಕ್ಷರಾಗಿದ್ದೀರಿ, ತಾವು ಈ ಸದನದ ಘನತೆ ಗೌರವಗಳನ್ನು ಕಾಪಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಕೆಲವು ಮಿತ್ರರು ಮಾತನಾಡುತ್ತಾ ಪಾರ್ಟಿಯ ಪರವಾಗಿ ನಾವು ಇಷ್ಟು ಜನ ಆರಿಸಿ ಬಂದಿದ್ದೇವೆ ಎಂದು ಹೇಳಿದರು. ಆದರೆ ನಾವು ಬಹು ಸಂಖ್ಯೆಯಲ್ಲಿ ಪಕ್ಷೇತರರಾಗಿ, ಸ್ವತಂತ್ರರಾಗಿ ಆರಿಸಿ ಇಲ್ಲಿಗೆ ಬಂದಿದ್ದೇವೆ. ತಾವು ನಮಗೆ ಎಲ್ಲಾ ರೀತಿಯಲ್ಲಿ ರಕ್ಷಣೆ ಕೊಡಬೇಕು. ನಮಗೆ ಸ್ವಲ್ಪ ಪಕ್ಷಪಾತ ಎಂದರೆ ಹೆಚ್ಚಿಗೆ ಅವಕಾಶವನ್ನು ಕೊಡಬೇಕು. ಏಕೆಂದರೆ ಚುನಾವಣೆ ಸಂದರ್ಭದಲ್ಲಿ ಪಾರ್ಟಿಗಳು ಆದರೆ ಅವರಿಗೆ ಎ.ಬಿ.ಸಿ. ಎಂದು ಆದ್ಯತೆ ಕೊಟ್ಟರೆ ನಾವು ಸ್ವತಂತ್ರ ಅಭ್ಯರ್ಥಿಗಳು ಎಂದರೆ ಕೊನೆಯಲ್ಲಿ ಅವಕಾಶ ಇರುತ್ತದೆ. ಮತ್ತು ಚುನಾವಣೆ ಶೀಟ್‌ನಲ್ಲಿ ನಮ್ಮ ಸಿಂಬಲ್ ಮತ್ತು ಹೆಸರು ಕೊನೆಯಲ್ಲಿ ಇರುತ್ತದೆ. ಆ ತರಹ ತಾವು ದಯವಿಟ್ಟು ಮಾಡಬೇಡಿ. ಏಕೆಂದರೆ ನಮಗೆ ಪಕ್ಷಗಳ ಬೆಂಬಲ, ರಕ್ಷಣೆ ಇರುವುದಿಲ್ಲ. ನಾವು ಪಕ್ಷೇತರವಾಗಿ ಇಲ್ಲಿಗೆ ಆರಿಸಿ ಬಂದಿದ್ದೇವೆ. ನಾವು ಪಕ್ಷೇತರರೇ ಒಂದು ಗುಂಪಾಗಿ ಮಾಡಿಕೊಂಡು ಅದಕ್ಕೆ ಒಂದು ನಾಯಕನನ್ನು ಆರಿಸಿಕೊಳ್ಳಬೇಕು ಎಂದು ಈಗ ನಮ್ಮ ಮಿತ್ರರೆಲ್ಲ ಹೇಳುತ್ತಿದ್ದಾರೆ. ಪಕ್ಷೇತರರಾದ ನಾವು ಬೇರೆ ಒಂದು ಪಾರ್ಟಿಯಿಂದ ಅಥವಾ ಇನ್ನೊಂದು ಶಕ್ತಿಯ ಆಧಾರದಿಂದ ಬಂದಿಲ್ಲ, ನಾವು ಜನಗಳ ಹತ್ತಿರ ವಿಶ್ವಾಸ ಸಂಪಾದಿಸಿಕೊಂಡು ಆ ಕ್ಷೇತ್ರದಲ್ಲಿ ನಾವು ಕೆಲಸ ಮಾಡಿದ್ದಕ್ಕೆ ಜನಗಳು ನಮಗೆ ಆದ್ಯತೆ ಕೊಟ್ಟು ನಮ್ಮನ್ನು ಗೆಲ್ಲಿಸಿದ್ದಾರೆ. ಅಂಥ ಸ್ವತಂತ್ರ ಅಭ್ಯರ್ಥಿಗಳಿಗೆ ನೀವು ಹೆಚ್ಚಿಗೆ ಅವಕಾಶ ಮಾಡಿಕೊಡಬೇಕು. ನಮ್ಮ ತಂದೆಯವರು ಕೂಡ ಎಂ.ಎಲ್.ಎ., ಎಂ.ಎಲ್.ಸಿ. ಆಗಿದ್ದರು. ಅವರ ಕಾಲದಿಂದಲೂ ಈ ಸರ್ಕಾರ ಯಾವ ರೀತಿ ನಡೆದುಕೊಂಡು ಬಂದಿದೆ ಎನ್ನುವುದನ್ನು ನಾನು ಹೆಚ್ಚಾಗಿ ನೋಡಿದ್ದೇನೆ. ನಾನು ಹಿಂದೆ ಇಲ್ಲಿ ನಗರಾಭಿವೃದ್ಧಿ ಮಂತ್ರಿಯಾಗಿದ್ದೆ. ನಮ್ಮ ಮಾನ್ಯ ಚಂದ್ರೇಗೌಡರು ಕೂಡ ಇಲ್ಲಿ ಕುಳಿತಿದ್ದಾರೆ. ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಒಂದು ದಿನ ಕೂಡ ಅವರು ನನ್ನ ಖಾತೆಯ ಬಗ್ಗೆ ಈ ಸದನದಲ್ಲಿ ಪ್ರಶ್ನೆಯನ್ನು ಕೇಳಲಿಲ್ಲ. ಒಂದು ವರ್ಷದಲ್ಲಿ ನಾನು 5 ಸಾವಿರ ಫೈಲ್‌ಗಳನ್ನು ಕ್ಲಿಯರ್ ಮಾಡಿದ್ದೇನೆ. ಇಲ್ಲಿ ಒಂದು ಫೈಲ್‌ನ ವಿಚಾರದಲ್ಲಿ ಕೂಡ ಯಾರೂ ಪ್ರಶ್ನೆ ಮಾಡಲಿಲ್ಲ. ನಾನು ನನ್ನನ್ನು ಹೊಗಳಿಕೊಳ್ಳುತ್ತಿಲ್ಲ. ಏಕೆಂದರೆ ನಾವು ಅಷ್ಟು ಸೌಜನ್ಯತೆಯಿಂದ, ಪ್ರೀತಿವಿಶ್ವಾಸದಿಂದ ವಿರೋಧಪಕ್ಷದವರು ನಮ್ಮಲ್ಲಿಗೆ ಬಂದಾಗ ನಡೆದುಕೊಳ್ಳುತ್ತಿದ್ದೆವು. ಅದೇ ರೀತಿ ಅಂಥ ಸೌಜನ್ಯತೆಯಿಂದ ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ ಅವರು ಮತ್ತು ಅವರ ಮಂತ್ರಿವರ್ಗದವರು ನಡೆದುಕೊಳ್ಳುತ್ತಾರೆಯೇ? ನಾವು ಸ್ವತಂತ್ರ ಅಭ್ಯರ್ಥಿಗಳಾಗಿ ಗೆದ್ದು ಬಂದಂಥವರಿಗೆ ಹೆಚ್ಚಿನ ಆಧ್ಯತೆ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಧ್ಯಕ್ಷರು ನಮ್ಮ ಜಿಲ್ಲೆಯಿಂದ ಆರಿಸಿ ಬಂದಿರುವುದು ನನಗಂತೂ ಬಹಳ ಸಂತೋಷವಾಗಿದೆ. ತಮ್ಮನ್ನು ಅವಿರೋಧವಾಗಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕೆ ಈ ಸಭೆಗೆ ಮೊದಲು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರಿಂದ ಹೆಚ್ಚಿನ ಕೆಲಸಕಾರ್ಯಗಳಾಗಲಿ, ಇಲ್ಲಿಯ ಘನತೆ ಗೌರವಗಳನ್ನು ಎತ್ತಿ ಹಿಡಿಯಲಿ, ಅದರ ಜೊತೆಗೆ ನಾವು ಸದಸ್ಯರಾಗಿ ಬಂದಿದ್ದು ನಮ್ಮ ಘನತೆ ಗೌರವಗಳನ್ನು ಕೂಡ ಅವರು ಉಳಿಸಬೇಕಾಗುತ್ತದೆಂದು ಹೇಳುತ್ತಿದ್ದೇನೆ. ಅಧಿಕಾರಿವರ್ಗದವರು ಕಾನೂನು ಬಿಟ್ಟು ಹೋದಾಗ ನಾವು

ಕಾಗದ ಬರೆದಂಥ ಸಂದರ್ಭದಲ್ಲಿ ತಕ್ಷಣ ಅದಕ್ಕೆ ಉತ್ತರ ಬರತಕ್ಕಂಥಾದ್ದು, ಕಾನೂನು ರೀತಿಯಲ್ಲಿ ನಡೆದುಕೊಂಡರೆ ನಾವು ಸದನದಲ್ಲಿ ಕಾನೂನು ಮಾಡಿದ್ದಕ್ಕೆ ಬೆಲೆ ಇರುತ್ತದೆ. ಕಾನೂನು ಮಾಡಿದ್ದಕ್ಕೆ ಜನಗಳಿಗೆ ಅನುಕೂಲವಾಗುತ್ತದೆ. ಇದು ಪ್ರಜಾಪ್ರಭುತ್ವ, ಅದಕ್ಕೋಸ್ಕರ ತಾವು ಪಕ್ಷೇತರರಾಗಿ ಬಂದಿರತಕ್ಕಂಥವರಿಗೆ ಹೆಚ್ಚಿನ ಆದ್ಯತೆ, ಅವಕಾಶ ಕೊಡಬೇಕೆಂದು ಹೇಳಿ, ತಮಗೆ ದೇವರು ಹೆಚ್ಚು ಶಕ್ತಿಯನ್ನು ಕೊಟ್ಟು ಹೆಚ್ಚಿನ ರೀತಿಯಲ್ಲಿ ಈ ಸದನದ ಘನತೆಯನ್ನು ಕಾಪಾಡಿಕೊಂಡು ಬರಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಬಹುಶಃ ಇನ್ನು 6-7 ಜನರು ಮಾತನಾಡುವವರು ಇದ್ದಾರೆ. ಮಧ್ಯಾಹ್ನ 1 ಗಂಟೆ 20 ನಿಮಿಷಕ್ಕೆ ಈ ಸಭೆಯನ್ನು ಮುಗಿಸಬೇಕೆಂದು ನನ್ನ ಅಪೇಕ್ಷೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ವಿಧಾನಸಭೆಯ ಅಧ್ಯಕ್ಷ ಪೀಠಕ್ಕೆ, ಆ ಸ್ಥಾನಕ್ಕೆ ಅವಶ್ಯವಿರುವಂಥ ಎಲ್ಲಾ ಅರ್ಹತೆಗಳನ್ನು ಹೊಂದಿದಂಥ ಒಬ್ಬ ವ್ಯಕ್ತಿ ನಮಗೆ ಸಿಕ್ಕಿದ್ದು ಮಾನ್ಯ ಸಭಾನಾಯಕರು ಆಗಲೇ ಹೇಳಿದ ಪ್ರಕಾರ ಬಹಳ ಸಂತೋಷವಾಗಿದೆ. ಈ ಸಭೆಯ ಘನತೆ ಗೌರವವನ್ನು ಎತ್ತಿಹಿಡಿಯತಕ್ಕಂಥ ಸ್ಥಾನದಲ್ಲಿ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಸಭಾನಾಯಕರು ಹೇಳಿದ ಪ್ರಕಾರ, ಇಡೀ ರಾಷ್ಟ್ರದಲ್ಲಿ ತನ್ನದೇ ಆದಂಥ ಒಂದು ಆದರ್ಶವನ್ನು ಕಾಯ್ದುಕೊಂಡು ಬಂದಿರತಕ್ಕಂಥ ಈ ಸದನ, ಅವರ ಒಂದು ಉತ್ತರಾಧಿಕಾರಿಯಾಗಿ ತಾವು ಆ ಸ್ಥಾನಕ್ಕೆ ಬಂದಿರತಕ್ಕಂಥದ್ದನ್ನು ನೆನಪು ಮಾಡಿ ಕೊಟ್ಟಿದ್ದಾರೆ. ಈ ಒಂದು ಸದನದ ಆದರ್ಶ, ಸದನದ ಹಕ್ಕುಭಾದ್ಯತೆಗಳು, ಕಟ್ಟುಪಾಡುಗಳು, ವಿರೋಧ ಪಕ್ಷದವರ ಕರ್ತವ್ಯವನ್ನು ತಾವು ರಕ್ಷಣೆ ಮಾಡುತ್ತೀರಿ ಎನ್ನುವ ಮಾತನ್ನು ಹೇಳಿದ್ದಾರೆ. ಸ್ನೇಹಿತರು ಈಗಾಗಲೇ ಹೇಳಿದ ಹಾಗೆ - ಆಡಳಿತ ಪಕ್ಷ, ವಿರೋಧ ಪಕ್ಷ, ಈ ಪಕ್ಷಗಳಿಂದ ಬಂದಿರತಕ್ಕಂಥವರು ತಮ್ಮದೇ ಆದಂಥ ಪಕ್ಷದ ಸಂಖ್ಯೆಯ ಆಧಾರ ಇರುತ್ತದೆ ಎನ್ನುವ ಮಾತನ್ನು ಹೇಳಿದರು. ಬಹುತೇಕ ಪಕ್ಷೇತರರಾಗಿ ಆರಿಸಿ ಬಂದಿರತಕ್ಕಂಥವರ ಸಂಖ್ಯೆ ಕಡಿಮೆಯೇನೂ ಇಲ್ಲ. ಅವರೂ ಸಹ ಪಕ್ಷದಿಂದ ಆಯ್ಕೆಯಾದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳು ಇದ್ದಾರೆ. ಅವರು ಪಕ್ಷದ ಹೆಸರಿನಲ್ಲಾಗಲೀ, ನಾಯಕರ ಹೆಸರಿನಲ್ಲಾಗಲೀ ಆಯ್ಕೆಯಾಗಿಲ್ಲ. ಜನತೆಯ ಪ್ರೀತಿವಿಶ್ವಾಸದಿಂದ, ಜನತೆಯ ಬೆಂಬಲದಿಂದ, ಜನತೆಯ ಕೆಲಸಕಾರ್ಯಗಳನ್ನು ಮಾಡಿ, ಜನತೆಯ ಆಶೀರ್ವಾದದಿಂದ ಆಯ್ಕೆಯಾದಂಥ ಪಕ್ಷೇತರರಾಗಿದ್ದಾರೆ. ಅವರು ಅವರ ಕ್ಷೇತ್ರದ ಕೆಲಸಗಳಿಗೆ, ಸಮಸ್ಯೆಗಳಿಗೆ ತಮ್ಮಲ್ಲಿಗೆ ಬಂದು ವಿನಂತಿಯನ್ನು ಮಾಡಿಕೊಂಡಾಗ ಸಾಕಷ್ಟು ಅವಕಾಶವನ್ನು ತಾವು ಮಾಡಿಕೊಡುತ್ತೀರಿ ಎನ್ನುವ ವಿಶ್ವಾಸ ನನಗಿದೆ. ತಮಗೆ ಇರುವಂಥ ಅಪಾರ ಅನುಭವ, ಮತ್ತು ಈ ಸದನದ ಆದರ್ಶ ಗೌರವಗಳನ್ನು ಕಾಯ್ದುಕೊಂಡು ಹೋಗತಕ್ಕಂಥ ಎಲ್ಲಾ ರೀತಿಯ ಅರ್ಹತೆಗಳು ತಮ್ಮಲ್ಲಿ ಇರುವುದರಿಂದ ನಾನು ಸಂಪೂರ್ಣವಾದ ವಿಶ್ವಾಸವನ್ನು ತಮ್ಮಲ್ಲಿ ವ್ಯಕ್ತಪಡಿಸುತ್ತೇನೆ. ಎಲ್ಲಾ ರೀತಿಯ ಸಹಕಾರವನ್ನು ನಾವು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಮುಖ್ಯವಾಗಿ ರೈತರ ಸಮಸ್ಯೆ ಬಂದಾಗ, ಎರಡು ಸಾವಿರ ಇಸವಿ ಮುಗಿಯುತ್ತಾ ಬಂದಿದೆ, ನೀರಿನ ಬಳಕೆಯ ವಿಚಾರ ಪ್ರಸ್ತಾಪ ಆದಾಗ, ರೈತರ, ಕಾರ್ಮಿಕರ, ಹಿಂದುಳಿದವರ, ದಲಿತರ ಸಮಸ್ಯೆ ಬಂದಾಗ ಸರ್ಕಾರ ತನ್ನ

ಕರ್ತವ್ಯವನ್ನು ತಪ್ಪದೇ ಮಾಡಬೇಕಾಗಿದ್ದು ಸರ್ಕಾರ ಮತ್ತು ಮಾನ್ಯ ಸಭಾನಾಯಕರ ಕರ್ತವ್ಯ. ಆದರೆ ತನ್ನದೇ ಆದ ಇತಿಮಿತಿಯಲ್ಲಿ ಒತ್ತಡದಿಂದ, ಮರೆವಿನಿಂದ, ಅಚಾತುರ್ಯದಿಂದ ಸರ್ಕಾರ ತನ್ನ ಕರ್ತವ್ಯವನ್ನು ಮಾಡಲಿಕ್ಕೆ ತಪ್ಪಿದಾಗ ಆ ಬಗ್ಗೆ ಎಚ್ಚರಿಕೆಯನ್ನು ಕೊಡತಕ್ಕಂಥಾದ್ದು ಹಾಗೂ ಆ ಬಗ್ಗೆ ಸರ್ಕಾರದ ಗಮನವನ್ನು ಹರಿಸಲಿಕ್ಕೆ ವಿರೋಧಪಕ್ಷ ತನ್ನ ಕರ್ತವ್ಯವನ್ನು ಅನಿವಾರ್ಯವಾಗಿ ಮಾಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ತಾವು ನಮ್ಮ ಕಡೆಗೆ ರಕ್ಷಣೆಯನ್ನು ಕೊಟ್ಟು ಸರ್ಕಾರ ಸರಿಯಾಗಿ ತನ್ನ ಕರ್ತವ್ಯ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಿ ಎನ್ನತಕ್ಕಂಥ ವಿಶ್ವಾಸವನ್ನು ವ್ಯಕ್ತಪಡಿಸಿ, ವಿರೋಧ ಪಕ್ಷದವರಾಗಲಿ, ಆಡಳಿತ ಪಕ್ಷದವರಾಗಲಿ, ಜನರ ಕೆಲಸಗಳನ್ನು ಆಡಳಿತ ಪಕ್ಷದವರು ಸಂಪೂರ್ಣವಾಗಿ ಮಾಡಿದಾಗ ವಿರೋಧ ಪಕ್ಷಕ್ಕೆ ಕಡಿಮೆ ಕೆಲಸವಿರುತ್ತದೆ. ಆಡಳಿತ ಪಕ್ಷ ತನ್ನ ಕರ್ತವ್ಯದಲ್ಲಿ ಲೋಪವಾದಾಗ, ವಿರೋಧ ಪಕ್ಷದಲ್ಲಿರತಕ್ಕಂಥ ನಾವುಗಳು ಸಕಾಲದಲ್ಲಿ ಸೂಕ್ತವಾದ ಸಲಹೆಗಳನ್ನು ಮತ್ತು ಗಮನವನ್ನು ಹರಿಸಬೇಕಾದಂಥ ಕೆಲಸವನ್ನು ನಾವು ನಿಮ್ಮ ಮುಖಾಂತರ ಮಾಡಬೇಕಾಗುತ್ತದೆ. ಆದ್ದರಿಂದ, ವಿರೋಧ ಪಕ್ಷದಲ್ಲಿರುವ ನಮಗೆಲ್ಲರಿಗೂ ಸರ್ಕಾರ ತನ್ನ ಕರ್ತವ್ಯವನ್ನು ಚಾಚೂ ತಪ್ಪದೇ ಮಾಡಲಿಕ್ಕೆ ಸಹಕಾರವಾಗುವಂತೆ ನಮಗೆ ಅವಕಾಶ ಮಾಡಿಕೊಟ್ಟಾಗ, ಸರಕಾರ ಸರಿಯಾದ ಕೆಲಸ ಮಾಡಿ ಜನಪರವಾದಂಥ ಕಾರ್ಯವನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ತಮಗೆ ಈವರೆವಿಗೂ ಇರತಕ್ಕಂಥ ತಾಳ್ಮೆ ಹಾಗೂ ಹಿಂದೆ ಇರತಕ್ಕಂಥ ಅನುಭವ ನೋಡಿದರೆ, ಈ ಅಧ್ಯಕ್ಷ ಸ್ಥಾನಕ್ಕೆ ತಾವು ಅವಿರೋಧವಾಗಿ ಆಯ್ಕೆಯಾಗಿರುವುದರಿಂದ ಈ ಅಧ್ಯಕ್ಷ ಸ್ಥಾನಕ್ಕೆ ಹೆಚ್ಚಿನ ಗೌರವ ಬಂದಿದೆ ಎನ್ನುವ ಮಾತನ್ನು ಹೇಳಿ, ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ತಮ್ಮ ಹೋರಾಟದ ಮನೆತನದ ಹಿನ್ನೆಲೆ ಹಾಗೂ ತಮಗಿರತಕ್ಕಂಥ ಅಪಾರವಾದ ಅನುಭವದ ಹಿನ್ನೆಲೆಯಲ್ಲಿ ಈಗ ತಮಗೆ ಸಿಕ್ಕಿರತಕ್ಕಂಥ ಈ ಸ್ಥಾನಮಾನಕ್ಕೆ ಒಂದು ಗೌರವ ಬಂದಿದೆ. ಇದಕ್ಕಾಗಿ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಮನೆಯಲ್ಲಿರುವ ಎಲ್ಲಾ ಶಾಸಕರು ತಮ್ಮ ತಮ್ಮ ಕ್ಷೇತ್ರದ ಮಹಾ ಜನತೆಯ ಆಶೋತ್ತರಗಳನ್ನು ಈಡೇರಿಸುವ ಹೊಣೆ ಹೊತ್ತುಕೊಂಡು ಇಲ್ಲಿಗೆ ಬಂದಿರುತ್ತೇವೆ. ಇದನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಸಾಕಷ್ಟು ಅವಕಾಶಗಳು ದೊರಕದಿದ್ದಾಗ ಬಹಳ ಸಂಕಟವಾಗುತ್ತದೆ. ಇದನ್ನು ಪರಿಹರಿಸತಕ್ಕಂಥ ಮಹಾ ದೊಡ್ಡ ಶಕ್ತಿ ತಮ್ಮ ಪೀಠ. ಎಲ್ಲರಿಗೂ ಒಂದು ಅವಕಾಶವನ್ನು ಕೊಟ್ಟು ನ್ಯಾಯವನ್ನು ದೊರಕಿಸಿಕೊಟ್ಟಾಗ ನಮ್ಮನ್ನು ಮತ ಹಾಕಿ ಇಲ್ಲಿಗೆ ಕಳುಹಿಸಿ ಕೊಟ್ಟಿರುವ ಮಹಾಜನತೆಗೆ ತಾವು ಕೂಡ ನ್ಯಾಯವನ್ನು ದೊರಕಿಸಿ ಕೊಟ್ಟ ಹಾಗೆ ಆಗುತ್ತದೆ. ಕಳೆದ ಐದು ವರ್ಷಗಳಲ್ಲಿ ನಾನು ಈ ಮನೆಯ ಶಾಸಕನಾಗಿ ಕೆಲಸ ಮಾಡಿದ್ದೇನೆ. ನನಗೆ ಈ ಅಧ್ಯಕ್ಷ ಪೀಠ ಬಹಳ ದೊಡ್ಡ ಸಹಾಯ ಮಾಡಿದೆ. ಕಾರಣ ಏನೆಂದರೆ, ಇಲ್ಲಿ ಹಿರಿತನಕ್ಕೆ ಸಾಕಷ್ಟು ಮನ್ನಣೆ ಸಿಕ್ಕತಕ್ಕಂಥ ಸಂದರ್ಭದಲ್ಲಿ ಅವರು ಎಷ್ಟು ಹೊತ್ತು ಬೇಕಾದರೂ ಮಾತನಾಡಬಹುದು, ಸದನದ ವೇಳೆಯನ್ನು ತೆಗೆದುಕೊಳ್ಳಬಹುದು ಎಂದು ಹೇಳುವಂತಹ ಸಂದರ್ಭದಲ್ಲಿ ನಾವು ಚಡಪಡಿಸುತ್ತಿದ್ದೆವು. ಏಕೆಂದರೆ, ನಾವು ಕಿರಿಯರು, ಪ್ರಥಮವಾಗಿ ಶಾಸಕರಾಗಿ ಬಂದಿರುವುದರಿಂದ ನಮಗೆ ಈ ಒಂದು ಅವಕಾಶ ಸಿಕ್ಕುವುದಿಲ್ಲವೆಂದು ತಿಳಿದಿದ್ದೆವು. ಏಕೆಂದರೆ, ನಾವು ಕಿರಿಯರು ಇರುವುದರಿಂದ ನೀವು ಸ್ವಲ್ಪ ಜೋರು ಮಾಡಿದರೆ ನಾವು ಕುಳಿತುಕೊಳ್ಳುತ್ತೇವೆ ಎನ್ನುವ

ಭಾವನೆ ತಮ್ಮಲ್ಲಿರುತ್ತದೆ. ಸಹಜವಾಗಿ ತಮಗೆ ಸಲುಗೆ ಇರುವುದರಿಂದ ನಮಗೆ ಕುಳಿತುಕೊಳ್ಳಿ ಎಂದು ಹೇಳುತ್ತೀರಿ, ನಾವು ಅಧ್ಯಕ್ಷ ಪೀಠದ ಬಗ್ಗೆ ಹಾಗೂ ತಮ್ಮ ಬಗ್ಗೆ ಇರುವ ಗೌರವದಿಂದ ಹೆಚ್ಚಿಗೆ ಮಾತನಾಡದೇ ಕುಳಿತುಕೊಳ್ಳುತ್ತೇವೆ. ಇಂಥ ಸಂದರ್ಭದಲ್ಲಿ ನಮಗೆ ಎಲ್ಲೋ ಒಂದು ಕಡೆ ಸಂಕಟವಾಗುತ್ತದೆ. ಇದನ್ನು ನಾವು ನಿಮ್ಮ ಛೇಂಬರ್‌ನಲ್ಲಿ ತೋಡಿಕೊಳ್ಳಬೇಕಾಗುತ್ತದೆ. ನಾವು ಅನೇಕ ಸಾರಿ ಹಿಂದಿನ ಸ್ಪೀಕರ್ ಛೇಂಬರ್‌ಗೆ ಹೋಗಿ ಹೇಳಿದ್ದುಂಟು. ಇದೇನು ಸಾರ್ ಹಿರಿಯರವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ, ನಮಗೆ ಮಾತನಾಡಲಿಕ್ಕೆ ಹೋದರೆ 'ಕುಳಿತುಕೊಳ್ಳಿ' ಎಂದು ಹೇಳಿ ನಮ್ಮ ಭಾವನೆಗಳನ್ನು ಮೊಟುಕುಗೊಳಿಸುತ್ತೀರಿ, ನಮ್ಮ ಭಾವನೆಗಳನ್ನು ನಾವು ಎಲ್ಲಿ ವ್ಯಕ್ತಪಡಿಸಬೇಕು ಎಂದು ಕೇಳಿದಾಗ ಅವರು ಅದಕ್ಕಾಗಿ ಒಂದು ಸೂತ್ರವನ್ನು ಹಾಕಿದ್ದರು. ಅದೇನೆಂದರೆ, ಶೂನ್ಯವೇಳೆಯಲ್ಲಿ ನಮಗೆ ಹೆಚ್ಚಿನ ರಕ್ಷಣೆ ಸಿಗುತ್ತಿತ್ತು. ಶೂನ್ಯವೇಳೆಯಲ್ಲಿ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅತ್ಯವಶ್ಯಕ ವಿಷಯಗಳಿಗೆ ಸಂಬಂಧಪಟ್ಟಂತೆ ಮೂರು ನಿಮಿಷ, ಐದು ನಿಮಿಷ, ಮಾತನಾಡುವುದಕ್ಕೆ ಅನೇಕ ಶಾಸಕರುಗಳಿಗೆ ಅವಕಾಶ ಮಾಡಿಕೊಟ್ಟಿದ್ದರಿಂದ ಸರ್ಕಾರದ ಗಮನವನ್ನು ಸೆಳೆಯಬಹುದಾಗಿತ್ತು. ಈ ರೀತಿ ಒಂದು ದೊಡ್ಡ ಅವಕಾಶವನ್ನು ಅವರು ಮಾಡಿಕೊಟ್ಟಿದ್ದರು, ಈ ರೀತಿ ತಾವು ಕೂಡ ಒಂದು ಅವಕಾಶವನ್ನು ಮಾಡಿಕೊಡಬೇಕು. ಈಗಾಗಲೇ ಅನೇಕ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಈ ಬಾರಿ ಸುಮಾರು 80ಜನ ಹೊಸ ಶಾಸಕರು ಈ ಮನೆಗೆ ಬಂದಿದ್ದಾರೆ ಎಂದು ಹೇಳಿದರು ಇದರಿಂದ ಅಂಥವರಿಗೂ ಕೂಡ ಒಂದು ಒಳ್ಳೆಯ ಅವಕಾಶ ಕಲ್ಪಿಸಿಕೊಟ್ಟಂತೆ ಆಗುತ್ತದೆ. ವಿಶೇಷವಾಗಿ ಈ ಸದನ ಸುಗುಮವಾಗಿ ನಡೆಯಬೇಕಾದರೆ ಶಾಸಕರೆಲ್ಲರೂ ವಿಶೇಷವಾದ ತರಬೇತಿ ನೀಡುವುದು ಅವಶ್ಯಕವಿದೆ. ತಮ್ಮ ನೇತೃತ್ವದಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ನಮಗೆಲ್ಲರಿಗೂ ತರಬೇತಿ ಕೊಡಿಸುವಂತಹ ವ್ಯವಸ್ಥೆ ಮಾಡಬೇಕು. ಹಿಂದೆ ಶಾಸಕರುಗಳಿಗೆ ವಿಶೇಷವಾದ ಕೆಲವೊಂದು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರು. ಅದೇನೆಂದರೆ, ನಮ್ಮ ಕ್ಷೇತ್ರದಲ್ಲಿ ಒಂದು ಕಛೇರಿ ಹಾಗೂ ನಮಗೆ ಒಬ್ಬ ಆಪ್ತ ಕಾರ್ಯದರ್ಶಿ ಹೀಗೆ ಇಂಥ ಸೌಲಭ್ಯಗಳನ್ನು ಒದಗಿಸಿಕೊಡುವುದರಿಂದ ನಾವು ಹೆಚ್ಚಿನ ಮಟ್ಟದ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಂಥ ಸೌಲಭ್ಯಗಳನ್ನು ಒದಗಿಸಿಕೊಟ್ಟಿರತಕ್ಕಂಥ ಹಿಂದಿನ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರನ್ನು ನಾವು ಇಂದು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಶ್ರೀಯುತರು ಸರ್ಕಾರದ ಮೇಲೆ ಒತ್ತಡ ತಂದು ಇಂಥ ಅವಕಾಶವನ್ನು ನಮಗೆ ಕಲ್ಪಿಸಿ ಕೊಟ್ಟಿದ್ದರಿಂದ ನಾವು ಹೆಚ್ಚಿನ ಮಟ್ಟದ ಕೆಲಸ ಮಾಡುವುದಕ್ಕೆ ಅನುಕೂಲವಾಗಿತ್ತು. ಈ ಸೌಲಭ್ಯಗಳನ್ನು ಮುಂದುವರಿಸುವುದರ ಜೊತೆಗೆ ನಮಗೆ ಕೊಟ್ಟಿರತಕ್ಕಂಥ ಕಛೇರಿಗಳಲ್ಲಿ ದೂರವಾಣಿ ಸೌಲಭ್ಯ ಇರುವುದಿಲ್ಲ. ನಮಗೆ ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ನಮಗೊಂದು ಕಛೇರಿಯನ್ನು ಕೊಟ್ಟಿರುತ್ತಾರೆ, ಆದರೆ ಅಲ್ಲಿ ನಮಗೊಂದು ದೂರವಾಣಿ ಇಲ್ಲ, ಅಲ್ಲಿಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಹಾಗೂ ಇ.ಒ.ಅವರಿಗೆ ದೂರವಾಣಿ ಸೌಲಭ್ಯ ಇದೆ. ಹೀಗಿರುವಾಗ ಅದರಲ್ಲಿ ನಮಗೊಂದು ಭಾಗ ಎಕ್ಸ್‌ಟೆನೆಷನ್ ಕೊಟ್ಟರೆ ಇನ್ನೂ ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಅಧಿಕಾರಿಗಳನ್ನು ನಮ್ಮ ಹತ್ತಿರ ಕರೆದು ಮಾತನಾಡಿಸಿದರೆ ಅಧಿಕಾರಿಗಳ ಸಮಯ ಹೋಗುತ್ತದೆ. ಅಥವಾ ನಾನು ಹೋಗಿ ಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ, ತಮ್ಮ ಕಾಲಾವಧಿಯಲ್ಲಿ ಮಾನ್ಯ ಸಂಸದೀಯ ಸಚಿವರ ಜೊತೆಯಲ್ಲಿ ಚರ್ಚಿಸಿ

ಸರ್ಕಾರದ ಮೇಲೆ ಒತ್ತಡ ತಂದು ಇಂಥ ವಿಶೇಷವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ನಮಗೆಲ್ಲರಿಗೂ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಮೊನ್ನೆ ಪತ್ರಿಕೆಯಲ್ಲಿ ಮಾನ್ಯ ಸಂಸದೀಯ ಸಚಿವರು ಕೊಟ್ಟಿರತಕ್ಕಂಥ ಹೇಳಿಕೆಯನ್ನು ನೋಡಿದೆ; ಸ್ಪೀಕರ್ ಆಗಿ ಕೆಲಸ ಮಾಡಿರುವ ಹಿನ್ನೆಲೆಯಲ್ಲಿ ಅವರು ಈ ಮಾತನ್ನು ಹೇಳಿದ್ದಾರೆ. ಕನಿಷ್ಠ ನೂರು ದಿನಗಳ ಕಾಲ ನಾವು ಈ ಸದನವನ್ನು ನಡೆಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ರೀತಿ ಮಾಡುವುದಾದರೆ ತುಂಬ ಒಳ್ಳೆಯದಾಗುತ್ತದೆ. ನಾವು ಕೇವಲ 40-50-60 ದಿವಸ ಈ ಸಭೆ ನಡೆಸಿದರೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ, ಗಡಿಬಿಡಿಯಲ್ಲಿ ನಾವು ಹೋಗಿ ಬಿಡುತ್ತೇವೆ. ಒಟ್ಟಾರೆಯಾಗಿ ಈ ರೀತಿ ಮಾಡುವುದಾದರೆ ನಮಗೆ ತಾವು ಸಮಯ ಕೊಡುವುದಕ್ಕಾಗುವುದಿಲ್ಲ. ನಾವು ಕೂಡ ಒಂದು ರೀತಿಯಲ್ಲಿ ಜನರಿಗೆ ವಂಚನೆ ಮಾಡುತ್ತಿದ್ದೇವೆನೋ ಎಂದು ಅನಿಸುತ್ತದೆ. ನಮ್ಮ ಅಭಿಪ್ರಾಯವನ್ನು ಇಲ್ಲಿ ಮಂಡಿಸುವುದಕ್ಕೆ ಅದಕ್ಕೆ ಸಮಯ ಒದಗಿಸುವುದಕ್ಕೆ ತಮಗೆ ಆಗುವುದಿಲ್ಲ. ಇಂಥ ಸನ್ನಿವೇಶದಲ್ಲಿ ತಾವು ನೂರು ದಿನಗಳ ಕಾಲ ಸಭೆ ನಡೆಸಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಅನಿವಾರ್ಯದ ಧರಣಿ, ಸಭಾತ್ಯಾಗ, ಇಂಥದ್ದಕ್ಕೆ ಅವಕಾಶ ಮಾಡಿಕೊಡಬಾರದು ಏಕೆಂದರೆ, ಆ ಸಾಲಿನಲ್ಲಿ ಕುಳಿತಿರುವವರು ಬಹಳ ಹಿರಿಯರು ಇದ್ದಾರೆ. ಅಧಿಕಾರವನ್ನು ಅನುಭವಿಸಿರತಕ್ಕಂಥವರು ಇದ್ದಾರೆ, ರಾಜ್ಯದ ಜನತೆಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಬಂದಿರತಕ್ಕಂಥ ಹಿನ್ನೆಲೆಯಲ್ಲಿ ಹಿರಿಯರನೇಕರು ಇಲ್ಲಿ ಇರುವುದರಿಂದ ನಮ್ಮ ಕೆಲಸ ಅಷ್ಟರಮಟ್ಟಿಗೆ ಕಡಿಮೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಕಳೆದ ಬಾರಿ ನಾವು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದ್ದಾಗ ಇಡೀ ಒಂದು ದಿನ ಇದೇ ಸದನದಲ್ಲಿ ಮಲಗಿದ್ದೆವು. ಸರ್ಕಾರ ಮೊಂಡು ಬಿದ್ದಾಗ ಜನರ ಪರವಾಗಿ ನಾವು ಇಂಥ ಒಂದು ಹೋರಾಟಕ್ಕೆ ಇಳಿಯಬೇಕಾಗುತ್ತದೆ. ಇದನ್ನು ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಇದನ್ನು ನಾವು ಕೊನೆಯ ಅಸ್ತ್ರವಾಗಿ ಬಳಸಬೇಕಾಗುತ್ತದೆ. ಕೇವಲ ಪ್ರಚಾರಕ್ಕಾಗಿ ಇಂಥದ್ದನ್ನು ಮಾಡುವುದಕ್ಕೆ ನಾವು ಕೂಡ ತಯಾರಿಲ್ಲ, ತಮ್ಮ ನೇತೃತ್ವದಲ್ಲಿ ಸತ್ವಯುತವಾಗಿರತಕ್ಕಂಥ ಚರ್ಚೆ ಇಲ್ಲಿ ನಡೆಯಬೇಕು. ಕರ್ನಾಟಕದ ಜನತೆಗೆ ಶಕ್ತಿ ತರತಕ್ಕಂಥ ತೀರ್ಮಾನಗಳು ಇಲ್ಲಿ ಜರುಗಲಿ ಎಂದು ಹಾರೈಸಿ ತಮಗೆ ಮತ್ತೊಮ್ಮೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

+ಶ್ರೀ ಚೆಲುವರಾಯ ಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ಈ ಮಹಾ ಸದನಕ್ಕೆ ಅಧ್ಯಕ್ಷರಾಗಿ ತಾವು ಅವಿರೋಧವಾಗಿ ಆಯ್ಕೆಯಾಗಿರತಕ್ಕಂಥ ವಿಚಾರ ನಮಗೆ ಬಹಳ ಸಂತಸ ತಂದಿದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ ಅವರು ಹಿಂದೆ ಈ ಸದನದ ಅಧ್ಯಕ್ಷರಾಗಿ ಸಮರ್ಥವಾಗಿ ಕೆಲಸ ನಿರ್ವಹಿಸಿದ್ದಾರೆ. ಅದರಂತೆ ಮತ್ತೊಬ್ಬರಾದ ಮಾನ್ಯ ಡಿ.ಬಿ. ಚಂದ್ರೇಗೌಡರವರು ಕೂಡ ಸಭಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡು ಈ ಮಹಾ ಸದನದ ಕಣ್ಣುಗಳು ಇದ್ದ ಹಾಗೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಅಜೀಜ್ ಸೇಠ್‌ರವರು ಸಹ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತು ಸರ್ಕಾರ ಸರಿಯಾಗಿ ನಡೆಯಬೇಕಾದರೆ ವಿರೋಧ ಪಕ್ಷದ ಪಾತ್ರವನ್ನು ಬಹಳ ಸಮರ್ಥವಾಗಿ

ಮಾಡಿದ್ದಾರೆ. ಇಂಥ ಪ್ರಮುಖರು ಆಡಳಿತ ಪಕ್ಷದಲ್ಲಿ ಇರುವುದರಿಂದ, ಮಾನ್ಯ ಸಭಾಧ್ಯಕ್ಷರು ಆಡಳಿತ ಪಕ್ಷವನ್ನು ಮತ್ತು ವಿರೋಧಪಕ್ಷವನ್ನು ಸಮಭಾವದಿಂದ ನೋಡಿಕೊಳ್ಳುತ್ತಾರೆಂದು ನಾವು ನಂಬಿದ್ದೇವೆ. ಕೆಲವೊಮ್ಮೆ ಆಡಳಿತಪಕ್ಷದ ನ್ಯೂನತೆಗಳನ್ನು ಎತ್ತಿ ಹಿಡಿಯಬೇಕಾದರೆ ವಿರೋಧ ಪಕ್ಷದವರು ಸಮರ್ಥವಾಗಿ ಕಾರ್ಯ ನಿರ್ವಹಿಸಿದಾಗ ಅದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳದೇ, ಅಡಚಣೆ ಅಥವಾ ಆತಂಕವನ್ನು ಕೊಡದೇ ನಾವು ಎಲ್ಲರೂ ಒಂದೇ ಎಂದು ತಿಳಿದುಕೊಂಡು ವಿರೋಧಪಕ್ಷಕ್ಕೆ ಒಂದು ಗೌರವವನ್ನು ಸಹಕಾರವನ್ನು ಕೊಡುತ್ತೀರಿ ಎನ್ನುವ ನಂಬಿಕೆ ನಮಗೆ ಇದೆ. ಅದೇ ರೀತಿಯಲ್ಲಿ ನಾವೂ ಸಹ ಸರ್ಕಾರಕ್ಕೆ ಗೌರವವನ್ನು ಹಾಗೂ ಸರ್ಕಾರಕ್ಕೆ ಸಹಕಾರವನ್ನು ಕೊಡುತ್ತೇವೆ. ಒಟ್ಟಾರೆ ಈ ರಾಜ್ಯದ ಜನತೆಯ ಉದ್ದೇಶ ಸಫಲವಾಗುವ ರೀತಿಯಲ್ಲಿ ಈ ಸದನ ನಡೆಯಬೇಕಾಗುತ್ತದೆ.

1.00 ಪಿ.ಎಂ

ನಮಗೆ ಸ್ವಾತಂತ್ರ್ಯ ಬಂದು 53 ವರ್ಷಗಳಾದರೂ ಸಹ ನಮಗೆ ಬೇಕಾದಂಥ ಮೂಲ ಭೂತವಾದ ಸೌಲಭ್ಯಗಳನ್ನು ನಾವು ಇನ್ನೂ ನೋಡಿಲ್ಲ ಮತ್ತು ಕೆಲವರು ತುಳಿತಕ್ಕೆ ಒಳಗಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣವೇನು ಎಂಬುದನ್ನು ನಾವೆಲ್ಲರೂ ಒಟ್ಟಾಗಿ ಯೋಚನೆ ಮಾಡುವುದಕ್ಕಾಗಿಯೇ ಈ ಸದನ ನಡೆಸುವ ಉದ್ದೇಶವಾಗಿದೆ. ಪ್ರತಿ ವರ್ಷ ಯಾರೇ ಶಾಸಕರಾಗಲಿ ಅಥವಾ ಯಾವುದೇ ಪಕ್ಷ ಆಡಳಿತವನ್ನು ಮಾಡಲಿ, ಸರ್ಕಾರದ ಹಣ ಶೇಕಡ 80ರಿಂದ 90ರಷ್ಟು ಖರ್ಚಾಗಿದ್ದರೂ ಸಹ 50 ವರ್ಷಗಳ ನಂತರವು ಪ್ರತಿಯೊಂದು ಹಳ್ಳಿಗೆ ಮತ್ತು ಪ್ರತಿಯೊಬ್ಬ ಮನುಷ್ಯನಿಗೆ ಸಿಗಬೇಕಾದ ಮೂಲಭೂತ ಸವಲತ್ತುಗಳು ಸಿಗುವಂತಹ ಅವಕಾಶಗಳಲ್ಲಿ ನಾವಿನ್ನೂ ಅರ್ಧಕ್ಕೂ ತಲುಪಿಲ್ಲ. ದೇಶಕ್ಕೆ ವಂಚನೆ ಮಾಡದ ರೀತಿಯಲ್ಲಿ ಕೆಲಸ ಮಾಡುತ್ತೇವೆಂದು ಪ್ರಮಾಣ ಮಾಡುವಾಗ ನಾವೆಲ್ಲರೂ ಹೇಳುತ್ತೇವೆ. ಆದರೆ, ಆ ಕ್ಷಣವೇ ಮನಸ್ಸು ಮತ್ತೆ ಆ ಕಡೆ ಹೋಗುವಂತಹ ವ್ಯವಸ್ಥೆ ಇದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಈ ಅವಧಿಯಲ್ಲಿ ಒಂದು ವ್ಯವಸ್ಥೆಯನ್ನು ಒಳ್ಳೆಯ ರೀತಿಯಲ್ಲಿ ಹೋಗುವಂತೆ ಮಾಡಬೇಕು. ಕರ್ನಾಟಕ ರಾಜ್ಯದ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಜನರ ಅಭಿವೃದ್ಧಿಗೆ ಶ್ರಮಿಸಬೇಕೆಂಬುದೇ ಇವತ್ತಿನದಿವಸ ನಮ್ಮೆಲ್ಲರ ಉದ್ದೇಶವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ವಿರೋಧಪಕ್ಷದಲ್ಲಿದ್ದು ಕೆಲಸ ಮಾಡಿದಂಥ ಸಂದರ್ಭದಲ್ಲಿ ಸರ್ಕಾರದ ಓರೆ-ಕೋರೆಗಳನ್ನು ಎತ್ತಿ ಹಿಡಿದಿರುವುದನ್ನು ನಾವೆಲ್ಲರೂ ಕೇಳಿದ್ದೇವೆ. ತಮ್ಮ ಒಂದು ಅವಧಿಯಲ್ಲಿ ಸರ್ಕಾರದಿಂದ ವಿಶೇಷವಾದಂಥ ಗೌರವವನ್ನು ಮತ್ತು ವಿರೋಧಪಕ್ಷದ ಸಹಕಾರವನ್ನು ತೆಗೆದುಕೊಂಡು ಸದನವನ್ನು ಯಶಸ್ವಿಯಾಗಿ ನಡೆಸುತ್ತೀರೆಂದು ನಾವು ನಂಬಿಕೆ ಇಟ್ಟುಕೊಂಡಿದ್ದೇವೆ. ನಿಮ್ಮ ಕಾರ್ಯ ಯಶಸ್ವಿಯಾಗಲೆಂದು ದೇವರಲ್ಲಿ ಪ್ರಾರ್ಥಿಸಿ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : ಸನ್ಮಾನ್ಯ ಅಧ್ಯಕ್ಷರೆ, ತಮ್ಮನ್ನು ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆ ಮಾಡಿರುವುದನ್ನು ಅತ್ಯಂತ ಅಭಿಮಾನದಿಂದ ನಾನು ಸ್ವಾಗತ ಮಾಡುತ್ತೇನೆ. ಈ ಜನತಂತ್ರ ವ್ಯವಸ್ಥೆಯಲ್ಲಿ ಸಾರ್ವಭೌಮತ್ವ ಪಡೆದಂತಹ ಈ ಸದನದ ಸದಸ್ಯರುಗಳ ಮತ್ತು ಈ ಮನೆಯ ಸಂರಕ್ಷಣೆಯನ್ನು ಹೊತ್ತಂಥ ತಮಗೆ ಎಲ್ಲಾ ರೀತಿಯಲ್ಲಿಯೂ ಯಶಸ್ಸು

ಸಿಗಲೆಂದು ನ್ನಾನು ಹಾರೈಕೆ ಮಾಡುತ್ತೇನೆ. ತಾವು ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವಂತಹ ಸಂದರ್ಭದಲ್ಲಿ ನಿಮ್ಮ ಜೊತೆ ಕೆಲಸ ಮಾಡುವಂತಹ ಅವಕಾಶ ನನಗೆ ದೊರಕಿತ್ತು. ಶ್ರದ್ಧೆ, ಶಿಸ್ತು ಮತ್ತು ತಮ್ಮ ಕಾರ್ಯದಕ್ಷತೆಯಿಂದಾಗಿಯೇ ಈ ಒಂದು ಎತ್ತರದ ಅಧಿಕಾರ ಸಿಗುವುದಕ್ಕೆ ಸಾಕಷ್ಟು ದಾರಿಯಾಗಿದೆ ಎಂಬ ಭಾವನೆ ನನ್ನಲ್ಲಿದೆ. ತಾವು ಈ ಸದನದ ಸಂರಕ್ಷಣಾಧಿಕಾರಿಯಾಗಿ ಕೆಲಸ ನಿರ್ವಹಿಸುವಂತಹ ಸಂದರ್ಭದಲ್ಲಿ ತಮ್ಮ ನಿಷ್ಠೆ ನಿಷ್ಪಕ್ಷಪಾತವಾಗಿರಬೇಕೆಂದು ಮತ್ತು ಈ ಸದನದಲ್ಲಿ ನಡೆಯುವ ವ್ಯವಹಾರಗಳು 100ಕ್ಕೆ ನೂರರಷ್ಟು ಈ ನಾಡಿನ ಅಧಿಕೃತ ಭಾಷೆಯಾದ ಕನ್ನಡದಲ್ಲಿಯೇ ನಡೆಯಬೇಕೆಂಬ ಆಗ್ರಹವನ್ನು ಈ ಸಂದರ್ಭದಲ್ಲಿ ಮಾಡುತ್ತಾ ಮತ್ತೊಮ್ಮೆ ತಮಗೆ ಯಶಸ್ಸು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಈ ಸದನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರತಕ್ಕಂಥಾದ್ದು ಬಹಳ ಸಂತೋಷದ ವಿಚಾರ. ಈ ಸ್ಥಾನಕ್ಕೆ ತಮಗಿಂತ ಉತ್ತಮವಾದಂಥ ವ್ಯಕ್ತಿ ಯಾರೂ ಇಲ್ಲವೆಂದು ಈಗಾಗಲೇ ಮಾನ್ಯ ಸಭಾನಾಯಕರು ಹೇಳಿದ್ದಾರೆ. ಅದು ನಿಜ. ಕಾರಣ ಏನೆಂದರೆ, ತಮ್ಮ ವಯಸ್ಸಿನ ಆಧಾರದ ಮೇಲೆ ಹೇಳುತ್ತಿಲ್ಲ, ತಮ್ಮ ರಾಜಕೀಯ ಮತ್ತು ಕುಟುಂಬದ ಹಿನ್ನೆಲೆ ಹಾಗೂ ಅಧ್ಯಕ್ಷ ಸ್ಥಾನದ ಅನುಭವ ಇದನ್ನು ನೋಡಿದಾಗ ಮಾನ್ಯ ಸಭಾನಾಯಕರು ಹೇಳಿರತಕ್ಕಂಥಾದ್ದು ನಿಜವಾಗಿಯೂ ಸಹ ಒಳ್ಳೆಯ ಮಾತು. ಆದರೆ, ತಮ್ಮನ್ನು ಆಯ್ಕೆ ಮಾಡುವಾಗ ಒಂದು ಸಣ್ಣ ಲೋಪ ಆಯಿತೆಂದು ಹೇಳಿದ್ದಾರೆ. ಆಡಳಿತ ಪಕ್ಷದವರು ಪ್ರಸ್ತಾವನೆ ಮಾಡಿದಾಗ ನಮ್ಮ ವಿರೋಧಪಕ್ಷದ ಕಡೆಯಿಂದ ಅನುಮೋದನೆ ಮಾಡುತ್ತಿದ್ದೆವು. ಇದನ್ನು ತಾವು ಮಾಡದೇ ಇರುವುದರಿಂದ ನಮಗೆ ನೋವಾಗಿದೆಯೇ ಹೊರತು ಬೇರೇನೂ ಇಲ್ಲ. ತಮ್ಮ ವ್ಯಕ್ತಿತ್ವಕ್ಕೆ ತಕ್ಕಹಾಗೆ ಇದು ನಡೆದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಆದರೆ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ವಿಷಾದ ವ್ಯಕ್ತ ಮಾಡಿದ್ದಾರೆ. ನಮ್ಮ ಕರ್ನಾಟಕ ವಿಧಾನಸಭೆಯ ಇತಿಹಾಸ ಬಹಳ ದೊಡ್ಡದು ಮತ್ತು ಪರಂಪರೆ ಕೂಡ ಬಹಳ ದೊಡ್ಡದು. ಇಡೀ ಪ್ರಪಂಚದಲ್ಲಿಯೇ ನಮ್ಮ ವಿಧಾನಸಭೆಯ ಒಂದು ಹಿರಿಮೆಯನ್ನು ಮೊದಲಿನಿಂದಲೂ ನಾವು ಕಾಪಾಡಿಕೊಂಡು ಬಂದಿದ್ದೇವೆ. ತಮಗೆ ಇರತಕ್ಕಂಥ ಅನುಭವದಲ್ಲಿ ವಿಧಾನಸಭೆಗೆ ಇರತಕ್ಕಂಥ ಹಿರಿಮೆಯನ್ನು ಹೆಚ್ಚಿಸಿ ಕೊಂಡು ಹೋಗುತ್ತೀರೆಂದು ನಮ್ಮ ಭಾವನೆಯಾಗಿದೆ. ಈ ಒಂದು ಸಭೆಗೆ "ಜನರ ಒಂದು ಮನೆ" ಎಂದು ಕರೆಯುತ್ತಾರೆ. "House of people" It is not the House of Ruling party or the House of Opposition Party. ಇವತ್ತು ಸಾರ್ವಜನಿಕ ಪ್ರತಿನಿಧಿಗಳೆಲ್ಲರೂ ಇಲ್ಲಿಗೆ ಆರಿಸಿ ಬಂದಿದ್ದೇವೆ. ನಮ್ಮೆಲ್ಲರ ಒಂದು ಜವಾಬ್ದಾರಿ ಏನೆಂದರೆ ಜನರ ಕಷ್ಟ ಸುಖಗಳ ಬಗ್ಗೆ ಚರ್ಚೆ ಆಗಬೇಕು ಮತ್ತು ಜನರ ಒಳಿತನ್ನು ನಾವೆಲ್ಲರೂ ಇಲ್ಲಿ ಬಯಸಬೇಕು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದಲ್ಲಿರುವ ನಾವೆಲ್ಲರೂ ಜವಾಬ್ದಾರಿಯುತವಾಗಿ ಒಗ್ಗಟ್ಟಾಗಿ ಜನರ ಒಳಿತಿಗಾಗಿ ಕೆಲಸ ಮಾಡಬೇಕು. ಜನತಂತ್ರ ವ್ಯವಸ್ಥೆಯಲ್ಲಿ ಕೆಲವರನ್ನು ಜನರು ಆಡಳಿತ ಪಕ್ಷದಲ್ಲಿ ಮತ್ತು ಕೆಲವರನ್ನು ವಿರೋಧಪಕ್ಷದ ಸ್ಥಾನದಲ್ಲಿ ಕುಳ್ಳಿರಿಸುತ್ತಾರೆ. ಆದರೆ, ಜನರ ಹಿತವನ್ನು ಕಾಪಾಡಬೇಕೆಂಬುದೇ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಆ ಒಂದು ದೃಷ್ಟಿಯಿಂದ ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ. ಇವತ್ತು ಅನೇಕ ಹಿರಿಯ ಸದಸ್ಯರುಗಳು ಈಗಾಗಲೇ

ಮಾತನಾಡಿದ್ದಾರೆ. ಈ ಸದನದ ವೇಳೆ ಬಹಳ ಮುಖ್ಯ. ಏಕೆಂದರೆ ಒಂದೊಂದು ಗಂಟೆಗೂ ಸಾವಿರಾರು ರೂಪಾಯಿಗಳ ಸಾರ್ವಜನಿಕರ ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆ. ಇಷ್ಟೊಂದು ಖರ್ಚು ಮಾಡಿ ಚರ್ಚೆ ಮಾಡುವಾಗ ಯಾವ್ಯಾವ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಬೇಕೋ ಅಂಥ ವಿಚಾರಗಳನ್ನು ಮಾತ್ರ ಇಲ್ಲಿ ಚರ್ಚೆ ಮಾಡಬೇಕು. ಯಾವ್ಯಾವ ವಿಚಾರಗಳನ್ನು ತಾಲ್ಲೂಕು ಕಛೇರಿಗಳಲ್ಲಿಯೇ ಇತ್ಯರ್ಥ ಮಾಡಿಕೊಳ್ಳಬಹುದಂಥದನ್ನು ಅಲ್ಲಿಯೇ ಮಾಡಬೇಕು. ಅಂಥ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿ ಈ ಒಂದು ಸದನ ಕಾಲವನ್ನು ವ್ಯಯ ಮಾಡತಕ್ಕಂಥದ್ದು ಸೂಕ್ತವಾದದ್ದಲ್ಲ. ತಾವು ಸದಸ್ಯರಿಗೆ ಈ ಬಗ್ಗೆ ಸೂಚನೆ ಕೊಡಬೇಕು ಮತ್ತು ಈ ಸದನದ ಚರ್ಚೆ ಬಹಳ ಮೇಲ್ಪಂಕ್ತಿಯಲ್ಲಿರಬೇಕಾಗುತ್ತದೆ. ಇವತ್ತು ಆಧುನಿಕ ತಂತ್ರಜ್ಞಾನದಲ್ಲಿ ಕೇಬಲ್ ಟಿ.ವಿ.ಗಳು ಬಂದಿವೆ, ಇದರಿಂದ ನಾವು ಇಲ್ಲಿ ಯಾವ ರೀತಿ ಮಾತನಾಡುತ್ತೇವೆ ಮತ್ತು ಯಾವರೀತಿ ವರ್ತನೆ ಮಾಡುತ್ತೇವೆಂದು ಹಾಗೂ ಇಂಥ ವಿಚಾರಗಳನ್ನು ಚರ್ಚೆ ಮಾಡುತ್ತೇವೆ ಎಂಬುದನ್ನು ಹೊರಗಡೆ ಸಾರ್ವಜನಿಕರು ನೋಡುತ್ತಿರುತ್ತಾರೆ. ನಾವು ಜನರ ಪ್ರತಿನಿಧಿಗಳು, ಜನರ ಪ್ರತಿನಿಧಿಗಳಾಗಿಯೇ ನಾವು ವರ್ತನೆ ಮಾಡಬೇಕಾಗುತ್ತದೆ. ಬೇರೆಯವರನ್ನು ಟೀಕೆ ಮಾಡುವ ರೀತಿಯಲ್ಲಿ ನಾವು ವರ್ತನೆ ಮಾಡಬಾರದು. ಆದ್ದರಿಂದ ಇದಕ್ಕೆಲ್ಲಾ ತಾವು ಮಾನ್ಯ ಸದಸ್ಯರುಗಳಿಗೆ ಮಾರ್ಗದರ್ಶನ ನೀಡಬೇಕಾಗುತ್ತದೆ. ಈ ಸದನದ ಸಮಿತಿಗಳು ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಈ ಸಮಿತಿಗಳಿಗೆ ನಾವುಗಳೇ ಸದಸ್ಯರಾಗಿದ್ದು, ಸಭೆಗಳನ್ನು ನಡೆಸಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಕೊಡುತ್ತೇವೆ. ಇದೊಂದು ರೊಟೀನ್ ವರ್ಕ್ ಎಂದು ಕೆಲವು ಸದಸ್ಯರು ತಿಳಿದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರ್ಯಾರು ತಪ್ಪು ತಿಳಿದುಕೊಳ್ಳಬಾರದು. ಸಮಿತಿಯ ಸಭೆಗಳು ನಡೆಯುತ್ತಾ ಹೋದರೆ ನಮಗೆ ಟಿ.ಎ., ಡಿ.ಎ. ಬರುತ್ತದೆಂದು ತಿಳಿದು ಕೊಂಡಿದ್ದಾರೆ. ಕೆಲವು ವಿಚಾರಗಳನ್ನು ಸಮಿತಿ ಸಭೆಯಲ್ಲಿ ಚರ್ಚೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ. ಆದರೆ ಇವತ್ತಿನವರೆಗೂ ಕೂಡ ಸಮಿತಿ ಕೊಟ್ಟಂತಹ ಶಿಫಾರಸ್ಸು ಯಾವುದೂ ಸಹ ಅನುಷ್ಠಾನಗೊಂಡಿಲ್ಲ. Recommendations have become mockery. The entire exercise has become a nullity. ಈ ಒಂದು ಶಿಫಾರಸ್ಸಿನ ಬಗ್ಗೆ ತಾವು ಬಹಳ ತೀಕ್ಷ್ಣವಾಗಿ ಒಂದು ನಿರ್ಧಾರವನ್ನು ಕೈಗೊಂಡು, ಶಿಫಾರಸ್ಸುಗಳು ಅನುಷ್ಠಾನಕ್ಕೆ ತರತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಬೇಕು. ಇಲ್ಲದಿದ್ದರೆ ಆ ಶಿಫಾರಸ್ಸಿನಿಂದ ಏನೂ ಪ್ರಯೋಜನ ಆಗುವುದಿಲ್ಲ. ಇವತ್ತಿನದಿವಸ ಈ ಸಮಾಜದಲ್ಲಿ ಕೆಲವು ವರ್ಗದ ಜನರ ನೋವು ಜಾಸ್ತಿ ಮತ್ತು ಕಿವಿ, ಕಣ್ಣು, ಬಾಯಿ ಇಲ್ಲದೇ ಇರತಕ್ಕಂಥ ಜನರ ಬಗ್ಗೆ ಹೆಚ್ಚಿನ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕು. ಇದರಲ್ಲಿ ಮಹಿಳೆಯರ ಮೇಲೆ ನಡೆಯತಕ್ಕಂಥ ಅತ್ಯಾಚಾರ ಇರಬಹುದು, ದಲಿತರ ಮೇಲೆ ಮತ್ತು ಬಡವರ ಮೇಲೆ ನಡೆಯುತ್ತಿರುವ ಶೋಷಣೆ ಇರಬಹುದು. ಇಂಥ ಸಮಸ್ಯೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಹೆಚ್ಚಿನ ಅವಕಾಶ ಕೊಟ್ಟಾಗ ಮಾತ್ರ ಇದು ನಿಜವಾಗಿಯೂ ನ್ಯಾಯಸಮ್ಮತವಾಗಿರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. 100 ದಿವಸಗಳಷ್ಟು ಈ ಸದನವು ನಡೆಯಬೇಕೆಂದು ಈಗಾಗಲೇ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ಇದು ಬಹಳ ಸಂತೋಷದ ಮಾತು. ಆದರೆ ನಾನು ಮೊದಲೇ ಹೇಳಿದ ರೀತಿ 100 ದಿವಸಗಳಲ್ಲಿ ಯಾವ ವಿಷಯ ಚರ್ಚೆ

ಆಗಬೇಕೆಂದು ತಾವು ನಿರ್ಧಾರ ಮಾಡಬೇಕು. ತಾವು ಹಿರಿಯರಾಗಿರುವುದರಿಂದ ಈ ಸದನದ ಶಿಸ್ತನ್ನು ಕಾಪಾಡಿಕೊಂಡು ಹೋಗುವುದರಲ್ಲಿ ದಿಟ್ಟತನದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಸಾರಿ ನಿರ್ದಾಕ್ಷಿಣ್ಯವಾಗಿ ರೂಲಿಂಗ್ ಕೊಡಬೇಕಾಗುತ್ತದೆ ಮತ್ತು ಅದನ್ನು ನಿರ್ದಾಕ್ಷಿಣ್ಯವಾಗಿ ಪಾಲನೆ ಮಾಡಬೇಕಾಗುತ್ತದೆ. ತಾವು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾನಿಟರ್ ಇದ್ದಂತೆ. ಏಕೆಂದರೆ, ತಾವು ಹಿರಿಯರಾಗಿರುವುದರಿಂದ ನಾವೆಲ್ಲರೂ ತಮಗೆ ಗೌರವವನ್ನು ಕೊಡುತ್ತೇವೆ. ಈ ಒಂದು ದಿಕ್ಕಿನಲ್ಲಿ ತಾವು ಕೆಲಸ ಮಾಡಬೇಕು. ನಾವು ವಿರೋಧಪಕ್ಷದಲ್ಲಿದ್ದು ಕೊಂಡು ಎಲ್ಲವನ್ನು ಸಂಪೂರ್ಣವಾಗಿ ವಿರೋಧ ಮಾಡಬೇಕೆಂಬುದೇ ನಮ್ಮ ಭಾವನೆ ಆಗಿಲ್ಲ. ಆಡಳಿತ ಪಕ್ಷದವರೇ ಆಗಲಿ ಅಥವಾ ವಿರೋಧಪಕ್ಷದವರೇ ಆಗಲಿ, ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಸರಿ ಎಂದು ಪ್ರತಿಷ್ಠೆಯಿಂದ ನಿಂತುಕೊಳ್ಳುವುದು ಸರಿಯಲ್ಲ. ಕೆಲವು ಸಾರಿ ವಿಷಯಗಳನ್ನು ಚಿಂತನೆ ಮಾಡಿ ನಾವು ಸಾರ್ವಜನಿಕರ ಪರವಾಗಿ ಕೆಲವು ಸಲಹೆ ಕೊಟ್ಟಿರತಕ್ಕಂಥದ್ದು ತಪ್ಪೆಂದು ಕಂಡು ಬಂದಾಗ ತಕ್ಷಣ ಅದನ್ನು ತಿದ್ದುಕೊಳ್ಳತಕ್ಕಂಥ ಒಂದು ಔದಾರ್ಯ ಮತ್ತು ಮುತ್ಸದ್ಧಿತನ ಇರಬೇಕಾಗುತ್ತದೆ. ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊದಲನೇ ಸಾರಿ ಅದನ್ನು ತೋರಿಸಿದ್ದಾರೆ. ಇದರಿಂದ ನನಗೆ ಬಹಳ ಸಂತೋಷವಾಯಿತು. ಎಲ್ಲೋ ಲೋಪವಾಗಿದೆ ಎಂದು ತಿಳಿದ ತಕ್ಷಣ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ವಿಷಾದ ವಕ್ಯಪಡಿಸಿದ್ದಾರೆ. ಇದು ಒಂದು ಒಳ್ಳೆಯ ರೀತಿಯ ಪರಂಪರೆ. ಕೆಲವು ಸಾರಿ ಮಸೂದೆಗಳಿಗೆ ವಿರೋಧಪಕ್ಷದವರೇ ಕೆಲವು ಸೂಕ್ತ ತಿದ್ದುಪಡಿಗಳನ್ನು ಮಾಡಬಹುದು. ಆದರೆ, ಇದು ವಿರೋಧಪಕ್ಷದ ಕಡೆಯಿಂದ ಬಂದಂಥ ತಿದ್ದುಪಡಿಯೆಂದು ರೂಲಿಂಗ್ ಪಾರ್ಟಿಯವರು ತಿಳಿದುಕೊಂಡು ತಮ್ಮ ಪ್ರತಿಷ್ಠೆಯ ಮೇಲೆ ಇದನ್ನು ಅನುಷ್ಠಾನ ಗೊಳಿಸದೇ ಇರಬಹುದು. ಸಾರ್ವಜನಿಕರ ಪರವಾಗಿ ಇದ್ದಂಥ ಮಸೂದೆಯಾಗಿದ್ದರೂ ಸಹ ತಿದ್ದುಪಡಿಗೆ ಒಪ್ಪದೇ ಇರತಕ್ಕಂಥ ಒಂದು ನಿಲುವನ್ನು ತೆಗೆದುಕೊಳ್ಳಬಾರದು. ಒಟ್ಟಿನಲ್ಲಿ ಎಲ್ಲರಿಗೂ ಸಾರ್ವಜನಿಕರ ಹಿತ ಬಹಳ ಮುಖ್ಯ. ಈ ಒಂದು ಗುರಿಯನ್ನು ಇಟ್ಟುಕೊಂಡು ನಾವೆಲ್ಲರೂ ಕೆಲಸ ಮಾಡೋಣ. ನಾವು ಕನ್‌ಸ್ಟ್ರಕ್ಟೀವ್ ಆಪೋಜಿಷನ್ ಆಗಿ ಕೆಲಸ ಮಾಡುತ್ತಾ ತಮಗೆ ಸಂಪೂರ್ಣವಾದಂಥ ಸಹಕಾರವನ್ನು ಕೊಡುತ್ತೇವೆ. ತಮಗೆ ಒಳ್ಳೆಯ ಆರೋಗ್ಯವನ್ನು ದೇವರು ಕೊಡಲೆಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಎಸ್. ಪೂಜಾರ್(ಬಾಗಲಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ತಾವು ಸರ್ವಾನುಮತದಿಂದ ಈ ಸದನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ತಮಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಸ್ನೇಹಿತರಾದಂಥ ಮಾನ್ಯ ಅರಗಜ್ಞಾನೇಂದ್ರರವರು ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಹೊಸ ಸದಸ್ಯರಿಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಾನು ಕಳೆದ ಸದನದಲ್ಲಿ ಆರಿಸಿ ಬಂದರೂ ಕೂಡ ಕೇವಲ ಒಂದೂವರೆ ವರ್ಷಗಳ ಮಟ್ಟಿಗೆ ಮಾತ್ರ ಶಾಸಕನಾಗಿ ಕಾರ್ಯನಿರ್ವಹಿಸಿದ್ದೇನೆ. ಆಗ ಸನ್ಮಾನ್ಯ ರಮೇಶ್ ಕುಮಾರ್ ರವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ನನಗೆ ಹತ್ತಾರು ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದರು ಮತ್ತು ಹೆಚ್ಚಿನ ಮುತ್ವರ್ಜಿ ವಹಿಸಿ ಹೊಸ ಹೊಸ ಸದಸ್ಯರಿಗೆ ಈ ಸದನದಲ್ಲಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಅವಕಾಶವನ್ನು ಕೊಡುತ್ತಿದ್ದರು. ಅದೇ ರೀತಿಯ ಸತ್ಸಂಪ್ರದಾಯವನ್ನು ತಾವು ಕೂಡ ಮುಂದುವರಿಸಬೇಕು. ನಾನು

ಉತ್ತರ ಕರ್ನಾಟಕದ ಶಾಸಕನಾಗಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅನೇಕ ವರ್ಷಗಳಿಂದ ಉತ್ತರ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಅನ್ಯಾಯವಾಗಿದೆ ಮತ್ತು ಅತ್ಯಂತ ಹಿಂದುಳಿದಿದೆ ಎನ್ನುವ ಕೂಗು ಅಲ್ಲಿಂದ ಕೇಳಿಬರುತ್ತಿದೆ ಮತ್ತು ಉತ್ತರ ಕರ್ನಾಟಕ ಬೇರೆಯಾಗಬೇಕು ಎನ್ನುವ ಪ್ರತ್ಯೇಕತೆಯ ಕೂಗು ಸಹ ಕೇಳಿ ಬಂದದ್ದನ್ನು ನಾವ್ಯಾರೂ ಸಹ ಮರೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಸಮಗ್ರ ಕರ್ನಾಟಕ ಅಭಿವೃದ್ಧಿ ಕಾರ್ಯದಲ್ಲಿ ಸಮತೋಲನ ಕಾಯ್ದುಕೊಳ್ಳುವ ದೃಷ್ಟಿಯಿಂದ ತಾವು ಮುತ್ವರ್ಜಿ ವಹಿಸಬೇಕು. ವಿಶೇಷವಾಗಿ ಆ ಭಾಗಕ್ಕೆ ಸಂಬಂಧಪಟ್ಟಂತೆ ಚರ್ಚೆಗಳು ಬಂದಾಗ ತಾವು ಹೆಚ್ಚಿನ ಸಮಯವನ್ನು ಕೊಡಬೇಕು. ಈ ಸದನದಲ್ಲಿ ನಮಗೂ ಕೂಡ ನ್ಯಾಯ ಸಿಗುತ್ತದೆಂದು ಉತ್ತರ ಕರ್ನಾಟಕದ ಜನರಿಗೂ ಗೊತ್ತಾಗಬೇಕು. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಸದನದಲ್ಲಿ ವಿಶೇಷವಾಗಿ ಚರ್ಚೆ ನಡೆಯುತ್ತಿದೆ ಎಂಬ ಭರವಸೆ ನಮ್ಮ ಸದನ ಅವರಿಗೆ ಕೊಡಬೇಕಾಗಿದೆ. ಈ ದಿಸೆಯಲ್ಲಿ ಆ ಭಾಗದ ಅಭಿವೃದ್ಧಿ ವಂಚಿತ ಪ್ರದೇಶಗಳಿರಬಹುದು, ಕೃಷ್ಣಾ ನದಿಯ ಮುಳುಗಡೆ ಪ್ರದೇಶಗಳ ಸಂತ್ರಸ್ತರ ಸಮಸ್ಯೆ ಇರಬಹುದು, ಆ ಎಲ್ಲಾ ಸಮಸ್ಯೆಗಳು ಚರ್ಚೆಗೆ ಬಂದಾಗ ಹೆಚ್ಚಿನ ಸಮಯವನ್ನು ತಾವು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ತಾವು ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದವರಾಗಿದ್ದೀರಿ, ತಮ್ಮ ಬಗ್ಗೆ ಒಳ್ಳೆಯ ಮಾತುಗಳನ್ನು ಈ ಸದನದ ಹಿರಿಯ ಸದಸ್ಯರು ಈಗಾಗಲೇ ವ್ಯಕ್ತ ಮಾಡಿದ್ದಾರೆ. ಸದನದ ಮಾನ್ಯ ಸಭಾನಾಯಕರು ಕೂಡ ಒಳ್ಳೆಯ ಸತ್ಸಂಪ್ರದಾಯಯವನ್ನು ಹಾಕಿ ಕೊಟ್ಟು ಈ ಸದನದಲ್ಲಿ ಯಾವರೀತಿ ನಡೆದುಕೊಳ್ಳಬೇಕು ಮತ್ತು ವಿರೋಧಪಕ್ಷದ ಸ್ಥಾನಕ್ಕೆ ಎಷ್ಟು ಮಹತ್ವವಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ಮಾನ್ಯ ಸಭಾನಾಯಕರಿಗೂ ಕೂಡ ಈ ಸದನದ ಸದಸ್ಯನಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ತಮ್ಮ ಅಧಿಕಾರಾವಧಿಯಲ್ಲಿ ಒಳ್ಳೆಯ ಸತ್ಸಂಪ್ರದಾಯಗಳನ್ನು ಹಾಕಿಕೊಂಡು ತಮ್ಮ ಅವಧಿಪೂರ್ತಿ ಈ ಸದನದ ಎಲ್ಲಾ ಸದಸ್ಯರ ಸಹಕಾರಗಳೊಂದಿಗೆ ಒಳ್ಳೆಯ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಈ ಸದನದ ಘನತೆ ಗೌರವಗಳನ್ನು ಎತ್ತಿ ಹಿಡಿಯುತ್ತೀರಿ ಎನ್ನತಕ್ಕಂಥ ಭರವಸೆಯನ್ನು ವ್ಯಕ್ತಮಾಡುತ್ತಾ ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ದನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ತಮ್ಮನ್ನು ಈ ಸಭೆಯು ಸರ್ವಾನುಮತದಿಂದ ಸಭಾಧ್ಯಕ್ಷರನ್ನಾಗಿ ಆರಿಸಿದ್ದಕ್ಕಾಗಿ ನಾನು ತಮಗೆ ಹೃತ್ಪೂರ್ವಕವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇಲ್ಲಿಯತನಕ ಅನೇಕ ಜನ ಹಿರಿಯ ನಾಯಕರು ತಮಗೆ ಶುಭ ಕಾಮನೆಗಳನ್ನು ಕೋರಿದ್ದಾರೆ. ಅದರಲ್ಲಿ ವಿಶೇಷವಾಗಿ ಮಾನ್ಯ ಸಭಾನಾಯಕರಾದಂಥ ಶ್ರೀ ಎಸ್.ಎಂ. ಕೃಷ್ಣರವರು ಮಾನ್ಯ ಪ್ರತಿಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು, ಮಾನ್ಯ ಪಿ.ಜಿ.ಆರ್ ಸಿಂಧ್ಯರವರು, ಮಾನ್ಯ ಸಿ. ಬೈರೇಗೌಡರು, ಮಾನ್ಯ ಡಿ.ಬಿ. ಚಂದ್ರೇಗೌಡರವರು, ಅದೇರೀತಿಯಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ವಿ.ಎಸ್. ಕೌಜಲಗಿಯವರು ಮಾನ್ಯ ಕೆ.ಹೆಚ್. ರಂಗನಾಥ್‌ರವರು. ಹೀಗೆ ಅನೇಕ ಹಿರಿಯ ನಾಯಕರೆಲ್ಲರೂ ಕೂಡ ತಮಗೆ ಶುಭವನ್ನು ಕೋರಿದ್ದಾರೆ. ಅದೇರೀತಿ ನಾವು ಕೂಡ ಬೆಂಗಳೂರು ಮಹಾನಗರದ ಎಲ್ಲ ಜನತೆಯ ಪರವಾಗಿ ಮತ್ತು ಭಾರತೀಯ ಜನತಾ ಪಕ್ಷದ ಎಲ್ಲ ನಮ್ಮ ಕಾರ್ಯಕರ್ತರ ಹಾಗೂ ನಾಯಕರ ಪರವಾಗಿ ಹಾಗೂ ಶಾಸಕರ ಪರವಾಗಿ

ಹೃತ್ಪೂರ್ವಕವಾದಂಥ ಅಭಿನಂದನೆಗಳನ್ನು ತಮಗೆ ಸಲ್ಲಿಸುತ್ತಿದ್ದೇನೆ. ಸನ್ಮಾನ್ಯ ದಿವಂಗತ ಪೂಜ್ಯ ಕೆಂಗಲ್ ಹನುಮಂತಯ್ಯನವರು ಈ ವಿಧಾನಸೌಧವನ್ನು ಕಟ್ಟಿದ್ದಾರೆ. ಇಡೀ ಭಾರತದ ದೇಶದಲ್ಲಿ ಈ ವಿಧಾನಸೌಧದ ಬಗ್ಗೆ ಮೆಚ್ಚುಗೆ ಇದೆ. ಎಲ್ಲರೂ ಕೂಡ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅಂತಹ ವಿಧಾನಸೌಧಕ್ಕೆ ನಾವು ವಿಧಾನಸಭೆಯ ಶಾಸಕರಾಗಿ ಆರಿಸಿ ಬಂದಿದ್ದೇವೆ. ಕರ್ನಾಟಕದ ರಾಜಧಾನಿ ಬೆಂಗಳೂರಿನ ಮಹಾನಗರದಲ್ಲಿ ಇಲ್ಲಿಯ ಹಿತಕರ ವಾತಾವರಣದಲ್ಲಿ ಹಾಗೂ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಕೊಳಚೆ ಪ್ರದೇಶಗಳು ಏನಿವೆ, ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಹಿಂದುಳಿದ ಜನಾಂಗ ಮತ್ತು ಅಲ್ಪಸಂಖ್ಯಾಸಂಖ್ಯಾತರು ಇರುವಂಥ ಎಲ್ಲ ಭಾಗಗಳಿಗೆ ತಾವು ಅವರ ಬಗ್ಗೆ ಸದನದಲ್ಲಿ ಚರ್ಚೆ ಬಂದಾಗ ಹೆಚ್ಚಿನ ಸಮಯವನ್ನು ನಮಗೆ ಒದಗಿಸಿ ಕೊಡಬೇಕು. ಅದೇ ರೀತಿ ಪ್ರಥಮ ಬಾರಿಗೆ ಆರಿಸಿ ಬಂದಂಥ ಶಾಸಕರಿಗೆ ತಾವು ಹೆಚ್ಚಿನ ಸಮಯವನ್ನು ಕೊಡಬೇಕೆಂದು ಹೇಳಿ ತಮ್ಮಲ್ಲಿ ನಾನು ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ಮನೆಗೆ ನಾನು ಕಳೆದ 20 ವರ್ಷಗಳ ಹಿಂದೆ ಬಂದಿದ್ದೆ. ತಾವು ಅವತ್ತು ಯಾವ ರೀತಿ ಇದ್ದಿರೋ ಇವತ್ತು ಕೂಡ ಅದೇ ರೀತಿ ಇದ್ದೀರಿ. ಯಾವ ವ್ಯತ್ಯಾಸದಲ್ಲಿ ಕೂಡ ಬದಲಾವಣೆ ಇಲ್ಲ. ತಮ್ಮ ಮನೆತನದ ಹಿನ್ನೆಲೆ ಯಾವರೀತಿ ನಡೆದು ಬಂದಿದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ತಾವು ಹಿರಿಯರಾಗಿದ್ದೀರಿ, ತಾವು ಈ ಸದನವನ್ನು ಎಲ್ಲ ರೀತಿಯಲ್ಲಿ ಸಮರ್ಪಕವಾಗಿ, ಗೌರವಯುತವಾಗಿ ನಡೆಸುತ್ತೀರಿ ಎನ್ನುವ ನಂಬಿಕೆ, ವಿಶ್ವಾಸ ನಮ್ಮಲ್ಲಿ ಇದೆ. ಮತ್ತೊಮ್ಮೆ ನಮ್ಮ ಪಕ್ಷದ ಪರವಾಗಿ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ತಾವು ಸರ್ವಾನುಮತದಿಂದ ಈ ಸಭೆಯ ಮಾನ್ಯ ಅಧ್ಯಕ್ಷರಾಗಿ ಆಯ್ಕೆಯಾದುದಕ್ಕಾಗಿ ನಾನು ಹಾರ್ಧಿಕವಾಗಿ ನಮ್ಮ ಜಿಲ್ಲೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕಳೆದ5 ವರ್ಷಗಳ ಅವಧಿಯಲ್ಲಿ ನಾನು ಶಾಸಕನಾಗಿ ಪಡೆದ ಅನುಭವದ ಆಧಾರದ ಮೇಲೆ ನನ್ನ ಕೆಲವು ಅನಿಸಿಕೆಗಳನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಸರ್ಕಾರ ಹೆಚ್ಚು ಅಕೌಂಟೆಬಲ್ ಮತ್ತು ರೆಸ್ಪಾನ್ಸಿಬಲ್ ಆಗಿ ಕೆಲಸ ಮಾಡಬೇಕೆಂದು ಹೇಳಬೇಕಾದರೆ ವಿರೋಧ ಪಕ್ಷವನ್ನು ಕೂಡ ಹೆಚ್ಚು ಸುಸಜ್ಜಿತ ಗೊಳಿಸಬೇಕಾದ ಅನಿವಾರ್ಯತೆ ಕೂಡ ಇದೆ. ಬಹುಶಃ ನಾವು ಪತ್ರಿಕೆಗಳಲ್ಲಿ ಓದಿದ್ದೇವೆ ಹಾಗೂ ಗಮನಿಸಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಡಳಿತ ಕಾರ್ಯ ವೈಖರಿಯ ಬಗ್ಗೆ ಮಾಹಿತಿ ತಂತ್ರಜ್ಞಾನದ ಮೂಲಕ ಧಾರವಾಡದ ಜಿಲ್ಲಾಧಿಕಾರಿಗಳನ್ನು ಕರೆಸಿ ಮಾತನಾಡಿದರು. ಯಾವ ರೀತಿಯಾಗಿ ಬೇರೆ ಬೇರೆ ಜಿಲ್ಲೆಯ ಕಾರ್ಯ ವೈಖರಿಯ ಬಗ್ಗೆ ಮಾಹಿತಿ ತಂತ್ರಜ್ಞಾನದಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಬಹುಶಃ ಇದೇ ನಿಟ್ಟಿನಲ್ಲಿ ನಮ್ಮ ವಿರೋಧ ಪಕ್ಷದ ಸದಸ್ಯರಿಗೂ ಕೂಡ ಕಂಪ್ಯೂಟರ್ ಜ್ಞಾನವನ್ನು ಕೊಡಿಸಿ ಯಾವ ರೀತಿಯಲ್ಲಿ ಹಿಂದಿನ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಕಂಪ್ಯೂಟರ್‌ದಲ್ಲಿ ತರಬೇತಿಯನ್ನು ಕೊಟ್ಟಿದ್ದಾರೆ, ಆ ತರಬೇತಿಯ ಜೊತೆಯಲ್ಲಿ ಕಂಪ್ಯೂಟರ್ ಜ್ಞಾನವನ್ನು ಕೊಟ್ಟು

ಕಡ್ಡಾಯವಾಗಿ ಕಂಪ್ಯೂಟರ್ ಸೌಲಭ್ಯವನ್ನು ಒದಗಿಸಿಕೊಡುವಂಥ ವ್ಯವಸ್ಥೆಯನ್ನು ನಾವು ಮಾಡಿದಲ್ಲಿ ಅದರಿಂದ ಹೆಚ್ಚು ಉಪಯುಕ್ತವಾಗುತ್ತದೆ; ಹಾಗೂ ಹೆಚ್ಚು ಪರಿಣಾಮಕಾರಿಯಾದ ಈ ಕಂಪ್ಯೂಟರ್ ಮಾಹಿತಿ ಹಾಗೂ ಇಂಟರ್‌ನೆಟ್ ಸೌಲಭ್ಯದ ಮೂಲಕ ಹೆಚ್ಚಿನ ಮಾಹಿತಿಯನ್ನು ಪಡೆದು ಸರ್ಕಾರವನ್ನು ಎಲ್ಲಿ ತಿದ್ದಬೇಕು ಹಾಗೂ ಎಲ್ಲಿ ಸಲಹೆ ಸೂಚನೆಗಳನ್ನು ಕೊಡಬೇಕು ಅದನ್ನು ಕೊಡಲಿಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ತಾವು ಈ ಸೌಲಭ್ಯವನ್ನು ಕೊಡುವುದಕ್ಕೆ ವಿಶೇಷವಾದಂಥ ಪ್ರಯತ್ನವನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಅದೇರೀತಿ ಅನೇಕ ಸಂದರ್ಭಗಳಲ್ಲಿ ಸದಸ್ಯರಾದ ನಾವು ಅನೇಕ ಪ್ರಶ್ನೆಗಳನ್ನು ಕೇಳುತ್ತೇವೆ. ಕೆಲವು ಪ್ರಶ್ನೆಗಳ ಹಿನ್ನಲೆ ಏನು ಇರುತ್ತದೆಂದರೆ ನಮ್ಮ ಕ್ಷೇತ್ರದ ಜನರ ಸಮಸ್ಯೆಗಳು ಹಾಗೂ ಅವರ ನೋವು, ನಲಿವುಗಳು ಅದರಲ್ಲಿ ವ್ಯಕ್ತವಾಗಿರುತ್ತವೆ. ಈ ಜನರ ಸಮಸ್ಯೆಗಳನ್ನು ಇಲ್ಲಿ ಪ್ರಶ್ನೆಗಳ ಮೂಲಕವಾಗಿ ಈ ಸದನದಲ್ಲಿ ಕೇಳಿದಾಗ ಬಹುಶಃ ಅನೇಕ ಸಂದರ್ಭಗಳಲ್ಲಿ ಸಚಿವರು ಹಾರಿಕೆಯ ಉತ್ತರಗಳನ್ನು ಕೊಟ್ಟು ತೇಲಿಸುವಂತಹ ಪರಿಪಾಠ ವಿಧಾನಸಭೆಯಲ್ಲಿ ನಡೆದಿದೆ. ಬಹುಶಃ ಅದಕ್ಕೆ ಅವಕಾಶವಾದ ರೀತಿಯಲ್ಲಿ ಸೂಕ್ತವಾದ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ತಮಗಿರುವ ವಿಶೇಷವಾದ ಅನುಭವದ ಆಧಾರದ ಮೇಲೆ, ವಿಶೇಷವಾದ ಒತ್ತನ್ನು ಕೊಟ್ಟು ತಮ್ಮ ಪ್ರಭಾವವನ್ನು ಬೀರಬೇಕೆಂದು ನಾನು ತಮ್ಮಲ್ಲಿ ಕಳಕಳಿಯ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಸುತ್ತೇನೆ. ಕಳೆದ ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದ ಸನ್ಮಾನ್ಯ ಶ್ರೀ ರಮೇಶ್‌ಕುಮಾರ್‌ರವರು ವೈಯಕ್ತಿಕವಾಗಿ ಪ್ರತಿಯೊಬ್ಬರ ಹೆಸರನ್ನು ಕರೆಸಿ, ಅವರನ್ನು ಗುರುತಿಸಿ, ಗೌರವಿಸುವುದು ಮಾತ್ರವಲ್ಲ ಇಂತಿಂಥ ಲೋಪದೋಷಗಳನ್ನು ತಾವು ತಿದ್ದಬೇಕೆಂದು ಹೇಳುತ್ತಿದ್ದರು. ಅವರು ಯಾವ ರೀತಿಯಲ್ಲಿ ಪ್ರತಿಯೊಬ್ಬರ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣರಾದರೋ ಅದೇ ರೀತಿಯಲ್ಲಿ ತಾವು ಕೂಡ ನಮ್ಮ ಕುಟುಂಬದ ಹಿರಿಯ ಸದಸ್ಯರ ಹಾಗೆ ನಮಗೆಲ್ಲಾ ತಿದ್ದಿ ನಮ್ಮ ವ್ಯಕ್ತಿತ್ವವನ್ನು ಬೆಳಸುವಂತಹ ನಿಟ್ಟಿನಲ್ಲಿ ಒಂದು ಪರಿಪಾಠವನ್ನು ಕೂಡ ತಾವು ಹಾಕಬೇಕು. ವಿಶೇಷವಾಗಿ ತಮಗಿರುವ ಅನುಭವದ ಹಿನ್ನೆಲೆಯಲ್ಲಿ ತಮ್ಮಿಂದ ನಾವು ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೇವೆ. ಅದನ್ನು ತಾವು ಖಂಡಿತವಾಗಿ ಸಫಲಗೊಳಿಸುತ್ತೀರಿ ಎನ್ನುವ ವಿಶ್ವಾಸದೊಂದಿಗೆ ಬಹುಶಃ ಮುಂದಿನ ದಿವಸಗಳಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ, ವಿಶೇಷವಾಗಿ ಹೊಸದಾಗಿ ಆಯ್ಕೆಯಾಗಿರುವ 80 ಜನ ಸದಸ್ಯರುಗಳಿಗೆ ಹೆಚ್ಚಿನ ಅವಕಾಶವನ್ನು ತಾವು ಕೊಡಬೇಕು. ತಾವು ಹೊಸ ಸದಸ್ಯರುಗಳಿಗೆ ಅವಕಾಶವನ್ನು ಕೊಡುವ ನಿಟ್ಟಿನಲ್ಲಿ ಅದು ವಿಶೇಷ ಸಮಸ್ಯೆಗಳನ್ನು ಪ್ರಸ್ತಾವಿಸುವಂತಹ ಸಂದರ್ಭದಲ್ಲಿ, ಅದು ಮೂಲಭೂತ ಸಮಸ್ಯೆಯಿರಬಹುದು, ಕುಡಿಯುವ ನೀರಿನ ಸಮಸ್ಯೆ ಇರಬಹುದು, ಅಂತಹ ಸದರ್ಭದಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹೆಚ್ಚಿನ ಸಮಾಯಾವಕಾಶವನ್ನು ತಾವು ಕೊಡಬೇಕೆಂದು ವಿನಂತಿ ಮಾಡಿಕೊಂಡು ಭಗವಂತನು ತಮಗೆ ಎಲ್ಲಾ ರೀತಿಯಲ್ಲೂ ಯಶಸ್ಸನ್ನು ನೀಡಲಿ ಎಂದು ಹಾರೈಸಿ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರ ಪರವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

+ ಶ್ರೀ ವಿ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಇಂದು ಈ ಸದನದ ಒಮ್ಮತದ ಸ್ಪೀಕರ್ ಆಗಿ ಚುನಾಯಿತರಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ

ಸಂಗತಿಯಾಗಿದೆ. ನಾನು ಪ್ರಥಮಬಾರಿಗೆ ಚುನಾವಣೆಯಲ್ಲಿ ಅಪರೂಪವಾಗಿ ಗೆದ್ದು ಬಂದು ಈ ಸದನದ ಸದಸ್ಯನಾಗಿ ತಮಗೆ ವಂದಿಸುವಂತಹ ಅವಕಾಶ ಸಿಕ್ಕಿರುವುದು ಇದು ಚಾಮುಂಡೇಶ್ವರಿಯ ಕೃಪೆ ಎಂದು ತಿಳಿದುಕೊಂಡಿದ್ದೇನೆ. ತಮ್ಮನ್ನು ಶ್ರೀ ಎಂ.ವಿ. ವೆಂಕಟಪ್ಪನವರು ಮಾನ್ಯ ಎಂ.ವಿ. ಕೃಷ್ಣಪ್ಪನವರ ಬ್ರದರ್ ಎಂದು ಮಾನ್ಯ ಸದಸ್ಯರೊಬ್ಬರು ಹೇಳಿದರು ನನಗೆ ಈಗ ಒಂದು ಸಣ್ಣ ಘಟನೆಯು ಜ್ಞಾಪಕಕ್ಕೆ ಬರುತ್ತದೆ. ನಾನು ಹೈಸ್ಕೂಲ್‌ನಲ್ಲಿ ಓದುವಂತಹ ಸಂದರ್ಭದಲ್ಲಿ ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು ಮೈಸೂರಿನಲ್ಲಿ ಇರತಕ್ಕಂತಹ ಸುಬ್ಬರಾಯನಕೆರೆಯಲ್ಲಿ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡತಕ್ಕಂತಹ ಜನರ ಜೊತೆಯಲ್ಲಿ ರಾತ್ರೋರಾತ್ರಿ ಅಲ್ಲಿ ನಿಂತು ಕಾಂಗ್ರೆಸ್ ಬಾವುಟವನ್ನು ಹಾರಿಸತಕ್ಕಂತಹ ಕೆಲಸವನ್ನು ನಿಮ್ಮ ಅಣ್ಣನವರಾದ ಮಾನ್ಯ ಎಂ.ವಿ. ಕೃಷ್ಣಪ್ಪನವರು ಮಾಡುತ್ತಿದ್ದರೆಂದು ನನಗೆ ಚಿರಪರಿಚಿತರಾದಂತಹ ಹಿಂದೆ ಸಭಾಧ್ಯಕ್ಷರಾಗಿದ್ದ ಶ್ರೀಮತಿ ಕೆ.ಎಸ್ ನಾಗರತ್ನಮ್ಮನವರು ಹೇಳಿದ್ದರು, ನನಗೆ ಇವತ್ತು ಅದು ಹಿರಿಮೆಯ ವಿಚಾರವಾಗಿದೆ. ತಾವು ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರ ತಮ್ಮನಾಗಿ, ಬಹುಶಃ ಒಂದೇ ಕುಟುಂಬದವರಾಗಿ ಆ ಎಲ್ಲಾ ಗುಣಗಳು ತಮ್ಮಲ್ಲಿದೆ ಎನ್ನುವಂಥದ್ದನ್ನು ನಾನಾದರೂ ಕೂಡ ಇವತ್ತು ಮನವರಿಕೆ ಮಾಡಿಕೊಂಡಿದ್ದೇನೆ. ಇವತ್ತು ಇಡೀ ಸದನ ತಮ್ಮನ್ನು ಒಮ್ಮತದಿಂದ ಚುನಾವಣೆಯಲ್ಲಿ ಆಯ್ಕೆ ಮಾಡಿದೆ ಎಂದರೆ ಬಹುಶಃ ಇವತ್ತಿನ ಕಾಂಟ್ರಾವರ್ಸಿಯ ಕಾಲದಲ್ಲಿ, ಈ ಅಪಮೌಲ್ಯದ ಕಾಲದಲ್ಲಿ, ಎಲ್ಲೇ ಚುನಾವಣೆ ನಡೆದರೂ ಅರ್ಜಿಯನ್ನು ಹಾಕುವಂತಹ ಸಂದರ್ಭದಲ್ಲಿ, ನಾವೆಲ್ಲರೂ ಒಟ್ಟಾಗಿ ತಮ್ಮನ್ನು ಚುನಾಯಿಸಿದ್ದೇವೆಂದರೆ ಇದಕ್ಕಿಂತ ಹಿರಿಮೆಯ ಹೆಗ್ಗಳಿಕೆಯ ಮಾತು ಮತ್ತೊಂದಿಲ್ಲ.Sir, We are really proud of you, to have you as Speaker of this August House. On this happy occasion. I wish you the best wishes best of our co-operation. ತಮಗೆ ಎಲ್ಲಾ ರೀತಿಯಿಂದಲೂ ಒಳ್ಳೆಯದಾಗಲಿ. ಚಾಮುಂಡೇಶ್ವರಿ ಕ್ಷೇತ್ರದಿಂದ ಆರಿಸಿ ಬಂದಿರತಕ್ಕಂತಹ ನಾನು ಆ ಚಾಮುಂಡೇಶ್ವರಿಯ ಕೃಪೆ ತಮ್ಮ ಮೇಲೆ ಸದಾ ಇರಲಿ ಎಂದು ಆ ದೇವರಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾ ನನ್ನ ಒಂದು ಸಣ್ಣ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಾವು ಪ್ರಥಮವಾಗಿ ಆರಿಸಿ ಬಂದಿದ್ದು, ತಾವು ವಯಸ್ಸಿನಲ್ಲಿ ಸ್ವಲ್ಪ ದೊಡ್ಡವರಿರಬಹುದು, ಆದರೆ ಬ್ಯಾಟ್ಸ್‌ಮನ್‌ಶಿಫ್‌ನಲ್ಲಿ ನಾನು ಮೊದಲನೆಯವನು. ನಮಗಿಂತಲೂ 6-7ಸಲ ಬ್ಯಾಟ್ಸ್‌ಮನ್ ಆಗಿ ಕಾರ್ಯ ಮಾಡಿರುವವರು, ಸಿಕ್ಸರ್ ಹೊಡೆದಿರುವವರು ಈ ಸದನದಲ್ಲಿದ್ದಾರೆ. ಅವರ ಮುಂದೆ ನಮ್ಮನ್ನು ತಾವು ಸೀನಿಯರ್ ಬ್ಯಾಟ್ಸ್‌ಮನ್ ಜೊತೆಯಲ್ಲಿ ಜೂನಿಯರ್ ಬ್ಯಾಟ್ಸ್‌ಮನ್‌ಗಳ ಹಾಗೆ ತೆಗೆದುಕೊಂಡು ಹೋಗಿ, ತಾವು ಒಳ್ಳೆಯ ಅಂಪೈರಾಗಿ, ನಮಗೆ ತಾವು ಒಳ್ಳೆಯ ಕೋಚ್ ಆಗಿ ನಮಗೆ ಟ್ರೈನಿಂಗ್‌ನ್ನು ಕೊಟ್ಟು, ತಪ್ಪಾಗಿದ್ದರೆ ಗೈಡ್ ಮಾಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ನಾನು ಕಾಲೇಜಿನಲ್ಲಿ ಓದುತ್ತಿರುವಂತಹ ಸಂದರ್ಭದಲ್ಲಿ ಡಿಬೇಟ್‌ಗಳಲ್ಲಿ ಭಾಗವಹಿಸಿದ ಅನುಭವ ನನಗೆ ಇದೆ. ತಾವು ನಮಗೆ ಒಳ್ಳೆಯ ಅವಕಾಶವನ್ನು ಕೊಟ್ಟರೆ ಉತ್ತಮ ವಾಗ್ವಟುಗಳು ಆಗುತ್ತೇವೆ. ತಾವು ಹಿರಿಯ ಸಂಸದೀಯರು, ಇಲ್ಲಿ ಯಾವುದೇ ವಿಷಯದಲ್ಲಿ ಚರ್ಚೆಯು ನಡೆಯುವಂತಹ ಸಂದರ್ಭದಲ್ಲಿ ಸೀನಿಯರ್ ಜನರೇಷನ್ ಸೇರಿದ ಸದಸ್ಯರ ಜೊತೆಗೆ ಜೂನಿಯರ್ ಜನರೇಷನ್‌ಗೆ ಸೇರಿದ ಸದಸ್ಯರುಗಳ ಬಗ್ಗೆ ತಮಗೆ ಜ್ಞಾಪಕಕ್ಕೆ ಬರಲಿ ಎಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಹಾಗೆಯೇ ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡಿರುವವರಿಗೂ ತಾವು

ಕರೆದು ಅವಕಾಶ ಕೊಡಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಸದನದಲ್ಲಿ ಬಹಳಷ್ಟು ಜನ ಮಾತನಾಡದೆ ಇರುವವರು ಇದ್ದಾರೆ; ಮಾತನಾಡುವವರು ಸಹ ಇದ್ದಾರೆ. ಮಾತನಾಡುವವರಿಗೆ ಬರೆಯುವುದಕ್ಕೆ ಬರುವುದಿಲ್ಲ, ಹಾಗೆಯೇ ಬರೆಯುವುದಕ್ಕೆ ಬರುವವರಿಗೆ ಮಾತನಾಡುವುದಕ್ಕೆ ಬರುವುದಿಲ್ಲ. ತಾವು ಟ್ಯಾಲೆಂಟ್ ಇರುವವರನ್ನು ಗುರುತಿಸಬೇಕು ಬಹುಶಃ ಇಲ್ಲಿರತಕ್ಕಂತಹ ಎಲ್ಲರಿಗೂ ಕೂಡ ಅವರವರ ಟ್ಯಾಲೆಂಟೆಡ್ ಪ್ರಕಾರ, ಅವರವರ ಕೆಪಾಸಿಟಿ ಪ್ರಕಾರ ಅವರಿಗೆ ಅವಕಾಶ ಸಿಗುತ್ತದೆ ಎಂದು ನನಗೆ ಪೂರ್ಣ ನಂಬಿಕೆ ಇದೆ. ತಾವು ದಯಮಾಡಿ ಆ ನಿಟ್ಟಿನಲ್ಲಿ ನಡೆಯಬೇಕು, ತಮಗೆ ನಾವು ಪೂರ್ಣ ಸಹಕಾರವನ್ನು ಕೊಡುತ್ತೇವೆ ಎನ್ನುವ ಮಾತಿನಲ್ಲಿ ಎರಡಿಲ್ಲ. ತಾವು ಅಂಪೈರಾಗಿ ತಮ್ಮ ಆರ್ಶೀವಾದ ನಮ್ಮಗಳಿಗೆ ಇರಲಿ. ಮಾನ್ಯ ಅಧ್ಯಕ್ಷರೆ, ಮೇಲುಗಡೆ ತಕ್ಕಡಿಯಿರುವ ಒಂದು ಸಿಂಬಲ್‌ನ್ನು ನೋಡಿದೆ. ತಾವು ಅಂಪೈರಾಗಿ ಹಾಗೂ ಜಡ್ಜ್ ಆಗಿ ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಟ್ಟು, ತಾವು ಈ ಸಭೆಯ ಘನತೆಯನ್ನು ಕಾಪಾಡುತ್ತೀರಿ, ನಮಗೆ ತಾವು ಗೈಡ್ ಮಾಡುತ್ತೀರಿ, ಚಾಮುಂಡೇಶ್ವರಿಯ ಕೃಪೆ ತಮಗೆ ಸದಾ ಇರಲಿ ಎಂದು ಹೇಳಿ ತಮಗೆ ವಂದಿಸಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೈಹಿಂದ್.

+ ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಒಂದು ಸದನದ ಅತ್ಯಂತ ಗೌರವಾನ್ವಿತವಾದಂತಹ ಸ್ಥಾನಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದಕ್ಕೆ ವೈಯಕ್ತಿಕವಾಗಿ ನನಗೆ ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಗೆ ಈ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಬಹಳ ಸಂತೋಷವಾಗಿದೆ. ಕೋಲಾರ ಜಿಲ್ಲೆ ಹಾಗೂ ಒಟ್ಟಾರೆ ಈ ರಾಜ್ಯದ ಜನತೆಯ ಪರವಾಗಿ ನಾನು ತಮ್ಮನ್ನು ಬಹಳ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಒಂದು ಅತ್ಯುನ್ನತವಾದಂಥ, ಮಹತ್ವವಾದಂತಹ ಈ ಸ್ಥಾನಕ್ಕೆ ಆಯ್ಕೆಯಾಗಬೇಕಾದರೆ, ಇದರ ಹಿನ್ನೆಲೆಯಲ್ಲಿ ಮಾನ್ಯ ಸಭಾನಾಯಕರು ಹಾಗೂ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಎಸ್.ಎಂ. ಕೃಷ್ಣರವರು ತಮ್ಮ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚನೆ ಮಾಡಿದ್ದರು. ಆ ಸೂಚನೆಯನ್ನು ನಮ್ಮ ನಾಯಕರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದನೆಯನ್ನು ಮಾಡಿದರು. ಇದರ ಜೊತೆಯಲ್ಲಿ ವಿರೋಧಪಕ್ಷದವರು ಸಹ ನಮ್ಮ ಅಭ್ಯರ್ಥಿಯನ್ನು ಅವಿರೋಧವಾಗಿ ಆಯ್ಕೆ ಮಾಡುವ ಸಲುವಾಗಿ, ತಮ್ಮ ಅಭ್ಯರ್ಥಿಯನ್ನು ನಿಲ್ಲಿಸುವಂತಹ ಅವಕಾಶ ಅವರಿಗೆ ಇದ್ದರೂ ಸಹ ಅದಕ್ಕೆ ಅವಕಾಶವನ್ನು ಮಾಡಿಕೊಡದೆ ನಮ್ಮೊಡನೆ ಸಹಕರಿಸಿ ಇವತ್ತು ತಮ್ಮನ್ನು ಅವಿರೋಧವಾಗಿ ಅಧ್ಯಕ್ಷಸ್ಥಾನಕ್ಕೆ ಆಯ್ಕೆ ಮಾಡಿರುವುದು, ನಿಮ್ಮ ಒಂದು ಹಿರಿತನಕ್ಕೆ ತಮಗೆ ಇರತಕ್ಕಂತಹ ಒಂದು ಅನುಭವಕ್ಕೆ, ಇದರ ಜೊತೆಗೆ ತಮ್ಮ ಕುಟುಂಬ ವರ್ಗದವರು ಈ ರಾಜ್ಯಕ್ಕೆ ಸೇವಾ ಮಾಡಿರುವಂತಹ ಹಿನ್ನೆಲೆಯಲ್ಲಿ ಇಡೀ ಸದನ ತಮಗೆ ಗೌರವವನ್ನು ಕೊಟ್ಟಿದೆ ಎನ್ನುವ ವಿಚಾರ ನಿರ್ವಿವಾದ ಎನ್ನುವಂಥಾದ್ದು, ಆ ಹಿನ್ನೆಲೆಯಲ್ಲಿ ಈ ಒಂದು ಮಹತ್ವದ ಸ್ಥಾನವನ್ನು ತಾವು ಇವತ್ತು ಅಲಂಕರಿಸಿದ್ದೀರಿ. ಆ ಒಂದು ಸ್ಥಾನದ ಕಾರ್ಯನಿರ್ವಹಣೆಯನ್ನು ದಕ್ಷತೆಯಿಂದ ನಿರ್ವಹಿಸುವಂತಹ ಶಕ್ತಿ ತಮಗಿದೆ. ಅದರಲ್ಲಿ ತಾವು ಪರಿಣಿತರಾಗಿದ್ದೀರಿ ಎನ್ನುವ ವಿಚಾರದಲ್ಲಿ ಬೇರೊಂದು ಮಾತಿಲ್ಲ. ತಾವು ಈಗಾಗಲೇ ಮೇಲ್ಮನೆಯಲ್ಲಿ ಸಭಾಪತಿಗಳಾಗಿ ಕೆಲಸವನ್ನು ಮಾಡಿ ತಮ್ಮದೇ ಆದಂತಹ ವಿಶೇಷವಾದಂತಹ ಅನುಭವ, ಪರಿಣಿತಿಯನ್ನು ಪಡೆದುಕೊಂಡಿರುವಂತಹ ವಿಚಾರ ಎಲ್ಲರಿಗೂ ಗೊತ್ತಿದೆ. ಇದರ ಜೊತೆಗೆ

ತಾವು ತಮ್ಮ ಸೇವಾವಧಿಯಲ್ಲಿ, ಅದರಲ್ಲೂ ವಿಶೇಷವಾಗಿ ಈ ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಪದಾಧಿಕಾರಿಗಳಿದ್ದರೂ ಸಹ ಎಲ್ಲಾ ವಿಚಾರಗಳ ಬಗ್ಗೆ, ವಿಶೇಷವಾಗಿ ಕಾನೂನು ವ್ಯಾಪ್ತಿಯಲ್ಲಿ ಬರತಕ್ಕಂತದ್ದು ಮತ್ತು ಸಾರ್ವಜನಿಕ ಮಹತ್ವದ ವಿಚಾರಗಳ ಬಗ್ಗೆ ತಾವು ವಿಶೇಷವಾದಂತಹ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಿದ್ದೀರಿ. ಈ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ವಿಶೇಷವಾಗಿ ಬಯಲುಸೀಮೆ ಪ್ರದೇಶದ ಅಭಿವೃದ್ಧಿ ವಿಚಾರದಲ್ಲಿ ಕಳೆದ ಸರ್ಕಾರವಿದ್ದ ಸಂದರ್ಭದಲ್ಲಿ ಹೊಸದಾಗಿ ಆ ಪ್ರಸ್ತಾವನೆಯನ್ನು ಮಾಡತಕ್ಕಂತಹ ದಿಶೆಯಲ್ಲಿ ಮಂಡಳಿಯ ಕಾರ್ಯವ್ಯಾಪ್ತಿಯು ಹೇಗಿರಬೇಕು, ಅದರ ರೂಪುರೇಖೆಗಳು ಯಾವ ರೀತಿ ಇರಬೇಕು ಎನ್ನುವ ವಿಚಾರದ ಬಗ್ಗೆ ತಾವು ತಮ್ಮದೇ ಆದಂತಹ ವಿಶಿಷ್ಟವಾದಂತಹ ಅನುಭವವನ್ನು ಕೊಟ್ಟು ಆ ಒಂದು ಮಾರ್ಗಸೂಚಕವನ್ನು ಮಾಡಿರತಕ್ಕಂತಹ ವಿಶಿಷ್ಟವಾದಂತಹ ಅನುಭವವನ್ನು ಹೊಂದಿರುವಂತಹ ವ್ಯಕ್ತಿಯಾಗಿದ್ದೀರಿ. ತಮ್ಮ ಕುಟುಂಬ ವರ್ಗದವರು, ವಿಶೇಷವಾಗಿ ದಿವಂಗತ ಮಾನ್ಯ ಎಂ.ವಿ. ಕೃಷ್ಣಪ್ಪನವರು, ರಾಜ್ಯಮಟ್ಟದಲ್ಲೂ, ರಾಷ್ಟ್ರಮಟ್ಟದಲ್ಲೂ ಮಂತ್ರಿಯಾಗಿ ಸೇವೆಯನ್ನು ಸಲ್ಲಿಸುವುದರ ಜೊತೆಗೆ ಈ ರಾಜ್ಯದಲ್ಲಿ ವಿಶೇಷವಾದಂತಹ ಒಂದು ಕ್ಷೀರ ಕ್ರಾಂತಿಗೆ ನಾಂದಿಯಾಗಿರತಕ್ಕಂತಹ ಒಬ್ಬ ಮಹಾನ್ ವ್ಯಕ್ತಿಯಾಗಿರತಕ್ಕಂತಹ ಆ ಒಂದು ಕುಟುಂಬಕ್ಕೆ ಸೇರಿದಂತಹ ತಾವು ಇವತ್ತು ಈ ಒಂದು ಸ್ಥಾನಕ್ಕೆ ಬಂದು ಈ ಸ್ಥಾನವನ್ನು ಅಲಂಕರಿಸತಕ್ಕಂಥಾದ್ದು, ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಅದರಲ್ಲೂ ವಿಶೇಷವಾಗಿ ನಮ್ಮ ಕೋಲಾರ ಜಿಲ್ಲೆಯಿಂದ ಬಂದು ಮತ್ತೊಂದು ಸಾರಿ ಕಳೆದ 5 ವರ್ಷಗಳಲ್ಲಿದ್ದಂತಹ ಸ್ಥಾನವನ್ನು ಮತ್ತೆ ನಮ್ಮ ಜಿಲ್ಲೆಗೆ ಕೊಟ್ಟಿದ್ದಕ್ಕಾಗಿ ಖಂಡಿತ ನಾನು ಇದಕ್ಕೆ ಪೂರ್ಣವಾಗಿ ಜವಾಬ್ದಾರರಾದಂತಹ ಎಲ್ಲಾ ಮುಖಂಡರುಗಳನ್ನು ನಮ್ಮ ಪಕ್ಷದ ವರಿಷ್ಟ ಮಂಡಳಿಗೂ ಸಹ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇಂತಹ ಒಂದು ಮಹತ್ವವಾದಂತಹ ಸ್ಥಾನವನ್ನು ನಿರ್ವಹಿಸುವಂತಹ ಶಕ್ತಿ ತಮಗೆ ಈಗಾಗಲೇ ಇದೆ. ತಮಗೆ ಆ ದೇವರು ಮತ್ತಷ್ಟು ಶಕ್ತಿಯನ್ನು ಕೊಡಲಿ, ಈ ಸ್ಥಾನದಲ್ಲಿ ಕುಳಿತು ತಾವು ನಿಷ್ಪಕ್ಷಪಾತವಾದಂತಹ ಕಾರ್ಯನಿರ್ವಹಣೆಯನ್ನು ಮಾಡಿ, ಈ ಒಂದು ಸ್ಥಾನದ ಘನತೆಯನ್ನು ತಾವು ಮತ್ತಷ್ಟು ಹೆಚ್ಚಿಸಿ ಈ ರಾಜ್ಯಕ್ಕೆ ಮತ್ತು ನಮ್ಮ ಜಿಲ್ಲೆಗೆ ಹೆಚ್ಚಿನ ಕೀರ್ತಿಯನ್ನು ತರುವಂತಹ ಶಕ್ತಿಯನ್ನು ತಮಗೆ ಕೊಡಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡಿ ಮತ್ತೊಮ್ಮೆ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

1.30 ಪಿ.ಎಂ

+ ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಸನ್ಮಾನ್ಯ ಅಧ್ಯಕ್ಷರೆ, ತಾವು ಈ ಸದನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರತಕ್ಕ ಸಂದರ್ಭದಲ್ಲಿ ನನ್ನ ಕ್ಷೇತ್ರದ ಜನತೆಯ ಪರವಾಗಿ ನಾನು ತಮ್ಮನ್ನು ಹೃದಯ ತುಂಬಿ ಅಭಿನಂದಿಸುತ್ತೇನೆ. ನಾನು ಒಬ್ಬ ಪಕ್ಷೇತರ ಸದಸ್ಯನಾಗಿ ಆರಿಸಿ ಬಂದಿರತಕ್ಕವನು. ಅದರಲ್ಲೂ ಈ ಸದನಕ್ಕೆ ಈ ಸಾರಿ 80 ಶಾಸಕರು ಪ್ರಥಮಭಾರಿಗೆ ಪ್ರವೇಶ ಮಾಡಿರತಕ್ಕ ವಿಚಾರವನ್ನು ಈಗಾಗಲೇ ಮಾತನಾಡಿರತಕ್ಕ ನನ್ನ ಸ್ನೇಹಿತರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ, ಪ್ರಥಮಬಾರಿಗೆ ಆಯ್ಕೆಯಾಗಿರತಕ್ಕ ಶಾಸಕರಿಗೆ ಈ

ಸದನದಲ್ಲಿ ಅವರ ಕ್ಷೇತ್ರಗಳ ಸಮಸ್ಯೆಗಳನ್ನು, ಈ ರಾಜ್ಯದ ಜನತೆಯ ಸಮಸ್ಯೆಗಳನ್ನು ಚರ್ಚೆ ಮಾಡಲಿಕ್ಕೆ ಅಂತಹ ಸದಾವಕಾಶವನ್ನು ದಯಮಾಡಿ ತಾವು ಕಲ್ಪಿಸಿಕೊಡುತ್ತೀರಿ ಎನ್ನುವ ಭರವಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಜೊತೆಗೆ ರಾಷ್ಟ್ರೀಯ ಪಕ್ಷದವರಿಗೆ ಮೊದಲನೆಯ ಆದ್ಯತೆಯನ್ನು ಕೊಡತಕ್ಕ ವಿಚಾರವನ್ನು ನಾವು ಈಗಾಗಲೇ ಕಂಡಿದ್ದೇವೆ. ಹೇಗೆಂದರೆ, ನಾವು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಂತಹ ಸಂದರ್ಭದಲ್ಲಿ ಬ್ಯಾಲೆಟ್ ಪೇಪರ್‌ನಲ್ಲಿ ಎಲ್ಲ ರಾಷ್ಟ್ರೀಯ ಪಕ್ಷದವರಿಗೆ ಮೊದಲನೆಯ ಆದ್ಯತೆಯನ್ನು ಕೊಟ್ಟು ತದನಂತರ ಪಕ್ಷೇತರ ಅಭ್ಯರ್ಥಿಗಳಿಗೆ ಕೊಟ್ಟಿರತಕ್ಕ ವಿಚಾರ ಗೊತ್ತಿರುವುದರಿಂದ, ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇವೆ, ನಮ್ಮನ್ನು ಸದನದ ಕೊನೆಯ ಪೀಠಗಳಲ್ಲಿ ಕೂರಿಸದೆ ಮಧ್ಯದಲ್ಲಿ ಕೂರಿಸುವ ಜೊತೆಗೆ ನಾವು ಈ ಸದನದಲ್ಲಿ ನಮ್ಮ ಜನತೆಯ ಪರವಾಗಿ ಅವರ ಸಮಸ್ಯೆಗಳ ಪರಿಹಾರಕ್ಕೋಸ್ಕರವಾಗಿ ಆ ಬಗ್ಗೆ ಇಲ್ಲಿ ಚರ್ಚೆ ಮಾಡತಕ್ಕ ಅವಕಾಶವನ್ನು, ತಾವು ಯಾವುದೇ ರೀತಿಯ ಪಕ್ಷಪಾತ ಮಾಡದೆ ಮಾತನಾಡಲಿಕ್ಕೆ ಸದಾವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ನನಗೆ ಇದು ವಿಶೇಷ ಅನಿಸುತ್ತದೆ, ನಾನು ಪ್ರಥಮಭಾರಿಗೆ ಇಲ್ಲಿ ಈ ಸದನವನ್ನು ಪ್ರವೇಶ ಮಾಡಿರತಕ್ಕ ಸಂದರ್ಭವಿದು, ಹಿಂದೆ ಆಡಳಿತ ಪಕ್ಷದಲ್ಲಿದ್ದವರು ಈಗ ತಮ್ಮ ಎಡಭಾಗದಲ್ಲಿ ಕುಳಿತಿದ್ದಾರೆ. 1994ರಿಂದ 1999ರವರೆಗೆ ಅಧಿಕಾರವನ್ನು ನಡೆಸಿದ್ದವರು ವಿರೋಧಪಕ್ಷದಲ್ಲಿದ್ದಾರೆ. ವಿರೋಧಪಕ್ಷದಲ್ಲಿದ್ದವರು ಇವತ್ತು ಆಡಳಿತ ಪಕ್ಷದಲ್ಲಿ ಕುಳಿತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಪಕ್ಷೇತರರು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿದ್ದೇವೆ. ಪಕ್ಷೇತರರಿಗೂ ಸಹ ಒಂದು ಉತ್ತಮವಾದಂತಹ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ತಾವು ಈ ಸದನದ ಅಧ್ಯಕ್ಷಸ್ಥಾನವನ್ನು ಸಮರ್ಥವಾಗಿ ನಿರ್ವಹಿಸುತ್ತೀರಿ ಎನ್ನುವ ನಂಬಿಕೆ ನಮಗಿದೆ. ಭಗವಂತ ಅಂತಹ ಶಕ್ತಿಯನ್ನು, ಸಾಮರ್ಥ್ಯವನ್ನು ತಮಗೆ ಕೊಡಲಿಯೆಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಬಿ. ಮಲ್ಲಿಕಾರ್ಜುನ್ (ಬೀರೂರು) : ಸನ್ಮಾನ್ಯ ಅಧ್ಯಕ್ಷರೆ, ತಾವು ಅವಿರೋಧವಾಗಿ ಈ ಮನೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೋಸ್ಕರ ನಾನು ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಮೇಲ್ಮನೆಯ ಸಭಾಪತಿಗಳಾಗಿದ್ದಾಗ ಆ ಸಂದರ್ಭದಲ್ಲಿ ನಾವು ಮೇಲ್ಮನೆಯ ಗ್ಯಾಲರಿಯಲ್ಲಿ ಕುಳಿತು ಕಾಲೇಜು ವಿದ್ಯಾರ್ಥಿಗಳಾಗಿ ಬಹಳಷ್ಟು ಅಭಿಮಾನದಿಂದ ನಿಮ್ಮ ಕಾರ್ಯವೈಖರಿಯನ್ನು ನೋಡುತ್ತಿದ್ದೆವು. ಬಹಳಷ್ಟು ಅಭಿಮಾನವನ್ನು ಬೆಳೆಸಿಕೊಂಡು ಬಂದಿರತಕ್ಕ ವ್ಯಕ್ತಿ ನಾನು. ಈಗಲೂ ಸಹಿತ ಅದೇ ಕಾರ್ಯವೈಖರಿಯನ್ನು ಮಾಡಿ ನಮಗೆಲ್ಲರಿಗೂ ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಡುತ್ತೀರಿ ಎಂದು ನಾವು ನಂಬಿಕೊಂಡಿದ್ದೇವೆ. ಇನ್ನು ಚುನಾವಣೆಯಲ್ಲಿ ನಾವು ಗೆದ್ದು ಬಂದಂತಹ ಸಂದರ್ಭದಲ್ಲಿ ನಾನು ಬಹಳಷ್ಟು ದಿನ ವಿಧಾನಪರಿಷತ್ತಿನ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಈ ಮನೆಗೆ ನಾನು ಹೊಸಬ. ಹಿಂದಿನ ಸಾಲಿನಲ್ಲಿ ನಾವು ಕುಳಿತುಕೊಳ್ಳಬೇಕಾಗುತ್ತದೆ. ನೀವು ಮೊದಲಿನ ಬೆಂಚಿನ ಸದಸ್ಯರುಗಳನ್ನು ನೋಡಿದರೆ ಅವರುಗಳೆಲ್ಲ ರ್‍ಯಾಂಕು ಬಂದು ಬಿಡುತ್ತಾರೆ. ನಾವು ಹಿಂದುಗಡೆ ಕುಳಿತಿರುವವರನ್ನು ನೀವು ನೋಡದಿದ್ದರೆ ನಾವು ಫೇಲಾಗುತ್ತೇವೆ. ನಮ್ಮ ಕಡೆಗೆ ಸ್ವಲ್ಪ ತಮ್ಮ ದೃಷ್ಟಿ ಬಿದ್ದರೆ ನಾವು ಕೂಡ ಫಸ್ಟ್‌ಕ್ಲಾಸ್ ಬರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆ ನಿಟ್ಟಿನಲ್ಲಿ ನಿಮ್ಮ ದೃಷ್ಟಿ ಹಿಂದುಗಡೆ

ಕುಳಿತಿರುವವರ ಬಗ್ಗೆ ಬೀಳಬೇಕೆಂದು ಹೇಳುತ್ತೇನೆ. ನೀವು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯವೈಖರಿಯನ್ನು ಮಾಡುತ್ತಿರತಕ್ಕ ಸಂದರ್ಭದಲ್ಲಿ ರಾಷ್ಟ್ರದಲ್ಲಿಯೇ ನಮ್ಮ ವಿಧಾನಸಭೆ ಅತ್ಯುತ್ತಮವಾದುದು ಎನ್ನುವ ಒಂದು ಗೌರವಕ್ಕೆ ಪಾತ್ರವಾಗಿರತಕ್ಕ ಸಂದರ್ಭದಲ್ಲಿ, ಆ ಗೌರವಕ್ಕೆ ತಾವು ಸಹ ಪಾತ್ರರಾಗುತ್ತೀರಿ. ಈ ಸಂದರ್ಭದಲ್ಲಿ ಎರಡು ಚುನಾವಣೆಗಳು ನಡೆದಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು ಲೋಕಸಭೆಯ ಸ್ಪೀಕರ್ ಚುನಾವಣೆ. ಅಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷದವರೆಲ್ಲರೂ ಸಹಿ ಹಾಕಿ ಅಧ್ಯಕ್ಷರನ್ನು ಆಯ್ಕೆ ಮಾಡಿದರು. ಅಂತಹ ಒಂದು ಪರಿಪಾಠವನ್ನು ಇಲ್ಲಿ ಸಹ ಹಾಕಿಕೊಳ್ಳಬೇಕಾಗಿತ್ತೆಂದು ಹೇಳುತ್ತೇನೆ. ಎರಡನೆಯದು, ಕಳೆದ ನಾಲ್ಕು ತಿಂಗಳ ಹಿಂದೆ ವಿಧಾನ ಪರಿಷತ್ತಿನಲ್ಲಿ ಉಪಸಭಾಪತಿ ಚುನಾವಣೆ ನಡೆಯಿತು. ಏತಕ್ಕೋಸ್ಕರ ಈ ವಿಚಾರ ಹೇಳುತ್ತಿದ್ದೇನೆಂದರೆ ಎಡಗಡೆ ಇದ್ದವರು ಬಲಗಡೆ ಹೋಗಿ ವಿರೋಧಪಕ್ಷದಿಂದ ಆಡಳಿತ ಪಕ್ಷಕ್ಕೆ ಹೋದಂತಹ ಸಂದರ್ಭದಲ್ಲಿ ಎಲ್ಲವನ್ನು ಮರೆಯುತ್ತಾರೆನ್ನುವುದಕ್ಕೆ ಇದೊಂದು ಉದಾಹರಣೆ. ಉಪಸಭಾಪತಿಯ ಚುನಾವಣೆ ನಿಗದಿಯಾಗಿ ನಾಮಿನೇಷನ್ ಆದಮೇಲೂ ಸಹಿತ ವಿರೋಧಪಕ್ಷದ ಸಹಕಾರವನ್ನು ಕೇಳಲಿಲ್ಲವೆನ್ನುವ ಒಂದೇ ಒಂದು ದೃಷ್ಟಿಯಿಂದ ಮಾನ್ಯ ಹೆಚ್.ಕೆ. ಪಾಟೀಲರು ಈಗ ಸಭೆಯಲ್ಲಿಲ್ಲ. ಇಷ್ಟೊತ್ತು ಇಲ್ಲೆ ಕುಳಿತಿದ್ದರು, ಈಗ ಅವರು ಸಭೆಯಿಂದ ಹೊರಗಡೆ ಹೋಗಿದ್ದಾರೆ. ಪ್ರತಿ ಸಲ ನಾನು ಅವರನ್ನು ಮುಖ್ಯ ಸಚೇತಕನಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕೇಳುತ್ತಿದ್ದೆ, ಅವರು ಅಧ್ಯಕ್ಷರ ಹತ್ತಿರ ಮಾತನಾಡಿ ಹೇಳುತ್ತೇನೆಂದರು. ಈಗಿನ ಮಾನ್ಯ ಮುಖ್ಯಮಂತ್ರಿಗಳು ಆಗ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು. ಅವರ ಆದೇಶ ಬಂದು ಆ ಚುನಾವಣೆಯನ್ನು ಮುಂದೂಡತಕ್ಕ ವ್ಯವಸ್ಥೆಯಾಗಿ ಆ ಚುನಾವಣೆಯನ್ನೇ ನಾವು ಮುಂದೂಡಿದ್ದೇವೆ. ಏಕೆ ಇವತ್ತು ಅವೊಂದು ಪರಿಸ್ಥಿತಿ ಜ್ಞಾಪಕಕ್ಕೆ ಬರಲಿಲ್ಲ? ಇದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಆದರೆ ಒಂದು ವಿಚಾರವೆಂದರೆ, ಮುಂದಿನ ದಿನಗಳಲ್ಲಿ ಈ ಸರ್ಕಾರ ವಿರೋಧಪಕ್ಷದಲ್ಲಿದ್ದಾಗ ಆಡಿರತಕ್ಕ ಎಲ್ಲಾ ಮಾತುಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಆಡಳಿತವನ್ನು ನಡೆಸಿದರೆ ನಮಗೂ ಸಹಿತ ಅನುಕೂಲವಾಗುತ್ತದೆನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳುತ್ತೇನೆ. ಹಾಗೆಯೇ ಮತ್ತೊಮ್ಮೆ ತಮಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಿ. ರಾಜೂಗೌಡ (ಹನೂರು) : ಮಾನ್ಯ ಅಧ್ಯಕ್ಷರೆ, ಈ ವಿಧಾನಸಭೆಯ ಅಧ್ಯಕ್ಷರು ಅವಿರೋಧವಾಗಿ ಆಯ್ಕೆಯಾಗಿರತಕ್ಕದ್ದು ಅಪರೂಪವೇನಲ್ಲ. ನಾವು ಹಿಂದಿನ ಸಂಪ್ರದಾಯವನ್ನು ಗಮನಿಸಿಕೊಂಡು ಬಂದಾಗ, ಆ ಸ್ಥಾನಕ್ಕೆ ಸಾಮಾನ್ಯವಾಗಿ ಅವಿರೋಧವಾಗಿ ಆಯ್ಕೆಯಾಗಿರತಕ್ಕದ್ದನ್ನು ನಾವು ನೋಡುತ್ತಾ ಬಂದಿದ್ದೇವೆ. ಇವತ್ತಿನ ದಿವಸ ಏನೊಂದು ಲೋಕಸಭೆಯಲ್ಲಿ ಸ್ಪೀಕರ್ ಆಯ್ಕೆ ಮಾಡುವಾಗ ಆ ಸಭೆಯ ಮಾನ್ಯ ನಾಯಕರಾಗಿರತಕ್ಕ ಮಾನ್ಯ ವಾಜಪೇಯಿಯವರು ವಿರೋಧಪಕ್ಷದ ನಾಯಕಿಯಾಗಿರತಕ್ಕ ಶ್ರೀಮತಿ ಸೋನಿಯಾಗಾಂಧಿಯವರು ಒಂದೇ ನಾಮಪತ್ರಕ್ಕೆ ಸಹಿ ಹಾಕಿ ಒಬ್ಬ ಸದಸ್ಯರ ಹೆಸರನ್ನು ಸೂಚಿಸಿ ಇಡೀ ಸದನದ ವಿಶ್ವಾಸವನ್ನು ಪಡೆದಿರತಕ್ಕ ಸ್ಪೀಕರ್ ಎನ್ನತಕ್ಕ ರೀತಿಯಲ್ಲಿ ಆಯ್ಕೆಮಾಡಿರುವುದನ್ನು ನಾವು ಅರಿತಿದ್ದೇವೆ. ನಾವು ಕೂಡ ಅದೇರೀತಿ ಆಯ್ಕೆ ಮಾಡಬಹುದಾಗಿತ್ತು. ಈಗಾಗಲೇ ನಾಮಪತ್ರಗಳು ಒಂದೇ ಇರಲಿ, ಎರಡೇ ಇರಲಿ ಮಾನ್ಯ ವಿರೋಧಪಕ್ಷದವರನ್ನು ಕೂಡ

ವಿಶ್ವಾಸಕ್ಕೆ ತೆಗೆದುಕೊಂಡು ಅವರ ಗಮನವನ್ನು ಸೆಳೆದು ಮಾಡತಕ್ಕ ಅವೊಂದು ಸಂಪ್ರದಾಯವನ್ನು ಇನ್ನು ಮುಂದೆ ನಾವು ಬೆಳೆಸಿಕೊಳ್ಳಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ತಾವು ಹೋರಾಟ ಸತ್ಯಾಗ್ರಹ ಕುಟುಂಬದ ಹಿನ್ನೆಲೆಯಿಂದ ಬಂದಿರತಕ್ಕವರು. ಏಕೆ ನಾನು ಈ ಮಾತನ್ನು ಉಲ್ಲೇಖ ಮಾಡುತ್ತಿದ್ದೇನೆಂದರೆ, ತಾವು ನಾಲ್ಕು ಜನ ಸಹೋದರರು ಕೂಡ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಜೈಲುವಾಸವನ್ನು ಅನುಭವಿಸಿರತಕ್ಕವರು. ತಾವು ಕೇವಲ 15 ವರ್ಷಗಳಲ್ಲಿ ಮೈಸೂರು ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿ ಹೋರಾಟ ಮಾಡಿದ್ದೀರಿ. ಅಂದರೆ ಆ ವಯಸ್ಸಿನಲ್ಲಿ ದೇಶಾಭಿಮಾನ ತಮಗೆ ಎಷ್ಟಿತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಇದು ಉಜ್ವಲ ಪರಂಪರೆಯಿಂದ ಬಂದಿರತಕ್ಕದ್ದು. ಬಂಗಾರಪೇಟೆಯಲ್ಲಿ 1967ರಲ್ಲಿ ಮಹಾತ್ಮಗಾಂಧಿ ಹರಿಜನ ವಿದ್ಯಾರ್ಥಿನಿಲಯದಲ್ಲಿ ತಾವು ಒಬ್ಬರೇ ಹರಿಜನರೇತರ ವಿದ್ಯಾರ್ಥಿಯಾಗಿದ್ದವರು. ಅವೊತ್ತಿನಿಂದ ಕೂಡ ಎಲ್ಲಾ ರೀತಿಯಲ್ಲೂ ಸ್ವಾಭಿಮಾನವನ್ನು ಬೆಳೆಸಿಕೊಂಡು ಬಂದಿರತಕ್ಕ ತಾವು ಈವೊಂದು ಅಧ್ಯಕ್ಷಸ್ಥಾನವನ್ನು ಅಲಂಕರಿಸಿರತಕ್ಕದ್ದು ನಮ್ಮ ಸುದೈವವೆಂದು ನಾನಾದರೂ ಕೂಡ ತಿಳಿದುಕೊಂಡಿದ್ದೇನೆ. ತಮ್ಮ ಮೇಲೆ ತಕ್ಕಡಿ ಗುರುತು ಇದೆ. ಯಾವ ಕಡೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಆ ತಕ್ಕಡಿಗೆ ಗೌರವ ಬರುವುದಿಲ್ಲವೆನ್ನುವುದನ್ನು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲರೂ ಎಲ್ಲ ಮಾತುಗಳನ್ನು ಆಡಿದ್ದಾರೆ. ನಾನು ಒಂದೇ ಒಂದು ಮಾತನ್ನು ತಮಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಯಾರಾದರೂ ಕೂಡ ಪ್ರಶ್ನೆಗಳನ್ನು ಹಾಕಿದಾಗ ಅದು ಈ ಮನೆಯ ಪ್ರಾಪರ್ಟಿಯಾಗುತ್ತದೆ. ಈ ಮನೆಯ ಸ್ವತ್ತಾಗುತ್ತದೆ. ಆದರೂ 224 ಜನ ಕೂಡ ಉಪಪ್ರಶ್ನೆಗಳನ್ನು ಕೇಳಲಿಕ್ಕೆ ಅಧಿಕಾರವಿರುತ್ತದೆ. ಆದರೆ ಮೂಲ ಪ್ರಶ್ನೆಯನ್ನು ಯಾರು ಹಾಕಿರುತ್ತಾರೆ ಅವರಿಗೆ ಎರಡು ಮೂರು ಉಪಪ್ರಶ್ನೆಗಳನ್ನು ಹಾಕಲಿಕ್ಕೆ ಅವಕಾಶ ಕೊಡಬೇಕೆಂದು ಹೇಳುವುದರ ಜೊತೆಗೆ ಅನೇಕ ಜನ ಹೊಸ ಸದಸ್ಯರು ಆಯ್ಕೆಯಾಗಿರುವುದರಿಂದ ಅವರು ಮಾತನಾಡುವುದನ್ನು ನಿಲ್ಲಿಸಿಯೆಂದು ತಾವು ಬೆಲ್ ಮೇಲೆ ಕೈ ಇಡುತ್ತೀರಿ. ಬೆಲ್ ಸದ್ದು ಆದ ತಕ್ಷಣ ಅವರಿಗೆ ಥಾಟ್ಸ್ ಮರೆತು ಹೋಗುತ್ತದೆ. ದಯಮಾಡಿ ಅವರಿಗೆ ಒಂದೆರಡು ಮೂರು ಎಂದು ಹೇಳಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಬಯಸುತ್ತೇನೆ. ತಾವು ಹಾಗೆ ಮಾಡುತ್ತೀರಿ, ನಮ್ಮೆಲ್ಲರನ್ನು ತಾವು ವಿಶ್ವಾಸಕ್ಕೆ ತೆಗೆದುಕೊಂಡು ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುತ್ತೀರಿ ಎಂದು ತಮ್ಮಲ್ಲಿ ಭರವಸೆಯಿಟ್ಟು, ನಾವು ತಮ್ಮನ್ನು ಆವೊಂದು ಪವಿತ್ರಸ್ಥಾನಕ್ಕೆ ಆಯ್ಕೆ ಮಾಡಿ ಆ ಸ್ಥಾನದ ಗೌರವವನ್ನು ಹೆಚ್ಚಿಸಿದ್ದೇವೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನಾನು ಮಾತನ್ನು ಮುಗಿಸುತ್ತೇನೆ.

ಶ್ರೀ ಬೆಳ್ಳುಬ್ಬಿ (ಬಸವನಬಾಗೇವಾಡಿ) : ಸನ್ಮಾನ್ಯ ಅಧ್ಯಕ್ಷರೇ, ತಾವು ಈ ಮನೆಯ ಒಮ್ಮತದ ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದನ್ನು ನಾನು ನನ್ನ ಮತಕ್ಷೇತ್ರವಾದ ಬಸವನಬಾಗೇವಾಡಿಯ ಎಲ್ಲ ಜನತೆಯ ಪರವಾಗಿ ತಮಗೆ ತುಂಬಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ಅಭಿನಂದನೆ ಸಮರ್ಪಣಾ ವಿಷಯವನ್ನು ಬಿಟ್ಟು ಬೇರೆ ಮಾತನಾಡಬಾರದು ಎನ್ನತಕ್ಕ ವಿಷಯ ಇದ್ದರೂ ಕೂಡ ನಮ್ಮ ಬಿಜಾಪುರ ಜಿಲ್ಲೆಗೆ ಮಂತ್ರಿಸ್ಥಾನವನ್ನು ಕೊಟ್ಟಿಲ್ಲವಾದ್ದರಿಂದ ಆ ಬಗ್ಗೆ ನನಗೆ ಮಾತನಾಡಲಿಕ್ಕಾದರೂ ಅವಕಾಶ ಕೊಡಿಯೆಂದು ತಮ್ಮನ್ನು ಕೇಳುತ್ತೇನೆ.

ಅಧ್ಯಕ್ಷರು : ಅದಕ್ಕೆ ಅವಕಾಶ ಇಲ್ಲ.

ಶ್ರೀ ಬೆಳ್ಳುಬ್ಬಿ : ಅಖಂಡ ಬಿಜಾಪುರ ಜಿಲ್ಲೆಯನ್ನು ಒಡೆದು ಈಗ ಬಾಗಲಕೋಟೆ ಮತ್ತು ಬಿಜಾಪುರ ಅಂತ ಎರಡು ಜಿಲ್ಲೆಗಳಾಗಿವೆ.

ಅಧ್ಯಕ್ಷರು : ಮಂತ್ರಿಸ್ಥಾನದ ವಿಷಯ ಎಲ್ಲ ಈಗ ಬೇಡ. ಅಭಿನಂದನೆ ಸಮರ್ಪಣೆ ಬಗ್ಗೆ ಹೇಳಿ.

ಶ್ರೀ ಬೆಳ್ಳುಬ್ಬಿ : ನಮ್ಮ ಜಿಲ್ಲೆ ಬರಗಾಲದ ಜಿಲ್ಲೆಯಾಗಿದೆ. ಈ ಜಿಲ್ಲೆಗಳಲ್ಲಿ ಐದು ನದಿಗಳು ಇವೆ. ಅಖಂಡ ಜಿಲ್ಲೆಯನ್ನು ಒಡೆದು ಬಾಗಲಕೋಟೆ-ಬಿಜಾಪುರ ಜಿಲ್ಲೆಯಾದಮೇಲೆ ಇದ್ದಂಥ ಕೃಷ್ಣಾ ನದಿಯ ಫಲವತ್ತಾದ ಭೂಮಿ ಆಲಮಟ್ಟಿ ಯೋಜನೆಯಲ್ಲಿ ಪೂರ್ಣ ಮುಳುಗಡೆಯಾಗಿದೆ. ಒಂದೇ ಒಂದು ದೋಣಿ ಮಾತ್ರ ಉಳಿದಿದೆ. ಭೀಮಾನದಿ ಅರ್ಧ ಮಹಾರಾಷ್ಟ್ರಕ್ಕೆ, ಅರ್ಧ ಬಿಜಾಪುರ ಜಿಲ್ಲೆಗೆ ಇದೆ...

ಅಧ್ಯಕ್ಷರು : ಅದನ್ನೆಲ್ಲ ಬೇರೆ ದಿವಸ ಹೇಳುವಿರಂತೆ. ಈಗ ತಾವು ವಿಷಯಕ್ಕೆ ಬನ್ನಿ.

ಶ್ರೀ ಬೆಳ್ಳುಬ್ಬಿ : ಈ ದೃಷ್ಟಿಯಲ್ಲಿ ನಮ್ಮದು ವಿಶೇಷವಾಗಿ ಬರಗಾಲದ ಜಿಲ್ಲೆ. ಈ ಜಿಲ್ಲೆಯ ಜೀವನಾಡಿಯಾಗಿರತಕ್ಕಂಥ ಮಾವಾರಿ ಏತ ನೀರಾವರಿ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹಿಂದೊಮ್ಮೆ ಈ ಯೋಜನೆಗೆ ಚಾಲನೆಯನ್ನು ಕೊಟ್ಟಿದ್ದರು. ಆದ್ದರಿಂದ ಸರ್ಕಾರ ಮತ್ತು ತಾವು ಕೂಡ ಈ ಯೋಜನೆಯ ಪರವಾಗಿ ಹೆಚ್ಚಿನ ಗಮನ ಕೊಡಬೇಕು, ಅದಕ್ಕೆ ಅವಕಾಶ ಕೊಡಬೇಕೆಂದು ಈ ನಮ್ಮ ಜಿಲ್ಲೆಯ ಜನತೆಯ ಪರವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಬಸವೇಶ್ವರರು ಹುಟ್ಟಿರತಕ್ಕಂಥ ಬಸವನಬಾಗೇವಾಡಿ ಮತಕ್ಷೇತ್ರ ಏನಿದೆ ಅಲ್ಲಿ ಬಹಳಷ್ಟು ರಸ್ತೆಗಳು ಸರಿ ಇಲ್ಲ, ಅಧ್ಯಯನ ಕೇಂದ್ರ ಇಲ್ಲ. 12ನೇ ಶತಮಾನದಲ್ಲಿ ದಲಿತರಿಗೆ, ಮಹಿಳೆಯರಿಗೆ ಎಲ್ಲ ಸ್ವಾತಂತ್ರ್ಯವನ್ನು ಕೊಟ್ಟಿರತಕ್ಕಂಥ ಮಹಾನ್ ಜಗಜ್ಯೋತಿ ಬಸವೇಶ್ವರರ ಸ್ಥಳವೇನಿದೆ ಇಲ್ಲಿ ವಿಶೇಷವಾದ ಸೌಲಭ್ಯಗಳನ್ನು ಕೊಟ್ಟು.

ಅಧ್ಯಕ್ಷರು : ಅದನ್ನು ಬೇರೆ ದಿವಸ ಹೇಳುವಿರಂತೆ.

ಶ್ರೀ ಬೆಳ್ಳುಬ್ಬಿ : ಇದಕ್ಕೆ ತಾವು ಅವಕಾಶ ಕೊಡಬೇಕೆಂದು ಹೇಳಿ ಇವತ್ತು ತಾವೇನು ಒಮ್ಮತದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ, ಅದಕ್ಕಾಗಿ ಮತ್ತೊಮ್ಮೆ ಮಗದೊಮ್ಮೆ ತುಂಬಾ ತುಂಬಾ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ತಾವು ಈ ಸದನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ನನ್ನ ಹೃದಯಪೂರ್ವಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ನನಗೆ ಜಗಜ್ಯೋತಿ ಬಸವೇಶ್ವರ ಒಂದು ವಚನ ನೆನಪಾಗುತ್ತಿದೆ. ಅದು ಅಧ್ಯಕ್ಷಪೀಠಕ್ಕೆ ಅನ್ವಯಿಸುತ್ತದೆ ಎಂದು ನನ್ನ ಭಾವನೆ.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಪುಳ್ಳಿರ್ದ ನಮ್ಮ ಮಹದೇವಸೆಟ್ಟಿ

ಒಮ್ಮನವಾದರೆ ನುಡಿವ, ಇಮ್ಮನವಾದರೆ ನುಡಿಯ
ಕಾಣೆಯ ಸೋಲ, ಅರ್ಧಕಾಣೆಯ ಗೆಲ್ಲ
ಜಾಣನೋಡವ್ವ ನಮ್ಮ ಕೂಡಲಸಂಗಮದೇವ.

ಅಂತ ಹೇಳುತ್ತಾರೆ. ಹಾಗೆ ಈ ಅಧ್ಯಕ್ಷ ಪೀಠ ಇಬ್ಬರನ್ನೂ ಸಮಾನವಾಗಿ ನೋಡಬೇಕು. ಯಾರೂ ಹೆಚ್ಚು ಎನ್ನುವುದು ಬೇಡ. ಯಾರು ಕಡಿಮೆ ಎನ್ನುವುದು ಬೇಡ. ಈ ಸದನದಲ್ಲಿ ನಾವೆಲ್ಲರೂ ಒಂದೇ ಎನ್ನುವ ಭಾವನೆಯಲ್ಲಿ ಇದೂ ಒಂದು ಅನುಭವ ಮಂಟಪವೆಂದು ಭಾವಿಸಿ ನಾವು ಕೆಲಸ ಮಾಡಬೇಕಾಗುತ್ತದೆ. ಕಳೆದ ನಾಲ್ಕೂವರೆ ವರ್ಷಗಳ ನನ್ನ ಅನುಭವದಲ್ಲಿ ಬಹಳಷ್ಟು ಸಲ ನನಗೆ ಇಲ್ಲಿ ಕಹಿ ಅನುಭವವಾಗಿದೆ. ಮೊದಲನೆಯದಾಗಿ, ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದೇನೆಂದರೆ, ಅದು ಈ ಸದನದಲ್ಲಿ ಸದಸ್ಯರ ಗೈರುಹಾಜರಿ ಬಗ್ಗೆ. ಇದರಿಂದ ಈ ಸದನಕ್ಕೆ ಗೌರವವೇ ಇಲ್ಲವೇನೋ ಎಂದು ಒಮ್ಮೊಮ್ಮೆ ಅನಿಸಿಬಿಡುತ್ತದೆ. ಅದು ಆಡಳಿತ ಪಕ್ಷ ಇರಬಹುದು, ವಿರೋಧ ಪಕ್ಷ ಇರಬಹುದು, ಅದು ಎರಡಕ್ಕೂ ಸಂಬಂಧಪಡುತ್ತದೆ. ಬಹುಶಃ ನಾವು ಮಂತ್ರಿಗಳೇ ಎಷ್ಟೋಸಲ ಇರುತ್ತಿರಲಿಲ್ಲ. ತಾವು ತಲೆತಗ್ಗಿಸತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ದಯವಿಟ್ಟು ತಾವು ಇನ್ನು ಮುಂದೆ ಈ ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರು ತಪ್ಪದೇ ಹಾಜರಿ ಆಗುವ ಹಾಗೆ ಏನಾದರೂ ಒಂದು ಕಠಿಣ ಕ್ರಮ ಏನು ತೆಗೆದುಕೊಳ್ಳುತ್ತೀರೋ ಅದನ್ನು ಮೊದಲು ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ದಿಸೆಯಲ್ಲಿ ನಾನು ನಮ್ಮ ಪಕ್ಷದ ವಿರೋಧ ಪಕ್ಷದ ನಾಯಕರಿಗೆ ಕೇಳುತ್ತೇನೆ. ಅದೇರೀತಿಯಿಂದ ಆಡಳಿತ ಪಕ್ಷದ ನಾಯಕರನ್ನೂ ಕೂಡ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮೊದಲನೆಯದಾಗಿ ಈ ಸದನದಲ್ಲಿ ಎಲ್ಲ ಮಾನ್ಯ ಸದಸ್ಯರು ಹಾಜರಿರಬೇಕು. ಅದು ಇಲ್ಲದಿದ್ದರೆ ಇಲ್ಲಿ ಚರ್ಚೆಗೆ ಯಾವುದೇ ಒಂದು ಘನತೆ ಬರುವುದಿಲ್ಲ, ಗೌರವ ಬರುವುದಿಲ್ಲ ಎಂದು ನನ್ನ ಭಾವನೆ. ಇನ್ನು ಎರಡನೆಯದಾಗಿ ಬಹುಶಃ ಮೊಟ್ಟಮೊದಲನೆ ಬಾರಿ ಹಿಂದೆ ವಿಧಾನಸಭಾಧ್ಯಕ್ಷರಾಗಿದ್ದವರು ಈ ಸದನದ ಮಾನ್ಯ ಸಭಾನಾಯಕರಾಗಿ ಆಯ್ಕೆಯಾಗಿದ್ದಾರೆ ಎಂದು ನನಗನ್ನಿಸುತ್ತದೆ. ಬಹಳ ಉತ್ತಮ ಸಂಸ್ಕೃತಿಯುಳ್ಳ, ಸುಸಂಪನ್ನರಾದ ಒಬ್ಬರು ಈ ಸದನದ ನಾಯಕರಾಗಿರುವುದರಿಂದ ಖಂಡಿತವಾಗಿ ಅವರ ಸಹಾಯವನ್ನು ತಾವು ತೆಗೆದುಕೊಳ್ಳಬೇಕು. ಅದೇ ರೀತಿ ಇವತ್ತು ನಮ್ಮ ವಿರೋಧಪಕ್ಷದಲ್ಲಿ ಕೂಡ ಒಬ್ಬ ಸುಸಂಪನ್ನರಾದಂಥ ಯುವಕ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಇವರಿಬ್ಬರದ್ದೂ ಇಲ್ಲಿ ಸಮಾನವಾದ ಜವಾಬ್ದಾರಿ ಇದೆ. ನಾನು ಎಷ್ಟೋ ಸಲ ನೋಡುತ್ತಿದ್ದೆ ಮತ್ತು ಇಲ್ಲಿ ನಮ್ಮ ವಿರೋಧ ಪಕ್ಷದ ನಾಯಕರಾಗಿದ್ದ ಮಾನ್ಯ ಖರ್ಗೆಯವರು ಕೂಡ ನಮ್ಮನ್ನು ಬಯ್ಯುತ್ತಿದ್ದರು. ಸರ್ಕಾರ ಏನು ತಪ್ಪು ಮಾಡಿದೆ, ಯಾವರೀತಿ ತಪ್ಪು ಮಾಡಿದ್ದಾರೆ ಎನ್ನುವುದು ಕೂಡ ಅವರಿಗೆ ಗೊತ್ತಿದೆ. ನಾವು ಆ ಕಡೆ ಕುಳಿತಾಗ ಈ ಕಡೆ ವಿರೋಧಪಕ್ಷದವರೂ ಕೂಡ ತಪ್ಪು ಮಾಡುತ್ತಿದ್ದರು. ಯಾವರೀತಿಯಾಗಿ ಈ ಸದನದ ಕಾಲಹರಣವಾಗುತ್ತಿತ್ತು ಎನ್ನುವುದನ್ನು ನಾವು ಕೂಡ ಆ ಕಡೆಯಲ್ಲಿ ಕುಳಿತು ಹೇಳಿದ್ದೇವೆ. ಇಬ್ಬರೂ ಸಂಬಾಳಿಸಿಕೊಂಡು ಹೋದರೆ ಖಂಡಿತವಾಗಿ ಈ ಸದನದ ಕಾಲಹರಣ ಆಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಒಂದು ಹಿನ್ನಲೆಯಲ್ಲಿ ಇವತ್ತು ಎರಡು ಪಕ್ಷದವರು ಕೂಡ ಒಮ್ಮತದಿಂದ ನಡೆದರೆ ಸದನದ ಕಾಲಹರಣವಾಗದೆ ಈ ರಾಜ್ಯದ, ಜನತೆಯ ಹಣದ ಅಪವ್ಯಯ ಆಗುವುದಿಲ್ಲರೆಂದು ನನ್ನ ಭಾವನೆ.

ಈ ಹಿನ್ನೆಲೆಯಲ್ಲಿ ನಾನು ತಮಗೇನೂ ಹೇಳಬೇಕಾಗಿಲ್ಲ. ತಾವು ಒಬ್ಬ ಅನುಭವಿ ಸಂಸದೀಯಪಟುವಾಗಿ ಇರುವುದರಿಂದ, ಈಗಾಗಲೇ ಮೇಲ್ಮನೆಯಲ್ಲಿ ತಾವು ಅನುಭವ ಹೊಂದಿರುವುದರಿಂದ ನಾನು ಇಲ್ಲಿ ಹಾಗೆ ಹೀಗೆ ಎಂದು ಹೇಳತಕ್ಕದ್ದು ಸರಿಯಲ್ಲವೆಂದು ನನಗನ್ನಿಸುತ್ತದೆ. ಅಷ್ಟೇಅಲ್ಲ, ಇವತ್ತು ಮಾನ್ಯ ಸಭಾನಾಯಕರು ಇಲ್ಲಿ ಇದ್ದಾರೆ, ನಮ್ಮ ನಾಯಕರೂ ಇದ್ದಾರೆ. ನಾವೆಲ್ಲರೂ ಸೇರಿಕೊಂಡು ಈ ಸದನದ ಒಂದು ನಿಮಿಷ ಕೂಡ ಅಪವ್ಯಯ ಮಾಡದಹಾಗೆ ರಾಜ್ಯದ ಜನತೆಯ ಹಿತಕ್ಕಾಗಿ ಕೆಲಸ ಮಾಡೋಣ ಎನ್ನುವ ಭಾವನೆಯನ್ನು ಕೂಡ ನಾವು ತಾಳಬೇಕಾಗುತ್ತದೆ. ಈ ದಿಶೆಯಲ್ಲಿ ನಾವಿಬ್ಬರೂ ಸರಿಯಾಗಿ ಹೋದರೆ ಬಹುಶಃ ತಮ್ಮ ಕೆಲಸ ಬಹಳ ಕಡಿಮೆಯಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಈ ಸದನಕ್ಕೆ ಇಡೀ ರಾಷ್ಟ್ರದಲ್ಲೇ ಒಂದು ಗೌರವ ಇದೆ. ಬಹಳ ಉತ್ತಮವಾಗಿ ಈ ಸದನ ನಡೆದಂಥ ಉದಾಹರಣೆಗಳು ಇಲ್ಲಿವೆ. ಇನ್ನೊಂದು ಹೆಚ್ಚಿನ ವಿಶೇಷ ಏನೆಂದರೆ, ಬಹುಶಃ ಆಡಳಿತ ಪಕ್ಷದ ಸಾಲಿನಲ್ಲಿ ನಮ್ಮ ಹಿಂದಿನ ಅಧ್ಯಕ್ಷರು ಇವತ್ತು ಬಂದು ಕುಳಿತಿದ್ದಾರೆ. ಅವರೆಲ್ಲರೂ ಆಡಳಿತ ಪಕ್ಷದಲ್ಲಿದ್ದು, ಕೆಲವರು ಮಂತ್ರಿಗಳೂ ಆಗಿರುವುದರಿಂದ ಅವರ ಅನುಭವ ಈ ಸದನಕ್ಕೆ ಸಿಗುತ್ತದೆ. ಅದೇರೀತಿಯಾಗಿ ನಮ್ಮ ವಿರೋಧಪಕ್ಷದ ಸಾಲಿನಲ್ಲಿ ಕೂಡ ಕೆಲವು ಅನುಭವಿಕರು ಆಗಿ ಹೋಗಿದ್ದಾರೆ. ಅದು ಇವತ್ತು ನಮಗೆ ದೊಡ್ಡ ನೋವಿನ ಸಂಗತಿ. ಅನುಭವಿಕರಾದ ಕೆಲವರು ಇಲ್ಲಿ ಇರಬೇಕಾಗಿತ್ತು. ಆದರೂ ಕೂಡ ನಾವು ತಮಗೆ ಸಹಾಯ ಮಾಡುತ್ತೇವೆ ಸಂಪೂರ್ಣ ಸಹಕಾರ ಕೊಡುತ್ತೇವೆ ಎಂದು ಇಬ್ಬರು-ಮೂವರು ಜನ ನಾಯಕರೂ ಕೂಡ ಹೇಳಿದ್ದಾರೆ. ಇಲ್ಲಿ ಸ್ವತಂತ್ರರು ಅಥವಾ ಪಕ್ಷದಿಂದ ಬಂದವರು ಎನ್ನುವ ಬೇಧಭಾವ ಬೇಡ. ನಾವೆಲ್ಲರೂ ಒಂದೇ ಎನ್ನುವ ಭಾವನೆಯಿಂದ ನಡೆದುಕೊಳ್ಳೋಣ. ಇಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂದು ಪ್ರಶ್ನೆ ಬಂದಾಗ ಆ ರೀತಿ ಭೇದಭಾವ ಮಾಡದೇನೇ ಇಡೀ ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ನಡೆದುಕೊಳ್ಳಬೇಕು, ಆ ಭಾವನೆಯನ್ನು ತಾಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಮಾತನ್ನು ತಮಗೆ ಮತ್ತೊಮ್ಮೆ ಹೇಳುತ್ತೇನೆ. ಸದನದಲ್ಲಿ ನೂರಕ್ಕೆ ನೂರರಷ್ಟು ಸದಸ್ಯರುಗಳ ಹಾಜರಾತಿ ಇರುವಹಾಗೆ ಯಾವರೀತಿಯಾಗಿ ಕಠಿಣ ಕ್ರಮ ತೆಗೆದುಕೊಳ್ಳುತ್ತೀರೋ ಅದನ್ನು ತಾವು ನಿರ್ಣಯಿಸಬೇಕು ಮತ್ತು ಆ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಂಡು ತಾವು ಈ ಸದನದ ಅಧ್ಯಕ್ಷರಾಗಿ ಆಯ್ಕೆ ಆದಾಗ ನಿನ್ನೆ ದಿವಸವೇ ನಾವು ಬಹಳ ಸಂತೋಷಪಟ್ಟಿದ್ದೇವೆ. ಹೇಗೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀ ಕೃಷ್ಣ ಅವರು ಆಯ್ಕೆಯಾದಾಗ ಇಡೀ ರಾಜ್ಯವೇ ಸಂತೋಷಪಟ್ಟಿದೆಯೋ ಹಾಗೆ ನಾವೆಲ್ಲರೂ ಪಕ್ಷಬೇಧ ಮರೆತು ತಾವು ಅಧ್ಯಕ್ಷರಾಗಿ ಆಯ್ಕೆಯಾಗಿದ್ದನ್ನು ಕೇಳಿ ನಿನ್ನೆ ಸಂತೋಷಪಟ್ಟಿದ್ದೇವೆ. ಇವತ್ತು ತಾವು ಆಯ್ಕೆಯಾಗಿದ್ದರೆ ಬಗ್ಗೆ ಮಾತನಾಡಲೂ ಕೂಡ ಬಹಳ ಸಂತೋಷವಾಗುತ್ತಿದೆ. ಈ ದೃಷ್ಟಿಯಿಂದ ಕೂಡ ತಮ್ಮ ಅವಧಿಯಲ್ಲಿ ಈ ಸದನ ಇಡೀ ರಾಷ್ಟ್ರದಲ್ಲಿ ಒಂದು ಮಾದರಿ ಸದನವಾಗಿ ಕಾರ್ಯ ಕಲಾಪಗಳು ನಡೆಯಲಿ, ಆ ರೀತಿಯಲ್ಲಿ ನಾವೆಲ್ಲರೂ ಸಹಕಾರ ಕೊಡುತ್ತೇವೆ ಎನ್ನುವ ಮಾತನ್ನು ತಮಗೆ ಹೇಳುತ್ತ, ಮತ್ತೊಮ್ಮೆ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಚೀಟಿಗಳು ಇನ್ನೂ ಬರುತ್ತಲೇ ಇವೆ. ಆದರೆ ಸಮಯ ಮೀರುತ್ತಿದೆ. ಕೊನೆಯದಾಗಿ ಮಾನ್ಯ ಸುಣಗಾರ, ಶ್ರೀಮತಿ ಮೋಟಮ್ಮ ಮತ್ತು ಶ್ರೀ ಅಲ್ಲಂ ವೀರಭದ್ರಪ್ಪ ಅವರುಗಳು ಮಾತನಾಡುತ್ತಾರೆ. ಸ್ವಲ್ಪ ಬೇಗ ಬೇಗ ಮುಗಿಸಿ.

+ ಶ್ರೀ ಶರಣಪ್ಪ ಸುಣಗಾರ (ಸಿಂಧಗಿ) : ಸನ್ಮಾನ್ಯ ಅಧ್ಯಕ್ಷರೇ, ತಾವು ಇಂದು ಸರ್ವಾನುಮತದಿಂದ ಈ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕಾಗಿ ನಮ್ಮ ಬಿಜಾಪುರ ಜಿಲ್ಲೆ, ಹಿಂದುಳಿದ ಜಿಲ್ಲೆ. ಅದರಲ್ಲಿ ಸಿಂಧಗಿ 224ನೇ ಮತಕ್ಷೇತ್ರ, ಈ ಒಂದು ಮತಕ್ಷೇತ್ರದಲ್ಲಿರುವ 1,56,000 ಜನ ಮತದಾರರ ಪರವಾಗಿ ನಾನು ಅಭಿನಂದನೆಯನ್ನು ತಮಗೆ ಸಲ್ಲಿಸುತ್ತಿದ್ದೇನೆ. ಅಭಿನಂದನೆಯನ್ನು ಸಲ್ಲಿಸಬೇಕು ಎನ್ನುವ ಈ ಸಂದರ್ಭದಲ್ಲಿ ಮೊದಲನೆಯದಾಗಿ ನನಗೆ ಇದ್ದಂಥ ಹವ್ಯಾಸ ಏನೆಂದರೆ, ಮೊದಲನೆಬಾರಿಗೆ ಈ ಅಧಿವೇಶನದಲ್ಲಿ ಈ ಮನೆಯಲ್ಲಿ ಕಾಲಿಟ್ಟವನು ನಾನು. ಮೊದಲನೆ ಸಲ ಇಲ್ಲಿ ನಿಂತು ಮಾತನಾಡುತ್ತಿದ್ದೇನೆ. ಇದರಲ್ಲಿ ಏನಾದರೂ ತಪ್ಪಾದರೂ ಸಹಿತ ಮಾನ್ಯ ಸಭಾಧ್ಯಕ್ಷರು ಮನ್ನಿಸುತ್ತಾರೆ ಎನ್ನತಕ್ಕಂಥ ಭಾವನೆಯಿಂದ ಮಾತನಾಡುವುದಕ್ಕೆ ಧೈರ್ಯಮಾಡಿ ನಾನು ಎದ್ದು ನಿಂತಿದ್ದೇನೆ. ಇಂತಹ ಒಂದು ಸಂದರ್ಭದಲ್ಲಿ ಎಲ್ಲರೂ ತಮಗೆ ಅಭಿನಂದನೆಗಳನ್ನು ಹೇಳತಕ್ಕಂಥ ಸಂದರ್ಭದಲ್ಲಿ ಕೆಲವೊಂದು ವಿಚಾರಗಳನ್ನು ನಾನು ನೆನಪು ಮಾಡಿಕೊಂಡಿದ್ದೆ. ಒಬ್ಬೊಬ್ಬರೂ ತಮ್ಮ ದೇಆದ ರೀತಿಯಲ್ಲಿ ಅಭಿನಂದನೆಯನ್ನು ಹೇಳಿದರು. ನಾನು ಚಿಕ್ಕದಾಗಿ, ಸಣ್ಣದಾಗಿ ಒಂದು ಕಥೆ ರೂಪದಲ್ಲಿ ತಮಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಅಧ್ಯಕ್ಷರು : ಸುಣಗಾರರವರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶ ಬರುತ್ತದಲ್ಲ, ನೀವು ಮಾತನಾಡಿ.

ಶ್ರೀ ಶರಣಪ್ಪ ಸುಣಗಾರ : ಆಯಿತು. ತಮ್ಮ ಅಪ್ಪಣೆ ಮೇರೆಗೆ ನಾನು ಈ ಬಗ್ಗೆ ಹೆಚ್ಚು ವೇಳೆ ತೆಗೆದುಕೊಳ್ಳದೆ ಮತ್ತೊಮ್ಮೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಸನ್ಮಾನ್ಯ ಅಧ್ಯಕ್ಷರೇ, ತಾವು ಇವತ್ತು ಸರ್ವಾನುಮತದಿಂದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ತಮ್ಮನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ನನ್ನದು ಒಂದೇ ಒಂದು ಕೋರಿಕೆ ಏನೆಂದರೆ, ತಾವು ದಕ್ಷರಾಗಿದ್ದೀರಿ, ಅನುಭವಿಗಳೂ ಆಗಿದ್ದೀರಿ. ಈ ಶಾಸನಸಭೆಯಲ್ಲಿ ತಮ್ಮ ದಕ್ಷ ನಡವಳಿಕೆಯಲ್ಲಿ ಉತ್ತಮ ಕಾರ್ಯಕಲಾಪಗಳು ನಡೆಯಲಿ. ಉತ್ತಮ ಸಂಸದೀಯ ಪಟುಗಳು ಈ ಸಭೆಯಲ್ಲಿ ಏನಿದ್ದಾರೆ, ಮುಂದೆ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅವರು ಹೆಚ್ಚಿನ ರೀತಿಯಲ್ಲಿ ಭಾಗಗಿಗಳಾಗಲಿ, ಅಂತಹ ಮಾರ್ಗದರ್ಶನ ತಮ್ಮ ಕಡೆಯಿಂದ ದೊರೆಯಲಿ ಎಂದು ಹೇಳಿ ತಮಗೆ ಎಲ್ಲಾ ರೀತಿಯ ಯಶಸ್ಸನ್ನು ಕೋರಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಈ ಮನೆಯ ಅಧ್ಯಕ್ಷರ ಆಯ್ಕೆ ಸರ್ವಾನುಮತದಿಂದ ಆಗಿರುವುದು ಅತ್ಯಂತ ಸೂಕ್ತವಾಗಿರುತ್ತದೆ. ಮತ್ತು ಈ ಸದನಕ್ಕೆ ಗೌರವ ತಂದಿದೆ. ನಾನು ಮತ್ತು ತಾವು ಕಳೆದ ಹತ್ತಾರು ವರ್ಷಗಳಿಂದ ಜೊತೆ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ನಿಮ್ಮ ನಡವಳಿಕೆಗಳು ಮತ್ತು ವಿಚಾರಗಳಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೀರಿ ತಮಲ್ಲಿ ಯಾರ ಮನಸ್ಸಿಗೂ ನೋವಾಗದಂಥ ನಿರ್ಧಾರ ಮತ್ತು ಮಾತುಕತೆಗಳು ಇವೆ. ಇಂಥವರು ಈ ಮನೆಯ

ಅಧ್ಯಕ್ಷರಾಗಿರುವುದು ಬಹಳ ಸಂತೋಷವಾಗಿದೆ. ಇವತ್ತು ನನ್ನ ನೆನಪಿಗೆ ಮಾನ್ಯ ವೈಕುಂಠ ಬಾಳಿಗಾ, ಮಾನ್ಯ ಎಸ್. ಆರ್. ಕಂಠಿಯವರು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು, ಶ್ರೀ ಕೆ.ಹೆಚ್. ರಂಗನಾಥ್‌ರವರು ಅಲ್ಲದೆ ಈಗಿನ ಮಾನ್ಯ ಮುಖ್ಯಮಂತ್ರಿಗಳಾಗಿರುವಂಥ ಶ್ರೀ ಎಸ್.ಎಂ. ಕೃಷ್ಣರವರು ಈ ಉನ್ನತ ಸ್ಥಾನವನ್ನು ಅಲಂಕರಿಸಿದ್ದರು. ನಮಗೆಲ್ಲಾ ಅವರೆಲ್ಲರಲ್ಲಿ ನಂಬಿಕೆ ಇದೆ. ಈಗ ತಾವು ತೆಗೆದುಕೊಳ್ಳುವ ನಿಷ್ಪಕ್ಷಪಾತ ನಿರ್ಧಾರಗಳು ಈ ಮನೆಯ ಗೌರವವನ್ನು ಹೆಚ್ಚಿಸುತ್ತವೆಂದು ನಂಬಿಕೆ ಇದೆ. ತಮಗೆ ಇನ್ನೂ ಹೆಚ್ಚಿನ ಉನ್ನತ ಸ್ಥಾನಗಳು ದೊರೆಯಲೆಂದು ಹಾರೈಸಿ, ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತಾವು ಅಧ್ಯಕ್ಷರಾಗಿರುವಂಥ ಈ ಸಂದರ್ಭದಲ್ಲಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಹಿಂದೆ ಈ ಸದನದಲ್ಲಿ ಹಿರಿಯರೂ ಸದನದ ಅಧ್ಯಕ್ಷರುಗಳಾಗಿ ಶಾಸಕರ ಬೇಡಿಕೆಗಳ ಬಗ್ಗೆ, ಶಾಸಕರ ವಿಚಾರಗಳ ಬಗ್ಗೆ ಬಹಳ ಉತ್ಸಾಹದಿಂದ ಪ್ರೋತ್ಸಾಹ ಕೊಟ್ಟಿರುವಂಥ ವಿಚಾರಗಳು ನನಗೆ ತಿಳಿದಿವೆ. ಈ ಸದನದ ಹಿರಿಯ ಸದಸ್ಯರಾಗಿ, ತಾವು ಸಹ ಈ ಹಿಂದೆ ಸರ್ಕಾರದಲ್ಲಿದ್ದು ಶಾಸಕರ ಅಳಲಿನ ಬಗ್ಗೆ ಸಹಕರಿಸಿದ್ದೀರಿ. ತಮಗೆ ಹೆಚ್ಚಿನ ಅನುಭವ ಇದ್ದು, ಇವತ್ತು ನಾವೆಲ್ಲರೂ ಉತ್ಸಾಹದಿಂದ, ಸಂತೋಷದಿಂದ ಈ ಸದನದ ಅಧ್ಯಕ್ಷರಾಗಿ ಆಯ್ಕೆ ಮಾಡಿರುವಂಥ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುವುದರ ಜೊತೆಗೆ, ಶಾಸಕರ ಮನ ಒಲಿಸುವುದರ ಜೊತೆಗೆ, ಶಾಸಕರ ಬೇಡಿಕೆಗಳಿಗೆ, ಶಾಸಕರು ಮಾತನಾಡುವಂಥ ವಿಚಾರಗಳಿಗೆ ತಾವು ಸಹಕಾರ ಕೊಡುವುದರ ಜೊತೆಗೆ, ಶಾಸಕರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದರಲ್ಲಿ ತಾವು ಯಶಸ್ವಿಯಾಗುತ್ತೀರಿ ಎಂಬ ನನಗೆ ನಂಬಿಕೆ ನನಗಿದೆ. ಏಕೆಂದರೆ, ಹಿಂದೆಯೂ ತಾವು ಶಾಸಕರಾಗಿ ನಮ್ಮ ಜೊತೆಯಲ್ಲಿದ್ದಂಥ ಕಾಲದಲ್ಲಿ ಶಾಸಕರ ಕಷ್ಟಸುಖಗಳಲ್ಲಿ ತಾವು ಭಾಗಿಯಾಗಿ, ನಮ್ಮದೇ ಆದಂಥ ಶಾಸಕಾಂಗ ಪಕ್ಷದ ಸಭೆಯಲ್ಲೂ ಸಹ ತಾವು ಹೆಚ್ಚಿನ ಸಹಕಾರವನ್ನು ಶಾಸಕರುಗಳಿಗೆ ಕೊಡುವುದರ ಜೊತೆಗೆ ನಡವಳಿಕೆಗಳ ಬಗ್ಗೆ ಹಾಗೂ ಬೇಡಿಕೆಗಳ ಬಗ್ಗೆ ಯಾವರೀತಿಯಲ್ಲಿ ಶಾಸನ ಸಭೆಯಲ್ಲಿ ಸದಸ್ಯರು ಪಾಲ್ಗೊಳ್ಳಬೇಕು ಎಂಬ ವಿಚಾರದಲ್ಲಿ ಮಾರ್ಗದರ್ಶನವನ್ನು ಸಹ ತಾವು ನೀಡಿರುವ ನಾನಾ ರೀತಿಯ ಉದಾಹರಣೆಗಳು ನಮ್ಮ ಕಣ್ಣೆದುರಿಗೆ ಇವೆ. ಇವತ್ತು ತಾವು ಹಿರಿಯರಾಗಿ, ಶಾಸನ ಸಭಾ ಅಧ್ಯಕ್ಷರಾಗಿರುವಂಥ ಈ ಸಂದರ್ಭದಲ್ಲಿ ಮತ್ತೊಮ್ಮೆ ಅಭಿನಂದನೆ ಸಲ್ಲಿಸುವುದರ ಜೊತೆಗೆ ಮುಂದಿನ ದಿನಗಳಲ್ಲಿ ನಮ್ಮ ಅಳಲನ್ನು ತಾವು ಅರ್ಥಮಾಡಿಕೊಂಡು ನಮಗೆ ಎಲ್ಲಾ ರೀತಿಯ ಸಹಕಾರವನ್ನು ತಾವು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಂಡು, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಗೌರವಾನ್ವಿತ ಸದಸ್ಯರೇ,

ಅತ್ಯಂತ ಪವಿತ್ರವೂ, ಶ್ರೇಷ್ಠವೂ ಆಗಿರತಕ್ಕ ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕೆ ತಮ್ಮೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಈ ಅವಿರೋಧ ಆಯ್ಕೆಗೆ ಮೂಲಕಾರಣರಾದ ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಈ ಸದನದ ಎಲ್ಲಾ ಪಕ್ಷಗಳ ಸದಸ್ಯರಿಗೂ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ಸಭೆಯ ಘನತೆ, ಗೌರವ, ರೀತಿ ನೀತಿಗಳು, ರೂಪರೇಷೆಗಳನ್ನೊಳಗೊಂಡಂತೆ ಒಳ್ಳೆಯ ಪರಂಪರೆಯೊಂದಿಗೆ ಕಾಪಾಡಿಕೊಂಡು ಬಂದಿರುವ ಹಿಂದಿನ ಅಧ್ಯಕ್ಷರುಗಳಾದ ಶ್ರೀ ಕೆ.ಟಿ. ಭಾಷ್ಯಂ, ಶ್ರೀ ಟಿ. ಸುಬ್ರಹ್ಮಣ್ಯಂ, ಶ್ರೀ ಸಿದ್ದಯ್ಯನವರು ಮತ್ತು ಶ್ರೀ ವೈಕುಂಠಬಾಳಿಗರವರ ಸೇವೆ ನಮಗೆ ಮೇಲ್ಪಂಕ್ತಿಯಾಗಿರುತ್ತದೆ.

ರಾಷ್ಟ್ರದ ಅತ್ಯುನ್ನತ ಸಂವಿಧಾನದ ಬುನಾದಿಯಾದ ಸಂಸತ್ತಿನಲ್ಲಿ ಉತ್ತಮ ಸಂಸದೀಯರಾಗಿ, ಅತ್ಯಂತ ಮೇಧಾವಿಗಳಾಗಿ ಸಂವಿಧಾನ ಪರಿಣತೂ ಆಗಿದ್ದಂತಹ ಶ್ರೀ ವಿಠಲ್‌ಬಾಯಿ ಪಟೇಲ್‌ರವರೂ ಹಾಗೂ ಶ್ರೀ ಮಾವಳಂಕರ್‌ರವರುಗಳು ಅಧ್ಯಕ್ಷ ಪೀಠವನ್ನು ಅಲಂಕರಿಸಿ ಕೀರ್ತಿ, ಶ್ರೇಷ್ಠತೆಗಳೊಂದಿಗೆ ಕಲಾಪಗಳನ್ನು ಸಮರ್ಥಕವಾಗಿ ನಿರ್ವಹಿಸಿ ಒಳ್ಳೆಯ ಪರಂಪರೆಯನ್ನು ನೀಡಿ ಮಾರ್ಗದರ್ಶನವನ್ನಿತ್ತಿರುತ್ತಾರೆ.

ಈಗ 11ನೇ ವಿಧಾನ ಸಭೆಯಲ್ಲಿ ಅಪಾರ ಅನುಭವವುಳ್ಳ ಉತ್ತಮ ರೀತಿಯಲ್ಲಿ ಕಲಾಪಗಳನ್ನು ನಡೆಸಿ ಉತ್ತಮ ಸಂಸದೀಯ ಪಟುಗಳೆಂಬ ಖ್ಯಾತರಾಗಿ ಹಿಂದೆ ಈ ಸದನದ ಅಧ್ಯಕ್ಷರುಗಳಾಗಿ ಸೇವೆ ಸಲ್ಲಿಸಿರುವ ಹಾಗೂ ಈ ಸದನದ ಸಭಾ ನಾಯಕರೂ ಆಗಿರುವ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರೂ, ಶ್ರೀ ಕೆ.ಹೆಚ್.ರಂಗನಾಥ್‌ರವರೂ, ಶ್ರೀ ಡಿ.ಬಿ. ಚಂದ್ರೇಗೌಡರವರೂ ಮತ್ತು ಶ್ರೀ ವಿ.ಎಸ್ ಕೌಜಲಗಿರವರೂ ಈ ಸದನದಲ್ಲಿ ಅಲಂಕರಿಸುತ್ತಿರುವುದು ನನಗೆ ಬಹಳ ಹೆಮ್ಮೆಯನ್ನುಂಟು ಮಾಡಿದೆ.

ಈ ಸಭೆಯ ಅಧ್ಯಕ್ಷ ಸ್ಥಾನವು ನ್ಯಾಯಮೂರ್ತಿ ಪೀಠವೆಂದು ಭಾವಿಸುತ್ತಾ ಈ ಅವಧಿಯಲ್ಲಿ ಪ್ರತಿಯೊಬ್ಬ ಸದಸ್ಯರ ಪ್ರಶ್ನೆಗಳಿಗೆ ಚರ್ಚಿಸಲು ಕಾಲಾವಕಾಶವನ್ನು ಯಾವುದೇ ಪಕ್ಷಪಾತವಿಲ್ಲದೇ ನನ್ನ ಕರ್ತವ್ಯವನ್ನು ಅತ್ಯಂತ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತೇನೆಂಬ ಭರವಸೆಯನ್ನು ಈ ಮೂಲಕ ನೀಡುತ್ತಿದ್ದೇನೆ.

1974ರಿಂದ 1978ರವರೆಗೆ ನಾನು ಮೇಲ್ಮನೆ ಸಭಾಪತಿಗಳಾಗಿದ್ದ ಸಂದರ್ಭದಲ್ಲಿ ಅಂದಿನ ವಿರೋಧಪಕ್ಷದ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಶ್ರೀ ಎಸ್.ಆರ್. ಬೊಮ್ಮಾಯಿರವರು ಸದನದಲ್ಲಿ ಕ್ಲಿಷ್ಟ ವಾತಾವರಣ ಉಂಟಾದ ಸಂದರ್ಭದಲ್ಲಿ ಪರಸ್ಪರವಾಗಿ ಚರ್ಚಿಸಿ ಸುಲಭವಾಗಿ ಪರಿಹರಿಸಿರುವ ನಿದರ್ಶನಗಳಿವೆ. ಅದೇ ರೀತಿಯಾಗಿ ಈ ಸದನದಲ್ಲಿಯೂ ಸಹ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರೂ ಸಹ ಸಹಕಾರ ನೀಡುವರೆಂಬ ಭರವಸೆ ಇದೆ.

ಈ ಸದನದಲ್ಲಿ ಮೇಲ್ಮನೆಯ ಸದಸ್ಯರು ಈ ಮನೆಯ ಸದಸ್ಯರಾಗಿರುವುದು ಹಾಗೂ ಹೊಸ ಸದಸ್ಯರೂ ಈ ಮನೆಯ ಸದಸ್ಯರಾಗಿ ಭಾಗವಹಿಸುತ್ತಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಈ ಶಾಸನಸಭಾ ವೇದಿಕೆಯಲ್ಲಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ, ಅವರ ಬೇಡಿಕೆಗಳನ್ನು ಈಡೇರಿಸಲು ತಮ್ಮನ್ನು ಮತದಾರರು ಆರಿಸಿ, ಈ ಸದನಕ್ಕೆ ಕಳುಹಿಸಿರುತ್ತಾರೆ. ಈ ಬಗ್ಗೆ ಜನತೆ ನಮ್ಮಿಂದ ಬಹಳಷ್ಟು ನಿರೀಕ್ಷಿಸುತ್ತಾರೆ. 21ನೇ ಶತಮಾನಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಭಾರತದ ಭವಿಷ್ಯಕ್ಕಾಗಿ ನಾವೆಲ್ಲರೂ ಶ್ರಮಿಸಬೇಕಾಗಿದೆ. ಇದಕ್ಕೆ ಬೇಕಾಗಿರುವುದು ರಾಜಕೀಯ ಇಚ್ಛಾಶಕ್ತಿ. ಈ ದಿಸೆಯಲ್ಲಿ ಚರ್ಚೆ ಮಾಡಲು ವಾದ ವಿವಾದ, ಸಂಯಮ ಸೌಜನ್ಯ ಹಾಗೂ ಹೆಚ್ಚಿನ ಜವಾಬ್ದಾರಿಯಿಂದ ರಚನಾತ್ಮಕವಾಗಿ

ಭಾಗವಹಿಸಿ ಪ್ರಜಾಪ್ರಭುತ್ವದ ಬುನಾದಿಗೆ ಇನ್ನೂ ಹೆಚ್ಚಿನ ಶೋಭೆ ತರಲು ಪ್ರಯತ್ನಿಸುತ್ತೀರೆಂದು ನಾನು ಭಾವಿಸುತ್ತೇನೆ. ಈ ಸದನದಲ್ಲಿ ತಾವು ಕೇಳುವ ಪ್ರಶ್ನೆಗಳು, ಮಾತನಾಡುವ ಶೈಲಿ ಮತ್ತು ನಡೆದುಕೊಳ್ಳುವ ರೀತಿ ನೀತಿಗಳನ್ನು ಇಂದಿನ ಪತ್ರಿಕೆಗಳು, ರೇಡಿಯೋ, ದೂರದರ್ಶನ ಹಾಗೂ ಇತರೆ ಮಾಧ್ಯಮಗಳ ಮೂಲಕ ಜನತೆಯು ಗಮನಿಸುವುದಲ್ಲದೇ ವಿಶೇಷವಾಗಿ ಯುವ ಜನತೆಯಲ್ಲಿ ಸಾಕಷ್ಟು ಪರಿಣಾಮ ಬೀರುವುದರಿಂದ ಎಚ್ಚರಿಕೆ ವಹಿಸಿ, ಇಡೀ ಭಾರತದಲ್ಲಿ ನಮ್ಮ ಕರ್ನಾಟಕ ರಾಜ್ಯ ಅತ್ಯಂತ ಗೌರವಕ್ಕೆ ಪಾತ್ರವಾಗಲು ಹಾಗೂ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಹೋಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಕೊನೆಯದಾಗಿ, ನನ್ನ ಬಗ್ಗೆ ಹೃದಯತುಂಬಿದ ಮಾತುಗಳನ್ನಾಡಿದ, ಕಾರ್ಯಭಾರವನ್ನು ಹೆಚ್ಚಿನ ಶ್ರದ್ಧೆಯಿಂದ ನಿರ್ವಹಿಸಲು ಪ್ರೋತ್ಸಾಹಿಸಿರುವುದು ನನಗೆ ಹೆಚ್ಚು ಉತ್ತೇಜನ ನೀಡಿದೆ. ಇದರ ಬಗ್ಗೆ ಮಾತನಾಡಿದ ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು, ಮಾನ್ಯ ಶ್ರೀ ಖರ್ಗೆಯವರು ಮತ್ತು ಇತರೆ ಸದಸ್ಯರು, ಅವರುಗಳಿಗೆಲ್ಲಾ ನಾನು ಅಭಾರಿಯಾಗಿದ್ದೇನೆ.

ಪ್ರಕಟಣೆ

ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದಂಥ ಶ್ರೀ ಬಿ.ಎಸ್.ಯಡಿಯೂರಪ್ಪನವರು 24ನೇ ಅಕ್ಟೋಬರ್ 1999ನೇ ದಿನಾಂಕದ ಪತ್ರವನ್ನು ವಿಧಾನ ಸಭಾಧ್ಯಕ್ಷರಿಗೆ ಬರೆಯುವ ಮೂಲಕ ವಿಧಾನ ಸಭೆಯಲ್ಲಿ ಭಾರತೀಯ ಜನತಾಪಕ್ಷವು ಹೆಚ್ಚಿನ ಸದಸ್ಯರುಗಳುಳ್ಳ ಎರಡನೇ ದೊಡ್ಡ ಪಕ್ಷವಾಗಿದ್ದು, ಹಾಗೂ ಸದರಿ ಪಕ್ಷವು ವಿಧಾನ ಸಭೆಯ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಆ ಪಕ್ಷದ ನಾಯಕರನ್ನಾಗಿ ಚುನಾಯಿಸಿದ್ದು, ಶ್ರೀ ಜಗದೀಶ್ ಶೆಟ್ಟರ್‌ರವರನ್ನು ವಿರೋಧಪಕ್ಷದ ನಾಯಕರನ್ನಾಗಿ ಪರಿಗಣಿಸಬೇಕಾಗಿ ಕೋರಿರುತ್ತಾರೆ.

ಭಾರತೀಯ ಜನತಾ ಪಕ್ಷವು 44 ಸದಸ್ಯರನ್ನು ಹೊಂದಿದ್ದು, ಎರಡನೇ ಸ್ಥಾನದಲ್ಲಿರುವ ಕಾರಣ ಹಾಗೂ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ಅರ್ಥ ವಿವರಣೆ ನಿಯಮ 2(2) ರಲ್ಲಿ ಹೇಳಿರುವ ರೀತ್ಯಾ ಎಲ್ಲಾ ಅಂಶಗಳನ್ನು ಪರಿಗಣಿಸದ್ದು, ಶ್ರೀ ಜಗದೀಶ್ ಶೆಟ್ಟರ್ ಅವರನ್ನು ವಿರೋಧ ಪಕ್ಷದ ನಾಯಕರೆಂದು ಇಂದಿನಿಂದ ಜಾರಿಗೆ ಬರುವಂತೆ ಮನ್ನಣೆ ನೀಡುತ್ತಿದ್ದೇನೆ.

ಹೀಗೆ ಮಾನ್ಯ ಸದಸ್ಯರು ಇನ್ನೂ ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ. ಈ ಸಲಹೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ. ಜೊತೆಗೆ, ಸದನದೊಳಗಡೆ ಮೊಬೈಲ್ ಫೋನ್ ಉಪಯೋಗಿಸುತ್ತಿದ್ದಾರೆ. ಅವರು ಸದನದ ಸದಸ್ಯರಾಗಿರಬಹುದು, ಅಥವಾ ಮಂತ್ರಿಮಂಡಲದಲ್ಲಿಯೇ ಇರಬಹುದು ಅಥವಾ ಪತ್ರಿಕಾ ಪ್ರತಿನಿಧಿಗಳಿರಬಹುದು. ಆ ಮೊಬೈಲ್ ಫೋನನ್ನು ಸ್ವಿಚ್ ಆಫ್ ಮಾಡಿಕೊಂಡು ಜೇಬಿನಲ್ಲಿಟ್ಟುಕೊಳ್ಳಬಹುದು. ನಾಳೆಯಿಂದ ಸದನದ ಒಳಗಡೆ ಇದ್ದಾಗ ದಯವಿಟ್ಟು ಆ ಮೊಬೈಲ್ ಫೋನ್ ಉಪಯೋಗಿಸಬಾರದು. ಹೊರಗಡೆ ಉಪಯೋಗಿಸಿಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಹೀಗೆ ತಾವೆಲ್ಲಾ ನನ್ನ ಬಗ್ಗೆ ಏನು ಹೊಗಳಿ